ಸೋಮವಾರ, ಮಾರ್ಚ್ 29, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 88 | ಪುಟ 12
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಮಲ್ಟಿಮೀಡಿಯಾ ಕೋರ್ಸ್‌ಗೆ ಸದ್ಯಕ್ಕಂತೂ ಹೆಚ್ಚು ಬೇಡಿಕೆಯಿದೆ. ಚೆನ್ನಾಗಿ ಸಂಪಾದನೆ ಮಾಡುವಂತಹ ವೃತ್ತಿ ಅವಕಾಶಗಳೂ ಸಾಕಷ್ಟಿವೆ. ವಿದ್ಯಾರ್ಥಿಗಳು ಇದರತ್ತ ಆಕರ್ಷಿತರಾಗುತ್ತಿದ್ದಾರೆ.

ಎಐಎಡಿಎಂಕೆಗೆ ಜಾತಿ ಧ್ರುವೀಕರಣದ ಏಟು 4
ಮುಂಡಗೋಡ, ಭರಮಸಾಗರದಲ್ಲಿ ಸಿಡಿಲು ಬಡಿದು ಮನೆಗೆ ಹಾನಿ
ಅನುಭವ ಮಂಟಪ
ಕಾವೇರಿ: ಎಲ್ಲಿದೆ ಹೆಚ್ಚುವರಿ ನೀರು? 'ಕೃಷಿ ಕ್ಷೇತ್ರಕ್ಕೆ ಆಧುನಿಕತೆಯ ಅಗತ್ಯವಿದೆ' 8
ವಿವಿಧೆಡೆ ಆಲಿಕಲ್ಲು ಸಹಿತ ಭಾರಿ ಮಳೆ 4A

ಪೊಲೀಸ್ ಭದ್ರತೆಯಲ್ಲಿ ಶಿವಕುಮಾರ್ ● ರಮೇಶ ಜಾರಕಿಹೊಳಿಗೆ ಎಸ್‌ಐಟಿ ನೋಟಿಸ್

ಡಿಕೆಶಿ ಕಾರಿಗೆ ಚಪ್ಪಲಿ ಎಸೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಬೆಳಗಾವಿ: ಸಿ.ಡಿ ಪ್ರಕರಣದಲ್ಲಿ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬೆಂಬಲಿಗರು ತಮ್ಮ ನಾಯಕರನ್ನು ಬೆಂಬಲಿಸಿ ಬೀದಿಗೆ ಇಳಿದಿದ್ದಾರೆ. ಬೆಳಗಾವಿಯಲ್ಲಿರುವ ಶಿವಕುಮಾರ್ ಮೇಲೆ ದಾಳಿಗೆ ಯತ್ನಿಸಿದ ರಮೇಶ ಅಭಿಮಾನಿಗಳು, ಕಾರಿನ ಮೇಲೆ ಚಪ್ಪಲಿ, ಕಲ್ಲು ತೂರಿದ್ದಾರೆ.

ಭಾನುವಾರವೂ ಸಿ.ಡಿ ವಿವಾದದ ಸುತ್ತ ಹಲವು ಘಟನಾವಳಿಗಳು ನಡೆದವು. ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಸರಣಿ ಪ್ರತಿಭಟನೆಗಳ ಮೂಲಕ ಕಾಂಗ್ರೆಸ್, ಬಿಜೆಪಿ ಕಾರ್ಯಕರ್ತರು ಬೀದಿಗೆ ಇಳಿದರು. ಪರ–ವಿರೋಧದ ಹೇಳಿಕೆಗಳೂ ದಿನವಿಡೀ ಸದ್ದು ಮಾಡಿದವು.

ಕಾರಿಗೆ ಚಪ್ಪಲಿ ಎಸೆತ: ರಮೇಶ ವಿರುದ್ಧ ಸಿ.ಡಿ ರೂಪಿಸುವ ಸಂಚಿನಲ್ಲಿ ಭಾಗಿಯಾದ ಆರೋಪಕ್ಕೆ ಗುರಿಯಾಗಿರುವ ಡಿ.ಕೆ. ಶಿವಕುಮಾರ್ ಅವರು ಬೆಳಗಾವಿ ಲೋಕಸಭಾ ಕ್ಷೇತ್ರದ ಪಕ್ಷದ ಅಭ್ಯರ್ಥಿಯ ನಾಮಪತ್ರ ಸಲ್ಲಿಕೆ ಪ್ರಯುಕ್ತ ಅಲ್ಲಿಗೆ ತೆರಳಿದ್ದು, ಶಿವಕುಮಾರ್ ಭೇಟಿ ವಿರೋಧಿಸಿ ಬೆಳಗಾವಿ ವಿಮಾನ ನಿಲ್ದಾಣದ ಸಮೀಪ ಮತ್ತು ರಮೇಶ ಅವರ ಸ್ವಕ್ಷೇತ್ರ ಗೋಕಾಕದಲ್ಲಿ ಭಾನುವಾರ ಬೃಹತ್ ಪ್ರತಿಭಟನೆಗಳು ನಡೆದವು.

4B ಪುಟ ನೋಡಿ

ಬೆಳಗಾವಿಯ ಸಾಂಬ್ರಾ ವಿಮಾನನಿಲ್ದಾಣದಿಂದ ಹೊರಬರುತ್ತಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕಾರಿಗೆ ಗೋಕಾಕದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಬೆಂಬಲಿಗರು ಭಾನುವಾರ ಕಪ್ಪು ಬಾವುಟ ತೋರಿಸಿದರು

ಸಂತ್ರಸ್ತೆ ಇಂದು ನ್ಯಾಯಾಲಯಕ್ಕೆ?

ರಮೇಶ ಜಾರಕಿಹೊಳಿ ವಿರುದ್ಧ ಅತ್ಯಾಚಾರದ ಆರೋಪ ಹೊರಿಸಿ ವಕೀಲರ ಮೂಲಕ ದೂರು ಸಲ್ಲಿಸಿರುವ ಸಂತ್ರಸ್ತ ಯುವತಿ ಸೋಮವಾರ ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಧೀಶರ ಎದುರು ತನ್ನ ಹೇಳಿಕೆಯನ್ನು ದಾಖಲಿಸುವ ಸಾಧ್ಯತೆ ಇದೆ.

ಯುವತಿಯನ್ನು ಕರೆತರುವಂತೆ ಎಸ್‌ಐಟಿ ಅಧಿಕಾರಿಗಳು ವಕೀಲ ಕೆ.ಎನ್. ಜಗದೀಶ್ ಕುಮಾರ್ ಅವರಿಗೆ ನೋಟಿಸ್ ನೀಡಿದ್ದರು. ಈ ಕುರಿತು ಫೇಸ್‌ಬುಕ್ ಲೈವ್ ಮೂಲಕ ಪ್ರತಿಕ್ರಿಯಿಸಿರುವ ವಕೀಲ, 'ಸಂತ್ರಸ್ತೆಗೆ ತನಿಖಾಧಿಕಾರಿಗಳ ಮೇಲೆ ವಿಶ್ವಾಸವಿಲ್ಲ. ಆದ್ದರಿಂದ ಸೋಮವಾರ ನೇರವಾಗಿ ನ್ಯಾಯಾಧೀಶರ ಎದುರು ಹಾಜರಾಗಿ ಹೇಳಿಕೆ ನೀಡಲಿದ್ದಾರೆ' ಎಂದು ತಿಳಿಸಿದ್ದಾರೆ.

ರಮೇಶಗೆ ಪೊಲೀಸರ ನೋಟಿಸ್: ಈ ಮಧ್ಯೆ ರಮೇಶ ಜಾರಕಿಹೊಳಿ ಅವರಿಗೆ ಪೊಲೀಸರು ಭಾನುವಾರ ಸಂಜೆ ನೋಟಿಸ್ ನೀಡಿದ್ದು, ಸೋಮವಾರ ಬೆಳಿಗ್ಗೆ 11ಕ್ಕೆ ವಿಚಾರಣೆಗೆ ಹಾಜರಾಗಲು ಸೂಚಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 2,4B

'ಬಿಜೆಪಿ ಪ್ರಾಯೋಜಿತ ಗೂಂಡಾಗಿರಿ'

'ರಮೇಶ ಜಾರಕಿಹೊಳಿ ಅಭಿಮಾನಿಗಳೆಂದು ಹೇಳಿಕೊಂಡು ಡಿ.ಕೆ. ಶಿವಕುಮಾರ್ ಕಾರಿನ ಮೇಲೆ ಕಲ್ಲೆಸೆದು ಪುಂಡಾಟಿಕೆ ನಡೆಸಿರುವುದು ಖಂಡನೀಯ. ಇದು ಬಿಜೆಪಿ ಪ್ರಾಯೋಜಿತ ಗೂಂಡಾಗಿರಿ. ರಾಜ್ಯದ ಜನತೆ ಗಮನಿಸುತ್ತಿದ್ದಾರೆ. ಎಚ್ಚರ ಇರಲಿ'

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

'ಜೆಡ್ ಪ್ಲಸ್ ಭದ್ರತೆ ಒದಗಿಸಿ'

'ಎಸ್‌ಐಟಿಯಿಂದ ಸಂತ್ರಸ್ತೆಗೆ ನ್ಯಾಯ ದೊರಕುವ ನಂಬಿಕೆ ಇಲ್ಲ. ಯುವತಿಗೆ ಜೆಡ್ ಪ್ಲಸ್ ಭದ್ರತೆ ನೀಡಿ, ನ್ಯಾಯಾಧೀಶರ ಎದುರು ಹಾಜರುಪಡಿಸಬೇಕು. ಅಲ್ಲಿಯೇ ಹೇಳಿಕೆ ದಾಖಲಿಸಿಕೊಂಡು ನೊಂದ ಯುವತಿಗೆ ನ್ಯಾಯ ದೊರಕಿಸುವ ಕೆಲಸ ಮಾಡಬೇಕು'

ಪುಷ್ಪಾ ಅಮರನಾಥ್, ರಾಜ್ಯ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ

'ಸಿದ್ದರಾಮಯ್ಯಗೆ ನೆನಪಿನ ಶಕ್ತಿ ಕಡಿಮೆ'



'ಸಿದ್ದರಾಮಯ್ಯ ಅವರಿಗೆ ನೆನಪಿನ ಶಕ್ತಿ ಕಡಿಮೆ. ಮೇಟಿ ಪ್ರಕರಣದಲ್ಲಿ ಸಿಐಡಿ ತನಿಖೆಗೆ ಒಪ್ಪಿಸಿ, ಪ್ರಕರಣವನ್ನೇ ಮುಚ್ಚಿ ಹಾಕಿದ್ದರು. ಮೇಟಿ ವಿರುದ್ಧ ಎಫ್‌ಐಆರ್ ದಾಖಲಿಸಿರಲಿಲ್ಲ. ಯುವತಿ ದೂರು ಕೊಟ್ಟ ತಕ್ಷಣ ನಾವು ಎಫ್‌ಐಆರ್ ದಾಖಲಿಸಿದ್ದೇವೆ. ಪೊಲೀಸರ ನೈತಿಕ ಸ್ಥೈರ್ಯ ಕುಗ್ಗಿಸುವ ಕೆಲಸವನ್ನು ಯಾರೂ ಮಾಡಬಾರದು'

ಬಸವರಾಜ ಬೊಮ್ಮಾಯಿ, ಗೃಹ ಸಚಿವ

ಪೊಲೀಸ್ ಭದ್ರತೆಯಲ್ಲಿ ಕುಟುಂಬ

ಶನಿವಾರ ಬೆಂಗಳೂರಿನ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ಹಾಜರಾಗಿ ಹೇಳಿಕೆ ನೀಡಿದ್ದ ಸಂತ್ರಸ್ತೆಯ ಕುಟುಂಬದ ಸದಸ್ಯರು ಪೊಲೀಸ್ ಭದ್ರತೆಯಲ್ಲಿ ಬೆಳಗಾವಿಗೆ ತೆರಳಿದ್ದಾರೆ. ಅಲ್ಲಿ ತಂಗಿರುವ ಅವರಿಗೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ.

ಸರಣಿ ಕಿರೀಟ

ಪುಣೆಯಲ್ಲಿ ಭಾನುವಾರ ರಾತ್ರಿ ನಡೆದ ಇಂಗ್ಲೆಂಡ್ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯನ್ನು 2–1ರಿಂದ ಗೆದ್ದ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ, ಟ್ರೋಫಿಯನ್ನು ಬೌಲರ್ ಪ್ರಸಿದ್ಧಕೃಷ್ಣ ಅವರಿಗೆ ಹಸ್ತಾಂತರಿಸಿದರು. ಕರ್ನಾಟಕದ ಪ್ರಸಿದ್ಧಕೃಷ್ಣ ಈ ಸರಣಿಯಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು –ಎಎಫ್‌ಪಿ ಚಿತ್ರ

ಸುದ್ದಿ 10

ತವರು ಜಿಲ್ಲೆ 'ಉಸ್ತುವಾರಿ' ಆಸೆಗೆ ಸಿ.ಎಂ ತಣ್ಣೀರು?

● ಎಸ್.ರವಿಪ್ರಕಾಶ್

ಮುಖ್ಯಾಂಶಗಳು
- ಎಲ್ಲಾ ಜಿಲ್ಲೆಗಳ ಉಸ್ತುವಾರಿಗಳ ಬದಲು
- ಪಟ್ಟಿ ಸಿದ್ಧವಾಗಿದ್ದು, ಒಂದೆರಡು ದಿನಗಳಲ್ಲಿ ಆದೇಶ
- ಪಕ್ಷದ ವರಿಷ್ಠರ ಸೂಚನೆಯ ಮೇರೆಗೆ ಈ ಕ್ರಮ

ಪ್ರಜಾವಾಣಿ ವಿಶೇಷ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ ಸಂಪುಟದ ಸಚಿವರಿಗೆ ವಹಿಸಿರುವ ಜಿಲ್ಲಾ ಉಸ್ತುವಾರಿ ಹೊಣೆಯನ್ನು ಸಂಪೂರ್ಣ ಬದಲಾವಣೆ ಮಾಡಲು ತೀರ್ಮಾನಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರ ಬದಲಾವಣೆಯ ಪಟ್ಟಿ ಸಿದ್ಧವಾಗಿದೆ. ಈ ಸಂಬಂಧಿತ ಆದೇಶ ಒಂದೆರಡು ದಿನಗಳಲ್ಲಿ ಹೊರ ಬೀಳುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಯಾವುದೇ ಜಿಲ್ಲೆಗೂ ಅದೇ ಜಿಲ್ಲೆಯವರನ್ನು ಉಸ್ತುವಾರಿ ಸಚಿವರನ್ನಾಗಿ ಮಾಡುವುದಿಲ್ಲ. ಬೇರೆ ಜಿಲ್ಲೆಗಳಿಗೆ ಸೇರಿದವರನ್ನೇ ಉಸ್ತುವಾರಿ ಸಚಿವರನ್ನಾಗಿ ನೇಮಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

'ಬಿಜೆಪಿ ವರಿಷ್ಠರ ಸೂಚನೆಯ ಮೇರೆಗೆ ಮಹತ್ವದ ಬದಲಾವಣೆ ಮಾಡಲು ಮುಖ್ಯಮಂತ್ರಿ ನಿರ್ಧರಿಸಿದ್ದಾರೆ. ಬಿಜೆಪಿ ಆಡಳಿತವಿರುವ ಇತರ ರಾಜ್ಯಗಳ ಮುಖ್ಯಮಂತ್ರಿಗಳಿಗೂ ವರಿಷ್ಠರು ಇಂತಹದ್ದೇ ಸೂಚನೆ ನೀಡಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲೂ ಜಿಲ್ಲಾ ಉಸ್ತುವಾರಿಗಳ ಬದಲಾವಣೆ ನಡೆಯುತ್ತಿದೆ' ಎಂದು ಮುಖ್ಯಮಂತ್ರಿಯವರ ಆಪ್ತ ವಲಯ ತಿಳಿಸಿದೆ.

ಬೆಂಗಳೂರು ನಗರ ಸೇರಿದಂತೆ ಎಲ್ಲ ಜಿಲ್ಲೆಗಳ ಉಸ್ತುವಾರಿಗಳು ಬದಲಾಗುವರು. ಉದಾಹರಣೆಗೆ ಬೆಂಗಳೂರು ನಗರ ಜಿಲ್ಲೆಯವರನ್ನು ಹಾಸನಕ್ಕೆ ಅಥವಾ ತುಮಕೂರಿಗೆ ಉಸ್ತುವಾರಿ ಸಚಿವರನ್ನಾಗಿ ನೇಮಿಸಬಹುದು. ಕಲಬುರ್ಗಿ ಜಿಲ್ಲೆಯ ಸಚಿವರನ್ನು ಮಂಗಳೂರಿಗೆ ಉಸ್ತುವಾರಿ ಮಾಡಬಹುದು.

4B ಪುಟ ನೋಡಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–5

ಕೃಷಿ ಕಾಯ್ದೆ ಪ್ರತಿ ಸುಟ್ಟು 'ಹೋಳಿ' ಆಚರಣೆ 8

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಕೋವಿಡ್: ಸಿ.ಎಂ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸೋಂಕಿನ ಪ್ರಮಾಣ ಹೆಚ್ಚುತ್ತಿದ್ದು, ಅದನ್ನು ತಡೆಯುವ ಕುರಿತಂತೆ ಚರ್ಚಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಚಿವರು ಹಾಗೂ ವಲಯ ಉಸ್ತುವಾರಿಗಳ ಜೊತೆ ಸೋಮವಾರ ಚರ್ಚೆ ನಡೆಸಲಿದ್ದಾರೆ.

ಸಂಜೆ 5 ಗಂಟೆಗೆ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಈ ಸಭೆ ನಡೆಯಲಿದೆ. ಕೋವಿಡ್ ಸೋಂಕು ಹರಡದಂತೆ ನಿಯಂತ್ರಿಸಲು ಇನ್ನಷ್ಟು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸಭೆಯಲ್ಲಿ ಸಮಾಲೋಚನೆ ನಡೆಯಲಿದೆ. ಸಚಿವರಿಂದ ಅಭಿಪ್ರಾಯ ಪಡೆದು, ಅದನ್ನು ಜಾರಿಗೊಳಿಸುವ ಬಗ್ಗೆ ಮುಖ್ಯಮಂತ್ರಿ ನಿರ್ಧರಿಸಲಿದ್ದಾರೆ.

ಈ ಕುರಿತು ಮಾತನಾಡಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, 'ಕೊರೊನಾ ಹೆಚ್ಚಳ ಆಗುತ್ತಿದೆ. ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆಯಲಿರುವ ಸಭೆಯಲ್ಲಿ ಗೃಹ, ಕಂದಾಯ ಮತ್ತು ಶಿಕ್ಷಣ ಸಚಿವರು ಇರುತ್ತಾರೆ. ಮಹಾರಾಷ್ಟ್ರದಲ್ಲಿ ಲಾಕ್ ಡೌನ್, ಸೀಲ್ ಡೌನ್ ಗಮನಿಸಿದ್ದೇವೆ. ಈ ಎಲ್ಲ ವಿಚಾರಗಳ ಬಗ್ಗೆ ಚರ್ಚೆ ನಡೆಸುತ್ತೇವೆ' ಎಂದು ಹೇಳಿದರು.

'ಕೊರೊನಾ ನಿಯಂತ್ರಕ್ಕೆ ಈಗ ತೆಗೆದುಕೊಂಡಿರುವ ಕ್ರಮಗಳು ಸಾಕಾಗಲ್ಲ. ಗಡಿಭಾಗಗಳಲ್ಲಿ ಕಟ್ಟುನಿಟ್ಟಿನ ಕ್ರಮ, ಬೆಂಗಳೂರಿಗೆ ಬರುವವರ ಬಗ್ಗೆ ತೀವ್ರ ನಿಗಾ ಇಡಬೇಕಿದೆ. ಈ ಬಗ್ಗೆ ಗೃಹ ಸಚಿವರ ಜೊತೆ ಚರ್ಚೆ ನಡೆಸಿದ್ದೇನೆ. ಈ ಬಗ್ಗೆಯೂ ಸಭೆಯಲ್ಲಿ ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದರು.

'ಈ ಶೈಕ್ಷಣಿಕ ವರ್ಷದಿಂದ 1ರಿಂದ 9ನೇ ತರಗತಿವರೆಗೆ ಎಲ್ಲರನ್ನೂ ತೇರ್ಗಡೆ ಮಾಡಬೇಕೆಂದು ಸರ್ಕಾರ ಸೂಚಿಸಿದೆ. ಪರೀಕ್ಷೆ ಮಾಡದೆ ತೇರ್ಗಡೆ ಮಾಡುವುದರ ಬಗ್ಗೆ ಗೊತ್ತಿಲ್ಲ. ಶಿಕ್ಷಣ ಸಚಿವರ ಜೊತೆ ಚರ್ಚೆ ಮಾಡುತ್ತೇನೆ' ಎಂದು ಸುಧಾಕರ್ ತಿಳಿಸಿದರು.

2ನೇ ಅಲೆ: ಪರಿಸ್ಥಿತಿ ಹದಗೆಡುವ ಎಚ್ಚರಿಕೆ

ನವದೆಹಲಿ: ದೇಶದಲ್ಲಿ ಕೋವಿಡ್–19 ಎರಡನೇ ಅಲೆ ಬರುವ ದಿನಗಳಲ್ಲಿ ತೀವ್ರಗೊಂಡು ಪರಿಸ್ಥಿತಿ ಮತ್ತಷ್ಟು ಹದಗೆಡುವ ಸಾಧ್ಯತೆ ಇದೆ. ಸಾರ್ವಜನಿಕ ಹಾಗೂ ಖಾಸಗಿ ವಲಯದ ಆರೋಗ್ಯ ಸೇವೆಗಳನ್ನು ಇನ್ನಷ್ಟು ಸುಧಾರಿಸಬೇಕಾಗುತ್ತದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ಕೋವಿಡ್ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಐಸಿಯುನಲ್ಲಿ ದಾಖಲಾಗುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಿದ್ದು, ಈ ವಿದ್ಯಮಾನ ಎಷ್ಟು ದಿನಗಳವರೆಗೆ ಮುಂದುವರಿಯುವುದು ಎಂದು ಅಂದಾಜಿಸುವುದು ಕಷ್ಟ ಎಂದೂ ತಜ್ಞರು ಹೇಳಿದ್ದಾರೆ.

'ಐಸಿಯುನಲ್ಲಿ ದಾಖಲಿಸಿರುವ ಕೋವಿಡ್ ರೋಗಿಗಳ ಸ್ಥಿತಿ ತೀವ್ರವಾಗಿ ಹದಗೆಡುತ್ತಿದ್ದು, ಪ್ಲಾಸ್ಮಾ ಚಿಕಿತ್ಸೆಗೆ ದಿಢೀರ್ ಬೇಡಿಕೆ ಹೆಚ್ಚಾಗಿದೆ' ಎಂದು ನವದೆಹಲಿಯ ಜಾರ್ಜ್ ಇನ್‌ಸ್ಟಿಟ್ಯೂಟ್ ಫಾರ್ ಗ್ಲೋಬಲ್ ಹೆಲ್ತ್‌ನ ಹಿರಿಯ ಸಂಶೋಧಕ ಉಮ್ಮೆನ್ ಜಾನ್ ತಿಳಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 8

ಮಹಾರಾಷ್ಟ್ರ: ಲಾಕ್‌ಡೌನ್ ಸಾಧ್ಯತೆ

ಮುಂಬೈ (ಪಿಟಿಐ): ರಾಜ್ಯ ಕೋವಿಡ್–19 ಕಾರ್ಯಪಡೆಯ ಶಿಫಾರಸಿನ ಅನ್ವಯ ಆರ್ಥಿಕತೆಯ ಮೇಲೆ ಕನಿಷ್ಠ ಪರಿಣಾಮ ಬೀರುವಂತಹ ಲಾಕ್‌ಡೌನ್ ಅನುಷ್ಠಾನಕ್ಕೆ ಯೋಜನೆಯನ್ನು ಸಿದ್ಧಪಡಿಸುವಂತೆ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಭಾನುವಾರ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

8

ಚಿನಕುರಳಿ
ಪ್ರಕಾಶ್ ಶೆಟ್ಟಿ

ಕುತೂಹಲ ಕೆರಳಿಸಿದ ಶರದ್ ಪವಾರ್– ಅಮಿತ್ ಶಾ ಭೇಟಿ



ಪವಾರ್



ಅಮಿತ್ ಶಾ

ಮುಂಬೈ (ಪಿಟಿಐ): ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ಹಿರಿಯ ಮುಖಂಡ ಪ್ರಫುಲ್ ಪಟೇಲ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಅಹಮದಾಬಾದ್‌ನಲ್ಲಿ ಉದ್ಯಮಿಯೊಬ್ಬರ ಮನೆಯಲ್ಲಿ ಭೇಟಿಯಾಗಿದ್ದಾರೆ ಎಂಬ ಸುದ್ದಿಯು ಭಾರಿ ಕುತೂಹಲಕ್ಕೆ ಕಾರಣವಾಗಿದೆ. ಮಹಾರಾಷ್ಟ್ರ ರಾಜಕಾರಣದಲ್ಲಿ ಭಾರಿ ಬದಲಾವಣೆಯ ಸೂಚನೆ ಇದು ಎಂಬ ಚರ್ಚೆಗಳು ರಾಜಕೀಯ ವಲಯದಲ್ಲಿ ನಡೆಯುತ್ತಿವೆ.

ಅಮಿತ್ ಶಾ ಅವರು ದೆಹಲಿಯಲ್ಲಿ ಭಾನುವಾರ ನಡೆಸಿದ ಮಾಧ್ಯಮಗೋಷ್ಠಿಯಲ್ಲಿ ಈ ಭೇಟಿಯ ಬಗ್ಗೆ ಪತ್ರಕರ್ತರು ಪ್ರಶ್ನೆ ಕೇಳಿದ್ದಾರೆ. ಈ ಪ್ರಶ್ನೆಗೆ ಶಾ ನೇರ ಉತ್ತರ ನೀಡಿಲ್ಲ. 'ಎಲ್ಲವನ್ನೂ ಬಹಿರಂಗಪಡಿಸಲಾಗದು' ಎಂದಷ್ಟೇ ಹೇಳಿದರು. ಅವರು ಭೇಟಿ ಸುದ್ದಿಯನ್ನು ಅಲ್ಲಗಳೆದಿಲ್ಲ.

ಆದರೆ, ಇಂತಹ ಭೇಟಿ ನಡೆದೇ ಇಲ್ಲ ಎಂದು ಎನ್‌ಸಿಪಿ ಮುಖಂಡ ಮತ್ತು ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್ ಹೇಳಿದ್ದಾರೆ. ಇಂತಹ ವದಂತಿಗಳನ್ನು ಹಬ್ಬಿಸಿ ಗೊಂದಲ ಮೂಡಿಸುವ ಪ್ರಯತ್ನ ನಡೆಯುತ್ತಿದೆ. ಪತ್ರಕರ್ತರೊಬ್ಬರು ಇಂತಹ ಪ್ರಶ್ನೆ ಕೇಳುವಂತೆ ಮಾಡಿದ ಶಾ ಅವರು ಗೊಂದಲ ಸೃಷ್ಟಿಸಿದ್ದಾರೆ ಎಂದು ಅವರು ಹೇಳಿದ್ದಾರೆ.

ಕಳೆದ 15 ತಿಂಗಳಿನಿಂದ ಕೆಲವರು ಹಗಲುಗನಸು ಕಾಣುತ್ತಿದ್ದಾರೆ ಎಂದು ಪವಾರ್ ಅವರ ನಿಕಟವರ್ತಿ ಮತ್ತು ಸಚಿವ ಡಾ. ಜಿತೇಂದ್ರ ಅವ್‌ಹದ್ ಹೇಳಿದ್ದಾರೆ. 'ಪವಾರ್ ಅವರು ಹಿರಿಯ ನಾಯಕ. ಹಲವು ಮಂದಿಯ ಜತೆಗೆ ಅವರಿಗೆ ಉತ್ತಮ ಸಂಬಂಧ ಇದೆ. ಅವರ ಮನೆಗಳಿಗೂ ಅವರು ಭೇಟಿ ಕೊಟ್ಟಿದ್ದಾರೆ. ಎಲ್ಲ ಪಕ್ಷಗಳಲ್ಲಿಯೂ ಅವರಿಗೆ ಗೆಳೆಯರಿದ್ದಾರೆ' ಎಂದು ಅವ್‌ಹದ್ ಹೇಳಿದ್ದಾರೆ.

8ನೇ ಪುಟ ನೋಡಿ

ಹಳೆ ವಾಹನಗಳ ಮೇಲೆ 'ಹಸಿರು ತೆರಿಗೆ' ವಿಧಿಸುವ ಪ್ರಸ್ತಾವ

ಹಳೆಯ ವಾಹನ: ಕರ್ನಾಟಕವೇ ಮುಂದು!

ನವದೆಹಲಿ (ಪಿಟಿಐ): 15 ವರ್ಷಗಳಿಗಿಂತ ಹಳೆಯದಾದ ನಾಲ್ಕು ಕೋಟಿಗೂ ಹೆಚ್ಚು ವಾಹನಗಳು ದೇಶದಲ್ಲಿ ಇವೆ. ಇವುಗಳಲ್ಲಿ 70 ಲಕ್ಷಕ್ಕೂ ಹೆಚ್ಚಿನ ವಾಹನಗಳು ಕರ್ನಾಟಕದಲ್ಲೇ ಇವೆ. ಈ ವಾಹನಗಳು 'ಹಸಿರು ತೆರಿಗೆ' ವ್ಯಾಪ್ತಿಗೆ ಬರುತ್ತವೆ.

ಹಳೆಯ ವಾಹನಗಳ ಅಂಕಿ–ಅಂಶಗಳನ್ನು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಕಲೆಹಾಕಿ, ಡಿಜಿಟಲ್ ರೂಪಕ್ಕೆ ತಂದಿದೆ. ಆಂಧ್ರಪ್ರದೇಶ, ಮಧ್ಯಪ್ರದೇಶ, ತೆಲಂಗಾಣ ಮತ್ತು ಲಕ್ಷದ್ವೀಪಗಳಲ್ಲಿ ಇರುವ ಇಂತಹ ವಾಹನಗಳ ಮಾಹಿತಿ ಲಭ್ಯವಿಲ್ಲ.

15 ವರ್ಷಗಳಿಗಿಂತ ಹಳೆಯದಾದ ವಾಹನಗಳ ಮೇಲೆ 'ಹಸಿರು ತೆರಿಗೆ' ವಿಧಿಸುವ ಪ್ರಸ್ತಾವ ಇದೆ. ನಾಲ್ಕು ಕೋಟಿ ವಾಹನಗಳ ಪೈಕಿ ಎರಡು ಕೋಟಿ ವಾಹನಗಳು 20 ವರ್ಷಕ್ಕಿಂತ ಹಳೆಯವು. ಉತ್ತರ ಪ್ರದೇಶದಲ್ಲಿ ಇರುವ 56.54 ಲಕ್ಷ ವಾಹನಗಳು 15 ವರ್ಷಕ್ಕಿಂತ ಹಳೆಯವು. ಇವುಗಳಲ್ಲಿ 24.55 ಲಕ್ಷ ವಾಹನಗಳು 20 ವರ್ಷಕ್ಕೂ ಹಳೆಯವು.

ಹಳೆಯ ವಾಹನಗಳು ಹೆಚ್ಚಿರುವ ಪಟ್ಟಿಯಲ್ಲಿ ದೆಹಲಿಯು ಮೂರನೆಯ ಸ್ಥಾನದಲ್ಲಿ ಇದೆ. ಇಲ್ಲಿ 49.93 ಲಕ್ಷ ವಾಹನಗಳು 15 ವರ್ಷಗಳಿಗಿಂತ ಹಳೆಯವು. ಇವುಗಳಲ್ಲಿ 35.11 ಲಕ್ಷ ವಾಹನಗಳು 20 ವರ್ಷಗಳಿಗಿಂತ ಹಳೆಯವು.

ಹೈಬ್ರಿಡ್ ವಾಹನಗಳು, ವಿದ್ಯುತ್ ಚಾಲಿತ ವಾಹನಗಳು, ಸಿಎನ್‌ಜಿ, ಎಥೆನಾಲ್, ಎಲ್‌ಪಿಜಿ ಬಳಸುವ ವಾಹನಗಳಿಗೆ 'ಹಸಿರು ತೆರಿಗೆ'ಯಿಂದ ವಿನಾಯಿತಿ ಇರುತ್ತದೆ. ಹಸಿರು ತೆರಿಗೆ ಮೂಲಕ ಸಂಗ್ರಹ ಆಗುವ ಹಣವನ್ನು ಪರಿಸರ ಮಾಲಿನ್ಯ ಕಡಿಮೆ ಮಾಡಲು ಬಳಸಲಾಗುತ್ತದೆ ಎಂದು ಸಚಿವಾಲಯ ಹೇಳಿದೆ.

ಕೃಷಿ ಚಟುವಟಿಕೆಗಳಲ್ಲಿ ಬಳಕೆಯಾಗುವ ಟ್ರ್ಯಾಕ್ಟರ್‌ಗಳು, ಬೆಳೆ ಕೊಯ್ಲಿನ ಯಂತ್ರಗಳು, ಟಿಲ್ಲರ್‌ಗಳಿಗೆ ಹಸಿರು ತೆರಿಗೆ ಅನ್ವಯ ಆಗುವುದಿಲ್ಲ. ಹಸಿರು ತೆರಿಗೆ ವಿಧಿಸುವುದರಿಂದ, ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ವಾಹನಗಳನ್ನು ಜನ ಬಳಸುವುದು ಕಡಿಮೆ ಆಗಬಹುದು. ಅಲ್ಲದೆ, ಅವರು ಕಡಿಮೆ ಮಾಲಿನ್ಯ ಉಂಟುಮಾಡುವ ವಾಹನಗಳ ಬಳಸುವಂತೆ ಆಗುತ್ತದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಈ ಹಿಂದೆ ಹೇಳಿದ್ದರು.

ಹಳೆಯ ವಾಹನಗಳ ಅಂಕಿ-ಅಂಶಗಳು

ರಾಜ್ಯ	ವಾಹನಗಳು
ಕರ್ನಾಟಕ	70 ಲಕ್ಷಕ್ಕೂ ಹೆಚ್ಚು
ಉತ್ತರ ಪ್ರದೇಶ	56.54 ಲಕ್ಷ
ದೆಹಲಿ	49.93 ಲಕ್ಷ

ಹಜ್ ಭವನ ಸಿಸಿಸಿ: 30 ಮಂದಿ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಜ್‌ಭವನದಲ್ಲಿ ತೆರೆಯಲಾಗಿರುವ ಕೋವಿಡ್ ಆರೈಕೆ ಕೇಂದ್ರದಲ್ಲಿ (ಸಿಸಿಸಿ) ಭಾನುವಾರ 30 ಜನ ದಾಖಲಾಗಿದ್ದಾರೆ. ಇವರೆಲ್ಲರೂ ಕೊರೊನಾ ಸೋಂಕಿನ ಸೌಮ್ಯ ಲಕ್ಷಣ ಹೊಂದಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ನಗರದ ಹಜ್‌ಭವನ ಸೇರಿದಂತೆ ಮೂರು ಕೋವಿಡ್ ಆರೈಕೆ ಕೇಂದ್ರವನ್ನು ಪಾಲಿಕೆ ಮತ್ತೆ ಪ್ರಾರಂಭಿಸಿದೆ.

ಮಾ.28ರಂದು ಈ ಕೇಂದ್ರದಲ್ಲಿ 22 ಪುರುಷರು, 8 ಮಹಿಳೆಯರು ದಾಖಲಾಗಿದ್ದಾರೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,25,173 ಒಟ್ಟು ಸೋಂಕಿತರು



ಭಾನುವಾರದ ಏರಿಕೆ

2,004 ದೃಢಪಟ್ಟ ಪ್ರಕರಣ

786 ಗುಣಮುಖ | **07** ಸಾವು

CONNECT ಕ್ಲಾಸಿಫೈಡ್ಸ್

ಸಿ.ಡಿ ಪ್ರಕರಣ: ರಾಷ್ಟ್ರಮಟ್ಟದಲ್ಲಿ ಕರ್ನಾಟಕದ ಮಾನ ಹರಾಜು– ಸಿದ್ದರಾಮಯ್ಯ

‘ಸಂತ್ರಸ್ತೆ ಪತ್ತೆಗೆ ಪೊಲೀಸರು ವಿಫಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿ.ಡಿ ಪ್ರಕರಣದಿಂದ ರಾಷ್ಟ್ರಮಟ್ಟದಲ್ಲಿ ಕರ್ನಾಟಕದ ಮಾನ ಹರಾಜು ಆಗುತ್ತಿರುವುದಕ್ಕೆ ರಾಜ್ಯ ಸರ್ಕಾರ ಮತ್ತು ಪೊಲೀಸರ ವೈಫಲ್ಯವೇ ಕಾರಣ. ಪ್ರಕರಣ ನಡೆದು 26 ದಿನಗಳು ಕಳೆದರೂ ಸಂತ್ರಸ್ತೆಯನ್ನು ಪತ್ತೆಹಚ್ಚಲು ಪೊಲೀಸರಿಗೆ ಆಗದಿರುವುದು ನಾಚಿಕೆಗೇಡಿನ ಸಂಗತಿ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, ‘ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿರುವ ಸಿ.ಡಿ ಹಗರಣದ ತನಿಖೆ ತಾರ್ಕಿಕ ಅಂತ್ಯ ಕಾಣಲು ಸಂತ್ರಸ್ತೆ ಪೊಲೀಸರ ಮುಂದೆ ಹಾಜರಾಗಿ ಹೇಳಿಕೆ ನೀಡಬೇಕು. ಕಾನೂನುಬದ್ಧವಾದ ಅವಳ ಹಕ್ಕನ್ನು ಚಲಾಯಿಸದಂತೆ ತಡೆಯುತ್ತಿರುವವರು ಯಾರು’ ಎಂದು ಪ್ರಶ್ನಿಸಿದ್ದಾರೆ.

‘ಸಂತ್ರಸ್ತೆ ಅಜ್ಞಾತ ಸ್ಥಳದಿಂದ ನಿರಂತರವಾಗಿ ತನ್ನ ಹೇಳಿಕೆಗಳ ಸಿ.ಡಿಗಳನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡುತ್ತಿದ್ದಾಳೆ. ತನ್ನ ವಕೀಲನ ಮೂಲಕ ಪೊಲೀಸರಿಗೆ ದೂರು ಕಳುಹಿಸಿಕೊಡುತ್ತಿದ್ದಾಳೆ. ತಂದೆ-ತಾಯಿ ಜೊತೆ ಮಾತನಾಡುತ್ತಿದ್ದಾಳೆ. ಹೀಗಿದ್ದರೂ ಪೊಲೀಸರ ಕೈಗೆ ಮಾತ್ರ ಸಿಗುತ್ತಿಲ್ಲ ಎಂದರೆ ಏನು ಅರ್ಥ’ ಎಂದೂ ಪ್ರಶ್ನಿಸಿದ್ದಾರೆ.

‘ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಯುವತಿಯದ್ದೆನ್ನಲಾದ ಹೇಳಿಕೆಗಳನ್ನು ಗಮನಿಸಿದರೆ ಆಕೆಗೆ ರಾಜ್ಯ ಸರ್ಕಾರದ ಮೇಲಾಗಲಿ, ಪೊಲೀಸರ ಮೇಲಾಗಲಿ ನಂಬಿಕೆ ಇಲ್ಲ. ಗೃಹ ಸಚಿವ ಬೊಮ್ಮಾಯಿ ಈ ಬಗ್ಗೆ ಗಮನಹರಿಸಬೇಕು’ ಎಂದಿದ್ದಾರೆ.

‘ಪೊಲೀಸ್ ಇಲಾಖೆ ಸೇರಿದಂತೆ ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದು ಬಿದ್ದಿರುವುದಕ್ಕೆ ಈ ಹಗರಣ ಸಾಕ್ಷಿ. ಯುವತಿಯನ್ನು ಇಷ್ಟು ದಿನಗಳ ನಂತರವೂ ಪತ್ತೆ ಹಚ್ಚಲಾಗಿಲ್ಲವೆಂದರೆ ಏನು ಅರ್ಥ. ಆಕೆಯೇನು ವಿಜಯಮಲ್ಯನೊ ಇಲ್ಲವೇ ನೀರವ್ ಮೋದಿಯೊ’ ಎಂದೂ ಸಿದ್ದರಾಮಯ್ಯ ವ್ಯಂಗ್ಯವಾಗಿ ಪ್ರಶ್ನಿಸಿದ್ದಾರೆ.

‘ತಾಕತ್ತಿದ್ದರೆ ಕನಕಪುರಕ್ಕೆ ಬನ್ನಿ’

ಕನಕಪುರ: ‘ಮಾಜಿ ಸಚಿವ ರಮೇಶ ಜಾರಕಿಹೊಳಿ ಕನಕಪುರಕ್ಕೆ ಬಂದರೆ ಇಲ್ಲಿನ ಸ್ವಾಭಿಮಾನಿ ಮಹಿಳೆಯರು ಚಪ್ಪಲಿ, ಪೊರಕೆಯಿಂದ ಸ್ವಾಗತ ಮಾಡುತ್ತಾರೆ’ ಎಂದು ವಿಧಾನ ಪರಿಷತ್ ಸದಸ್ಯ ಎಸ್.ರವಿ ಎಚ್ಚರಿಸಿದ್ದಾರೆ.

‘ಸಂತ್ರಸ್ತರಿಗೆ ನೆರವು ನೀಡುವುದು ವಿರೋಧ ಪಕ್ಷದ ನಾಯಕರ ಜವಾಬ್ದಾರಿ. ಡಿ.ಕೆ.ಶಿವಕುಮಾರ್ ಒಂದು ಪಕ್ಷದ ಅಧ್ಯಕ್ಷರಾಗಿ ನೊಂದ ಯುವತಿಯ ನೆರವಿಗೆ ನಿಂತರೆ ತಪ್ಪೇನು?’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

‘ಜಾರಕಿಹೊಳಿ ಕನಕಪುರಕ್ಕೆ ಬಂದು ಡಿ.ಕೆ.ಶಿವಕುಮಾರ್ ಅವರನ್ನು ಸೋಲಿಸುವುದಾಗಿ ಹೇಳಿದ್ದಾರೆ. ಅವರಿಗೆ ತಾಕತ್ತು ಇದ್ದರೆ ಇಲ್ಲಿಗೆ ಬರಲಿ.’ ಎಂದು ಸವಾಲು ಹಾಕಿದರು.

ಬಿಜೆಪಿ 17 ಮುಖಂಡರ ಲೈಂಗಿಕ ಹಗರಣದ ಪಟ್ಟಿ ಇದೆ: ಲಕ್ಷ್ಮಣ್

ಮೈಸೂರು: ‘ಸಿ.ಡಿ ಪ್ರಕರಣ ಕುರಿತು ಮುಖ್ಯಮಂತ್ರಿ ಯಡಿಯೂರಪ್ಪ ಮೌನಿಯಾಗಿದ್ದಾರೆ. ತಮ್ಮನ್ನು ಕುರಿತ ಸಿ.ಡಿ., ಅವರ ಬಳಿ ಇರುವ ಕಾರಣ ಗಪ್‌ಚುಪ್ ಆಗಿದ್ದಾರೆ’ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಹೇಳಿದರು.

‘2009ರಿಂದ ಇಲ್ಲಿವರೆಗೆ ಲೈಂಗಿಕ ಪ್ರಕರಣದಲ್ಲಿ ಸಿಲುಕಿಕೊಂಡ ಬಿಜೆಪಿ ಶಾಸಕರು, ಸಂಸದರು ಹಾಗೂ ಮುಖಂಡರ 17 ಮಂದಿ ಪಟ್ಟಿ ನಮ್ಮ ಬಳಿ ಇದೆ. ಈಗ ಆರು ಮಂದಿ ಹೊಸದಾಗಿ ಸೇರಿದ್ದು, ನ್ಯಾಯಾಲಯದಿಂದ ಪ್ರತಿಬಂಧಕಾಜ್ಞೆ ತಂದಿದ್ದಾರೆ’ ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಯಡಿಯೂರಪ್ಪನವರೇ, ನಿಮ್ಮ ಸಿ.ಡಿ ಇದೆ ಎಂದು ಹೆದರಿಕೊಳ್ಳಬೇಡಿ. ನಿಮ್ಮನ್ನು ರಕ್ಷಣೆ ಮಾಡುವ ಕೆಲಸ ನಾವು ಮಾಡುತ್ತೇವೆ. ರಮೇಶ ಜಾರಕಿಹೊಳಿ ಅವರನ್ನು ಕೂಡಲೇ ಬಂಧಿಸಿ’ ಎಂದು ಆಗ್ರಹಿಸಿದರು.

‘ನೋವಿನ ನಡುವೆ ಖುಷಿ ಕಂಡ ಚೊಕ್ಕಾಡಿ’

ಹಿರಿಯ ವಿದ್ವಾಂಸ ವಿವೇಕ ರೈ ಮೆಚ್ಚುಗೆ • ಸುಬ್ರಾಯ ಚೊಕ್ಕಾಡಿ ಅನುಭವ ಕಥನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಕ್ಷಿಣ ಕನ್ನಡದ ಸಣ್ಣಗ್ರಾಮದಿಂದ ಜೀವನ ಪಯಣವನ್ನು ಪ್ರಾರಂಭಿಸಿದ ಸುಬ್ರಾಯ ಚೊಕ್ಕಾಡಿ ಅವರು, ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಸಾಂಸ್ಕೃತಿಕ ನಕಾಶೆಯಾಗಿ ರೂಪುಗೊಂಡರು. ನೋವಿನ ಗಾಥೆಯ ನಡುವೆಯೂ ಅವರು ಜೀವನ ಖುಷಿಯನ್ನು ಕಂಡುಕೊಂಡರು’ ಎಂದು ಹಿರಿಯ ವಿದ್ವಾಂಸ ಬಿ.ಎ. ವಿವೇಕ ರೈ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಕಾಸ ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಅಂಜನಾ ಹೆಗಡೆ ಅವರು ನಿರೂಪಿಸಿರುವ ಸುಬ್ರಾಯ ಚೊಕ್ಕಾಡಿ ಅವರ ಅನುಭವ ಕಥನ ‘ಕಾಲದೊಂದೊಂದೇ ಹನಿ...’ ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಜೀವನದಲ್ಲಿ ಬಂದ ಸವಾಲುಗಳು ಮತ್ತು ನೋವುಗಳನ್ನು ಚೊಕ್ಕಾಡಿ ಎದುರಿಸುತ್ತಾ ಸಾಗಿದರು. ಆದರೆ, ಅವರು ಯಾರ ಬಗ್ಗೆಯೂ ಅನುಭವ ಕಥನದಲ್ಲಿ ಕಹಿಯ ಭಾವನೆಯನ್ನು ವ್ಯಕ್ತಪಡಿಸುವುದಿಲ್ಲ. ಇದು ಅವರ ವ್ಯಕ್ತಿತ್ವವನ್ನು ಸೂಚಿಸುತ್ತದೆ. ಎಲ್ಲಿಯೂ ರಾಜಿ ಮಾಡಿಕೊಳ್ಳದ, ತನ್ನತನವನ್ನು ಬಿಟ್ಟುಕೊಡದ ಅವರಲ್ಲಿ ಬಹುತ್ವವನ್ನು ಕಾಣಬಹುದಾಗಿದೆ. ಹೀಗಾಗಿಯೇ, ಚೊಕ್ಕಾಡಿ ಅವರು ಎಲ್ಲ ಕಾಲಕ್ಕೂ ಬೆರಗು ಮತ್ತು ವಿಸ್ಮಯ’ ಎಂದು ಹೇಳಿದರು.

ಹಿರಿಯ ಪತ್ರಕರ್ತ ಜೋಗಿ, ‘ಚೊಕ್ಕಾಡಿ ಅವರು ಬದುಕಿನ ಜತೆಗೆ ಪ್ರಣಯ ಮಾಡುತ್ತಾ ಸಾಗಿದ್ದಾರೆ. ಅವಮಾನಗಳನ್ನು ಮೀರುವಂತಹ ಹೋರಾಟಗಳನ್ನು ಮಾಡಿ, ಗೆಲುವನ್ನು ಪಡೆದುಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ 25–30 ವರ್ಷಗಳಿಗೇ ಆತ್ಮಕಥನವನ್ನು ಬರೆಯುತ್ತಾರೆ. ಆದರೆ, 82 ವರ್ಷಗಳ ಬಳಿಕ ಚೊಕ್ಕಾಡಿ ಅವರ ಅನುಭವ ಕಥನ ಹೊರಬಂದಿದೆ. ಅವರಿಂದಾಗಿ ಊರು ಕೂಡ ಹೆಸರುವಾಸಿಯಾಗಿದ್ದು, ಆ ಊರಿನ ಬಗ್ಗೆಯೇ ಕವಿತೆಗಳು ಬರುವಂತಾಗಿದೆ’ ಎಂದು ತಿಳಿಸಿದರು.

ಕೋವಿಡ್ ಉತ್ಪನ್ನ: ಕವಿ ಸುಬ್ರಾಯ ಚೊಕ್ಕಾಡಿ, ‘ಆತ್ಮಕಥೆಯನ್ನು ಬರೆಯುವಂತೆ ಹಲವಾರು ಮಂದಿ ಒತ್ತಾಯಿಸುತ್ತಿದ್ದರು. ಆದರೆ, ಕೈನೋವಿನಿಂದ ನನಗೆ ಸಾಧ್ಯವಿಲ್ಲ ಎಂದು ತಿಳಿಸಿದ್ದೆ. ಬೇರೆಯವರ ಬಳಿ ಬರೆಸಲು ಸೂಕ್ತ ಸಮಯಾವಕಾಶ ಕೂಡ ಇರುತ್ತಿರಲಿಲ್ಲ. ಕೋವಿಡ್ ಕಾಣಿಸಿಕೊಂಡ ಬಳಿಕ ದಿನದ ಬಹುತೇಕ ಸಮಯ ಮನೆಯಲ್ಲಿಯೇ ಇರಬೇಕಾಯಿತು. ಇದರಿಂದಾಗಿ ಮೂರೂವರೆ ತಿಂಗಳಲ್ಲಿ ಬರಹಗಾರರೊಂದಿಗೆ ನನ್ನ ಅನುಭವಗಳನ್ನು ಹಂಚಿಕೊಳ್ಳಲು ಸಾಧ್ಯವಾಯಿತು. ಹಾಗಾಗಿ, ಇದು ಕೋವಿಡ್ ಉತ್ಪನ್ನ’ ಎಂದರು.

ವಿಮರ್ಶಕ ಎಸ್.ಆರ್. ವಿಜಯಶಂಕರ, ‘ವಿಮರ್ಶೆ ಪ್ರಜ್ಞೆಯನ್ನು ಪ್ರೇರೇಪಿಸುವ ಜತೆಗೆ ವಿಮರ್ಶೆ ಎಂದರೇನು ಎಂಬುದನ್ನು ಚೊಕ್ಕಾಡಿ ಕಲಿಸಿಕೊಟ್ಟಿದ್ದರು’ ಎಂದರು.

ಕಾರ್ಯಕ್ರಮದಲ್ಲಿ ಬಿ.ಎ. ವಿವೇಕ ರೈ ಅವರು (ಎಡದಿಂದ ಐದನೆಯವರು) ಸುಬ್ರಾಯ ಚೊಕ್ಕಾಡಿ (ಎಡದಿಂದ ನಾಲ್ಕನೆಯವರು) ಅವರ ಅನುಭವ ಕಥನ ‘ಕಾಲದೊಂದೊಂದೇ ಹನಿ...’ ಕೃತಿಯನ್ನು ಲೋಕಾರ್ಪಣೆ ಮಾಡಿದರು. (ಎಡದಿಂದ) ಹಿರಿಯ ಪತ್ರಕರ್ತೆ ಆರ್.ಪೂರ್ಣಿಮಾ, ಕೃತಿಯ ನಿರೂಪಕಿ ಅಂಜನಾ ಹೆಗಡೆ, ವಿಮರ್ಶಕ ಎಸ್.ಆರ್. ವಿಜಯಶಂಕರ, ಕವಿ ನಾ. ದಾಮೋದರ ಶೆಟ್ಟಿ ಮತ್ತು ಜೋಗಿ ಇದ್ದರು – ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಪುಸ್ತಕ: ‘ಕಾಲದೊಂದೊಂದೇ ಹನಿ...’
ಕೃತಿ ನಿರೂಪಣೆ: ಅಂಜನಾ ಹೆಗಡೆ
ಪುಟಗಳು: 364, **ಬೆಲೆ:** ₹ 350
ಪ್ರಕಾಶನ: ವಿಕಾಸ ಪ್ರಕಾಶನ

ಬಿಬಿಎಂಪಿ ಬಜೆಟ್: ಮಾಜಿ ಮೇಯರ್‌ಗಳು ಹೇಳುವುದೇನು ?

‘ಇದು ಜನಪರ ಬಜೆಟ್ ಅಲ್ಲ’

ಜನರ ಸಲಹೆ ಪಡೆಯದ, ಜನಪ್ರತಿನಿಧಿಗಳಲ್ಲದವರು ರೂಪಿಸಿದ ಈ ಬಜೆಟ್ ಜನಪರವಾಗಿಲ್ಲ. ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಬಜೆಟ್ ಮಂಡಿಸುವ ಅವಶ್ಯಕತೆ ಏನಿತ್ತು? ಅನುದಾನ ಬಳಸಲು ಅನುಮೋದನೆ ತೆಗೆದುಕೊಂಡಿದ್ದರೆ ಸಾಕಿತ್ತು. ತೆರಿಗೆ ಹಾಕದಿರುವುದನ್ನೇ ದೊಡ್ಡದಾಗಿ ಬಿಂಬಿಸಲಾಗುತ್ತಿದೆ. ಆದರೆ, ಬಿಬಿಎಂಪಿಯ ಪ್ರತಿ ಬಜೆಟ್‌ನಲ್ಲಿ ತೆರಿಗೆ ಹಾಕುವುದಿಲ್ಲ. ಐದು ವರ್ಷಗಳಿಗೊಮ್ಮೆ ಮಾತ್ರ ತೆರಿಗೆ ಪ್ರಮಾಣ ಹೆಚ್ಚು ಮಾಡಲಾಗುತ್ತದೆ. ಇನ್ನು, ವಿವಿಧ ಕಾಮಗಾರಿ ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ₹2,000 ಕೋಟಿ ಬಾಕಿ ಇದೆ. ಯಾವ ಪುರುಷಾರ್ಥಕ್ಕೆ ಈ ಬಜೆಟ್ ಬೇಕಾಗಿತ್ತು ?

ರಾಮಚಂದ್ರಪ್ಪ

‘ಅಭಿವೃದ್ಧಿಗೆ ಒತ್ತು ನೀಡಿಲ್ಲ’

ಜನಪ್ರತಿನಿಧಿಗಳೇ ಇಲ್ಲದೆ, ಆಡಳಿತಾಧಿಕಾರಿಯವರು ಮಂಡಿಸಿದ ಬಜೆಟ್ ಜನಪರವಾಗಿ ಇಲ್ಲ. ನಗರದ ಅಭಿವೃದ್ಧಿಗೆ ಒತ್ತು ಕೊಡುವ ಅಂಶಗಳೂ ಇದರಲ್ಲಿ ಇಲ್ಲ. ರಾಜ್ಯ ಸರ್ಕಾರದಿಂದ ರಾಜ್ಯದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಗೆ ಶೇ 12ರಷ್ಟು ಅನುದಾನ ತೆಗೆದಿಡಲಾಗುತ್ತದೆ. ಆದರೆ, ಬಿಬಿಎಂಪಿಗೆ ಹೆಚ್ಚುವರಿಯಾಗಿ ಶೇ 1ರಷ್ಟು ನೀಡಬೇಕು ಎಂದು ಹಣಕಾಸು ನಿಗಮದ ಶಿಫಾರಸ್ಸಿನ ಅನ್ವಯ ಸರ್ಕಾರ ಆದೇಶಿಸಿದೆ. ಆದರೆ, ಈ ಬಜೆಟ್‌ನಲ್ಲಿ ಆ ಅನುದಾನದ ಪ್ರಸ್ತಾಪವೇ ಇಲ್ಲ.

ಪಿ.ಆರ್. ರಮೇಶ್

‘ಬಜೆಟ್ ಅನುಷ್ಠಾನ ಅನುಮಾನ’

ಚುನಾಯಿತ ಜನಪ್ರತಿನಿಧಿಗಳು ಅಂದರೆ ಮೇಯರ್ ಅವರು ಮಂಡಿಸಿದ ಬಜೆಟ್‌ನ ಕಾರ್ಯಕ್ರಮಗಳ ಅನುಷ್ಠಾನವೇ ಸರಿಯಾಗಿ ಆಗುತ್ತಿರಲಿಲ್ಲ. ಇನ್ನು, ಅಧಿಕಾರಿಗಳು ಮಂಡಿಸಿದ ಈ ಬಜೆಟ್‌ನ ಕಾರ್ಯಕ್ರಮಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುವ ಬಗ್ಗೆ ಅನುಮಾನವಿದೆ. ಆಡಳಿತ ಪಕ್ಷದ ಸದಸ್ಯರ ಬೇಡಿಕೆಗಳಿಗೆ ತಕ್ಕಂತೆ ಬಜೆಟ್ ರೂಪಿಸಲಾಗಿದೆ.

ಜಿ.ಪದ್ಮಾವತಿ

ಕಾರ್ಯಕ್ರಮದಲ್ಲಿ (ಎಡದಿಂದ) ಮೂಡ್ನಾಕೂಡು ಚಿನ್ನಸ್ವಾಮಿ, ಪ್ರೊ. ಕೋಡದ ರಾಜಶೇಖರಪ್ಪ ಮತ್ತು ಸರ್ಕಾರಿ ಕಲಾ ಕಾಲೇಜು ಕನ್ನಡ ವಿಭಾಗ ಮುಖ್ಯಸ್ಥ ಡಾ. ಎಚ್.ಹನುಮಂತರಾಯಪ್ಪ ಇದ್ದರು – ಪ್ರಜಾವಾಣಿ ಚಿತ್ರ

‘ಬಂಡಾಯ ಸಾಹಿತ್ಯದ ಎಚ್ಚರದ ಕಣ್ಣು ನಾಗರಾಜ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದ ಆಗು–ಹೋಗುಗಳಿಗೆ ಡಿ.ಆರ್. ನಾಗರಾಜ ತಕ್ಷಣಕ್ಕೆ ಸ್ಪಂದಿಸುತ್ತಿದ್ದರು, ಪ್ರತಿಕ್ರಿಯಿಸುತ್ತಿದ್ದರು. ಪಿ.ಲಂಕೇಶ್ ಮತ್ತು ಅವರು ಬಂಡಾಯ ಸಾಹಿತ್ಯದಲ್ಲಿ ಎಚ್ಚರದ ಕಣ್ಣು ಗಳಿಂತಿದ್ದರು’ ಎಂದು ಹಿರಿಯ ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿದರು.

ನಗರದಲ್ಲಿ ಭಾನುವಾರ ಏರ್ಪಡಿಸಿದ್ದ ‘ಡಿ.ಆರ್. ನಾಗರಾಜ–67’ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು,‘ಲಂಕೇಶ್ ಮತ್ತು ನಾಗರಾಜ ಅವರ ಬಗ್ಗೆ ಸಾಹಿತ್ಯ ಕ್ಷೇತ್ರದಲ್ಲಿ ಸಾತ್ವಿಕವಾದ ಭಯವಿತ್ತು. ಕೃತಿಗಳನ್ನು ಪ್ರಕಟಿಸಿದ ನಂತರ ಈ ಇಬ್ಬರ ವಿಮರ್ಶೆ ಹೇಗಿರುತ್ತದೆ ಎಂದು ಲೇಖಕರು ಕುತೂಹಲದಿಂದ ಕಾಯುತ್ತಿದ್ದರು. ಅವರಿಬ್ಬರ ಅನುಪಸ್ಥಿತಿಯಿಂದಾಗಿ ಸಾಹಿತ್ಯ ಕ್ಷೇತ್ರದಲ್ಲಿ ನಿರ್ವಾತ ಸೃಷ್ಟಿಯಾದಂತಾಗಿದೆ’ ಎಂದು ಅಭಿಪ್ರಾಯಪಟ್ಟರು.

‘ಸಾಹಿತ್ಯ ವಿಮರ್ಶೆಗೆ ಸೃಜನಶೀಲ ರೂಪ ಕೊಟ್ಟವರು ನಾಗರಾಜ. ಅವರ ವಿಮರ್ಶೆ ಲೇಖಕರ ದೃಷ್ಟಿಕೋನವನ್ನು ವಿಸ್ತರಿಸುವಂತಿರುತ್ತಿದ್ದವು’ ಎಂದರು.

‘ಆರ್.ಸಿ. ಹಿರೇಮಠ ಅವರನ್ನು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿದ್ದರು. ಆಗ, ಸಾಹಿತ್ಯ ಕ್ಷೇತ್ರಕ್ಕೆ ಅವರ ಕೊಡುಗೆ ಏನು ಎಂದು ಪ್ರಶ್ನಿಸಿ, ಅದನ್ನು ವಿರೋಧಿಸಿದವರ ಪೈಕಿ ಡಿ.ಆರ್. ನಾಗರಾಜ ಪ್ರಮುಖರು. ಇದಕ್ಕೆ ಪರ್ಯಾಯವಾಗಿ ಅವರು ಮತ್ತೊಂದು ಸಮ್ಮೇಳನವನ್ನು ಸಂಘಟಿಸಿದರು’ ಎಂದು ನೆನಪಿಸಿಕೊಂಡರು.

‘ನಾಗರಾಜ ಅವರಂತಹ ಸಾಹಿತ್ಯ ಮೌಲ್ಯಮಾಪಕರು ಈಗ ಇಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ಯಾರಿಗೇ ಪ್ರಶಸ್ತಿ ಕೊಟ್ಟರೂ, ಯಾರಿಗೆ ಯಾವ ಸ್ಥಾನ ನೀಡಿದರೂ ಪ್ರಶ್ನಿಸುವವರೇ ಇಲ್ಲವಾಗಿದ್ದಾರೆ’ ಎಂದರು.

ಸರ್ಕಾರಿ ಕಲಾ ಕಾಲೇಜು ಪ್ರಾಚಾರ್ಯ ಕೋಡದ ರಾಜಶೇಖರಪ್ಪ ಅಧ್ಯಕ್ಷತೆ ವಹಿಸಿದ್ದರು. ರುದ್ರೇಶ್ ಅದರಂಗಿ ಇತರರು ಹಾಜರಿದ್ದರು.

ಸಂಕ್ಷಿಪ್ತ ಸುದ್ದಿ

ಅಮಾನವೀಯ ಘಟನೆ: ದೊಂಬಿದಾಸರ ಆಕ್ರೋಶ

ಬೆಂಗಳೂರು: ಹಿಂದುಳಿದ ಅಲೆಮಾರಿ ಕುಟುಂಬವೊಂದರ ಮಗುವಿನ ಶವಸಂಸ್ಕಾರಕ್ಕೆ ಅಡ್ಡಿಪಡಿಸಿರುವುದು ಅಮಾನವೀಯ ಎಂದು ರಾಜ್ಯ ದೊಂಬಿದಾಸರ ಕ್ಷೇಮಾಭಿವೃದ್ಧಿ ಸಂಘ ಅಸಮಾಧಾನ ವ್ಯಕ್ತಪಡಿಸಿದೆ.

‘ಕೊರಟಗೆರೆ ತಾಲ್ಲೂಕಿನ ಜೊಂಪೆನಹಳ್ಳಿಯಲ್ಲಿ ಈ ಕುಟುಂಬವೊಂದು ಶವಸಂಸ್ಕಾರಕ್ಕಾಗಿ ಅನುಭವಿಸಿದ ನೋವು ಒಂದೆಡೆಯಾದರೆ, ಆ ಅಲೆಮಾರಿಗಳು ಯಾವ ಸಮುದಾಯದವರು ಎಂದು ಹೇಳಲು ಸರ್ಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ. ತುಮಕೂರು ಜಿಲ್ಲಾಡಳಿತ ಇನ್ನಾದರೂ ಎಚ್ಚೆತ್ತುಕೊಳ್ಳಬೇಕು’ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಟಿ.ವಿ. ಗೋಪಾಲಕೃಷ್ಣ ಹೇಳಿದ್ದಾರೆ.

‘ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವ ದೊಂಬಿದಾಸ ಸಮುದಾಯದ ನೋವುಗಳನ್ನು ಸರ್ಕಾರ ಅರ್ಥ ಮಾಡಿಕೊಳ್ಳುತ್ತಿಲ್ಲ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೈಯಪ್ಪನಹಳ್ಳಿ ರೈಲು ನಿಲ್ದಾಣ ಉದ್ಘಾಟನೆ ಶೀಘ್ರ

ಬೆಂಗಳೂರು: ರೈಲ್ವೆ ಮಂಡಳಿ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುನೀತ್ ಶರ್ಮಾ ಅವರು ಬೈಯಪ್ಪನಹಳ್ಳಿಯಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ಅನ್ನು ಭಾನುವಾರ ಪರಿಶೀಲಿಸಿದರು. ಇದು ದೇಶದ ಮೊದಲ ಸಂಪೂರ್ಣ ಹವಾನಿಯಂತ್ರಿತ ರೈಲು ನಿಲ್ದಾಣವಾಗಿದೆ.

‘ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ (ಮೆಜೆಸ್ಟಿಕ್) ಮತ್ತು ಯಶವಂತಪುರ ರೈಲು ನಿಲ್ದಾಣಗಳಲ್ಲಿ ದಟ್ಟಣೆ ಹೆಚ್ಚಿರುತ್ತದೆ. ಈ ಸಂದರ್ಭದಲ್ಲಿ ರಾಜಧಾನಿಗೆ ಈ ಬೈಯಪ್ಪನಹಳ್ಳಿ ರೈಲು ನಿಲ್ದಾಣ ತುಂಬಾ ಅಗತ್ಯವಾಗಿತ್ತು. ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಪ್ರಯಾಣಿಕ ಸ್ನೇಹಿಯಾಗಿ ಈ ನಿಲ್ದಾಣವನ್ನು ಅಭಿವೃದ್ಧಿಪಡಿಸಲಾಗಿದೆ’ ಎಂದು ಸುನೀತ್ ಶರ್ಮಾ ಹೇಳಿದರು.

‘ನಿಲ್ದಾಣದಲ್ಲಿ ಎಲ್ಲ ಕಾಮಗಾರಿಗಳೂ ಪೂರ್ಣಗೊಂಡಿದ್ದು, ಶೀಘ್ರವೇ ಉದ್ಘಾಟನೆಗೆ ದಿನಾಂಕ ನಿಗದಿಪಡಿಸಲಾಗುವುದು’ ಎಂದರು.

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಕವಿ ಜಯಂತ ಕಾಯ್ಕಿಣಿ ಬೇಸರ

‘ಮೊದಲ ಮುದ್ರಣ ಈಗಲೂ ಸಾವಿರ’

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ಕರ್ನಾಟಕದಲ್ಲಿ ಆರು ಕೋಟಿ ಕನ್ನಡಿಗರಿದ್ದೇವೆ. ಆದರೆ, 90ರ ದಶಕದಿಂದ ಈವರೆಗೂ ಯಾವುದೇ ಒಂದು ಪುಸ್ತಕದ ಪ್ರಥಮ ಮುದ್ರಣ ಒಂದು ಸಾವಿರ ಮಾತ್ರ. ಪುಸ್ತಕಗಳ ದರ ಕಡಿಮೆ ಇದ್ದರೂ ಕೊಂಡುಕೊಳ್ಳುವವರು ಕಡಿಮೆ’ ಎಂದು ಕವಿ ಜಯಂತ ಕಾಯ್ಕಿಣಿ ಬೇಸರ ವ್ಯಕ್ತಪಡಿಸಿದರು.

ಅಂಕಿತ ಪುಸ್ತಕ ಪ್ರಕಾಶನವು ಬುಕ್‌ಬ್ರಹ್ಮ ಸಹಯೋಗದಲ್ಲಿ ಆನ್‌ಲೈನ್ ಮೂಲಕ ಭಾನುವಾರ ಆಯೋಜಿಸಿದ್ದ ಜಯಂತ ಕಾಯ್ಕಿಣಿ ಅವರ ‘ವಿಚಿತ್ರಸೇನನ ವೈಖರಿ’ ಹಾಗೂ ಅನಾರ್ಕಲಿಯ ಸೇಫ್ಟಿ ಪಿನ್’ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪುಸ್ತಕಗಳು ಆಗಿನ ಕಾಲದಲ್ಲಿ ಮೊಳೆ ಜೋಡಿಸುವ ವಿಧಾನದಿಂದ ಮುದ್ರಣವಾಗುತ್ತಿದ್ದವು. ಈಗ ತಂತ್ರಜ್ಞಾನಗಳ ಸಹಾಯದಿಂದ ವೇಗವಾಗಿ ಮುದ್ರಣ ನಡೆಯುತ್ತದೆ. ಆದರೂ ಪುಸ್ತಕಗಳ ಮೊದಲ ಮುದ್ರಣದ ಮಿತಿ ಅಷ್ಟೇ ಇದೆ. ಪುಸ್ತಕ ಓದುಗರ ಸಂಖ್ಯೆ ಹೆಚ್ಚಾಗಬೇಕು’ ಎಂದರು.



ಜಯಂತ ಕಾಯ್ಕಿಣಿ

‘ಸಾಮಾನ್ಯವಾಗಿ ₹100ಕ್ಕಿಂತ ಹೆಚ್ಚಿನ ದರ ಇರುವ ಪುಸ್ತಕದ ಖರೀದಿಗೆ ಹಿಂದೇಟು ಹಾಕುತ್ತಾರೆ. ಈ ಭಾವನೆ ಯಾಕೆಂದು ಅರ್ಥವಾಗುತ್ತಿಲ್ಲ. ಒಂದು ವೇಳೆ ಪುಸ್ತಕವನ್ನು ಓದಿದ ನಂತರ ಅದನ್ನು ತಿನ್ನಬಹುದು ಎಂದು ವಿಜ್ಞಾನದಿಂದ ಆವಿಷ್ಕಾರ ನಡೆದರೆ , ಪುಸ್ತಕದ ದರ ಹೆಚ್ಚಿಸಬಹುದೇನೋ’ ಎಂದು ಹಾಸ್ಯ ಮಾಡಿದರು.

ಬರಹಗಾರ ಎಸ್.ದಿವಾಕರ್, ‘ಜಯಂತ್ ಕಾಯ್ಕಿಣಿ ಅವರ ಪ್ರತಿಯೊಂದು ಉಪಮಾನವೂ ಒಂದು ರೂಪಕವಾಗಿರುತ್ತದೆ. ಸಾಹಿತ್ಯದಲ್ಲಿ ಜಯಂತ್ ಅವರಂತೆ ರೂಪಕಗಳು ಬಂದಿರುವುದನ್ನು ನಾನು ಬೇರೆಡೆ ಕಂಡಿಲ್ಲ. ಅವರ ಪ್ರತಿ ಕಥೆಯೂ ಓದುಗನ ಅನುಭವಕ್ಕೆ ಬರುವಂತಿವೆ ಹಾಗೂ ಪಂಚೇಂದ್ರಿಯಗಳನ್ನು ಎಚ್ಚರಿಸುವಂತಿರುತ್ತವೆ’ ಎಂದರು.

‘ಕಳಪೆ ಕಥೆಗಾರರು ಕಥೆಗಳ ವಿಷಯ ಸೂಚಿಸುತ್ತಾರೆ. ಅದು, ಜಯಂತರ ಕಥೆಗಳಲ್ಲಿ ಇರುವುದಿಲ್ಲ. ಅವರ ಪ್ರತಿ ಕಥೆಯನ್ನು ಓದಿದಾಗಲೂ ಕಾದಂಬರಿ ಓದಿದಂತೆ ಆಗುತ್ತದೆ. ಅವರು ನೀಡುವ ವಿವರಣೆಯಲ್ಲಿ ಪರಿಪೂರ್ಣತೆ ಇರುತ್ತದೆ. ಅವರ ಕಥೆಗಳಲ್ಲಿನ ವಿಷಯವನ್ನು ನಾವೂ ನೋಡಿರುತ್ತೇವೆ. ಆದರೆ, ಅದನ್ನು ಹೇಗೆ ನೋಡಬೇಕು ಎಂದು ಜಯಂತರ ಕಥೆಗಳೇ ಹೇಳುತ್ತವೆ’ ಎಂದು ವಿವರಿಸಿದರು.

ಜಯಂತ ಕಾಯ್ಕಿಣಿ ಅವರ ಪುಸ್ತಕಗಳನ್ನು ಕುರಿತು ವಿಜ್ಞಾನ ವಿದ್ವಾಂಸ ಸುಂದರ ಸರುಕ್ಕೈ ಮಾತನಾಡಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

RENTAL PROPERTIES

Accommodation Available

Commercial

1500 SQFT AND 3000 SQFT CAN BE RENTED SEPERATELY OR TOGETHER FACING RV. MAIN ROAD NEXT TO INDIAN OIL PETROL BUNK, 45 FEET GLASS FRONTAGE WITH HORIZONTAL GRILL SUITABLE FOR BANKS DEPARTMENTAL STORES ELECTRONIC GOODS SHOWROOMS GROUND FLOOR., RESERVED PARKING GIVEN REASONABLE RENT CONTACT OWNER 9740854176

REAL ESTATE SELLING

Farm House/ Land/ Resorts

HAL And Around

THREE 30X46 sqft lot Fully developed location Rs 9999/- sqft contact on WhatsApp +15127962388

Sites

Out-Station

SHIVAMOGA BEHIND KSRTC busstand, ring road site 30x50 with borewell 1800/-psft negotiable. Owner. 9844092859/ 9632377775.

BUSINESS

Business Offers

Finance

NRI'S INVESTMENT And Finance Available On Low Interest Against, Properties, Land&Building,Sites, Flats, (Also)Business, Companies Call: 7411265189

Agents Wanted

WANTED PROMOTERS Dealers Marketing Staff for Unique Healthy Consumer Products Contact: 9448041257

General

GOLDEN INVESTMENT Opportunity; Invest Rs.1-Lacs in our Water & Food products business & get Rs.365/- for 365 days. (Including your Principle+ Profit Share). Returns paid on daily basis from the next day of investment. Interested parties Call; 9739979946.

EDUCATIONAL

Distance Education

DEGREE/ DIPLOMA LOGISTICS and Supply Chain, Airport Ground Staff, Airport Management, Automobile Production and Servicing,Textile Technology,Telecom,Hotel Management,Hospital Management,Montessori, NTTC Call: 9778261645 / 9745910775

JOB OPPORTUNITIES

Engg/ Production Technical

WANTED B.E Mechanical Engineer Trainees Fresher's for an Aircraft Component Manufacturing Industry. Training period 1YEAR, Stipend 0-6-Months Rs.12000, 7-12-Months Rs.14000. Mail Your resume to mail@ayyappa-cnc.com

Graphic Designers

WANTED DTP Operator/ Graphic Designer, Corel Draw, Illustrator & Photoshop for a Pvt Limited Company in around Rajajinagar Contact: 23307910 / 9108458798

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ಕೋವಿಡ್: ಲಾಕ್‌ಡೌನ್‌ನಿಂದ ತತ್ತರ • ಇನ್ನೂ ಬಾಗಿಲು ತೆರೆಯದ ಶೇ 40ರಷ್ಟು ಕಾರ್ಖಾನೆಗಳು • ಕಾರ್ಮಿಕರ ಕೊರತೆಯ ಸವಾಲು

ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ 2ನೇ ಅಲೆಯ ಕರಿಛಾಯೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಸಿಲಿಕಾನ್ ಸಿಟಿ, ಐ.ಟಿ ರಾಜಧಾನಿ ಎಂದೆಲ್ಲಾ ಕರೆಸಿಕೊಳ್ಳುವ ಬೆಂಗಳೂರು ಅದಕ್ಕೂ ಮುನ್ನವೇ ಗಾರ್ಮೆಂಟ್ಸ್ ಕಾರ್ಖಾನೆಗಳ ಹಬ್ ಎಂದೇ ಹೆಸರುವಾಸಿಯಾಗಿತ್ತು. ಈ ಉದ್ದಿಮೆಗಳು ಕಳೆದ ಒಂದು ವರ್ಷದಿಂದ ಕಲ್ಲುಮುಳ್ಳಿನ ಹಾದಿ ಸವೆಸಿ ಚೇತರಿಕೆಯ ಹಾದಿಗೆ ಮರಳಿವೆ. ಹೊಸ ಸವಾಲುಗಳನ್ನೂ ಎದುರಿಸಿ ಮುನ್ನಡೆಯುತ್ತಿರುವ ಈ ಉದ್ದಿಮೆಗಳ ಮೇಲೆ ಕೋವಿಡ್ ಎರಡನೇ ಅಲೆಯ ಕರಿಛಾಯೆ ವಕ್ಕರಿಸಿದೆ.

ಸಿದ್ಧ ಉಡುಪು ಅಥವಾ ಬ್ರ್ಯಾಂಡೆಡ್ ಉಡುಪು ತಯಾರಿಕೆಯಲ್ಲಿ ಕರ್ನಾಟಕ ಸದಾ ಮುಂಚೂಣಿಯಲ್ಲಿದೆ. ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಸಿದ್ಧವಾಗುವ ಬಹುತೇಕ ಉಡುಪುಗಳು ಭಾರತದಲ್ಲಿ ಮಾರಾಟ ಆಗುವುದಿಲ್ಲ, ಅಮೆರಿಕ ಮತ್ತು ಯೂರೋಪ್‌ನಂತಹ ದೇಶಗಳಿಗೆ ರಫ್ತಾಗುತ್ತದೆ. ವಿದೇಶಿ ಬೇಡಿಕೆ ಆಧರಿಸಿಯೇ ಇಲ್ಲಿನ ಉದ್ಯಮಗಳು ನಡೆಯುತ್ತವೆ.

ಉಡುಪು ಸಿದ್ಧಪಡಿಸಿ ವಿದೇಶಗಳಿಗೆ ರಫ್ತು ಮಾಡುವ ಒಂದೊಂದು ಕಂಪನಿಗಳಲ್ಲಿ 1 ಸಾವಿರದಿಂದ 5 ಸಾವಿರದವರೆಗೆ ಕಾರ್ಮಿಕರಿದ್ದಾರೆ. 25 ರಿಂದ 100, 500 ಹೊಲಿಗೆ ಯಂತ್ರಗಳನ್ನು ಹೊಂದಿರುವ ಸಣ್ಣ ಸಣ್ಣ ಗಾರ್ಮೆಂಟ್ಸ್ ಕಾರ್ಖಾನೆಗಳೂ ಬೆಂಗಳೂರಿನಲ್ಲಿವೆ. ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ಮಾಡಿ ಅನುಭವ ಹೊಂದಿದ ಅನೇಕರು, ಇನ್ನೊಬ್ಬರ ಕೈಕೆಳಗೆ ದುಡಿಯುವ ಬದಲು ತಮ್ಮದೇ ಸ್ವಂತ ಸಣ್ಣ ಸಣ್ಣ ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಆರಂಭಿಸಿದ ಅನೇಕ ಉದಾಹರಣೆಗಳಿವೆ.

ಕೋವಿಡ್ ಆಕ್ರಮಣ ಈ ಉದ್ಯಮದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿತು. ಎರಡು ತಿಂಗಳ ಲಾಕ್‌ಡೌನ್ ವೇಳೆ ಈ ಉದ್ಯಮ ತಲ್ಲಣಗೊಂಡಿತು. ಲಾಖ್‌ಡೌನ್ ತೆರವಾದ ಬಳಿಕವೂ ಈ ಉದ್ದಿಮೆ ಚೇತರಿಸಿಕೊಳ್ಳಲು ತಡಬಡಾಯಿಸಿತು. ಶೇ 30ರಿಂದ ಶೇ 40ರಷ್ಟು ಗಾರ್ಮೆಂಟ್ಸ್ ಕಾರ್ಖಾನೆಗಳು ಈಗಲೂ ಬಾಗಿಲು ತೆರೆದಿಲ್ಲ. ಬಾಗಿಲು ಮುಚ್ಚಿರುವ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಬಹುತೇಕವು ಸಣ್ಣ ಉದ್ದಿಮೆಗಳೇ ಆಗಿವೆ.

ಲಾಕ್‌ಡೌನ್ ತೆರವಾದ ಬಳಿಕವೂ ಉದ್ದಿಮೆ ಪುನರಾರಂಭ ಮಾಡಲು ಹಲವಾರು ತೊಡಕುಗಳು ಎದುರಾದವು. ಬಾಕಿ ಇದ್ದ ವಿದ್ಯುತ್ ಬಿಲ್, ಕಟ್ಟಡದ ಬಾಡಿಗೆ, ಈ ಹಿಂದೆ ಖರೀದಿಸಿದ್ದ ಕಚ್ಚಾ ವಸ್ತುಗಳ, ಬಿಡಿಭಾಗಗಳ ಪೂರೈಕೆದಾರರಿಗೆ ಪಾವತಿ ಬಾಕಿ... ಅಲ್ಲದೇ ಲಾಕ್‌ಡೌನ್ ಅವಧಿಯಲ್ಲಿ ಅನುಭವಿಸಿದ ನಾನಾ ರೀತಿಯ ನಷ್ಟಗಳನ್ನು ಭರಿಸಲು ಹಣ ಹೊಂದಿಸುವುದು ಸಣ್ಣ ಸಣ್ಣ ಉದ್ಯಮಿಗಳಿಗೆ ಕಷ್ಟವಾಯಿತು. ದಿನಗಳು ಉರುಳಿದಂತೆ ಸಾಲದ ಹಾಗೂ ಬಾಕಿಯ ಮೊತ್ತ ಹೆಚ್ಚಾಗುತ್ತಲೇ ಹೋಯಿತು. ಮತ್ತೆ ಬಂಡವಾಳ ಹಾಕಿದರೂ ಉಡುಪು ಸಿದ್ಧಪಡಿಸಲು ಬೇಡಿಕೆ ಬರುವ ಖಾತ್ರಿಯೂ ಇರಲಿಲ್ಲ. ಕೆಲವು ಕಟ್ಟಡಗಳ ಮಾಲೀಕರು ಒಳಗಿರುವ ಹೊಲಿಗೆ ಯಂತ್ರಗಳನ್ನು ಬಾಡಿಗೆ ಮೊತ್ತಕ್ಕೆ ಜಮಾ ಮಾಡಿಕೊಂಡು ಹೊಸದಾಗಿ ಬಾಡಿಗೆಗೆ ಕೊಟ್ಟಿದ್ದಾರೆ. ಹೀಗಾಗಿ, ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಮತ್ತೆ ತೆರೆಯುವ ಗೋಜಿಗೇ ಹೋಗಲಿಲ್ಲ ಎನ್ನುತ್ತಾರೆ ಬಾಗಿಲು ಮುಚ್ಚಿರುವ ಗಾರ್ಮೆಂಟ್ಸ್ ಕಾರ್ಖಾನೆಗಳ ಮಾಲೀಕರು.

ಈಗ ಈ ಉದ್ಯಮ ಚೇತರಿಕೆಯ ಹಾದಿಯಲ್ಲಿದೆ. ಇರುವ ಎಲ್ಲಾ ಗಾರ್ಮೆಂಟ್ಸ್ ಕಾರ್ಖಾನೆಗಳಿಗೂ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಿದ್ಧ ಉಡುಪು ತಯಾರಿಕೆಗೆ ಬೇಡಿಕೆ ಬರುತ್ತಿದೆ. ಇದು ಉದ್ಯಮದಲ್ಲಿ ಹೊಸ ಉತ್ಸಾಹ ತುಂಬಿದೆ. ಆದರೆ, ಕೋವಿಡ್ ಎರಡನೇ ಅಲೆಯಿಂದ ಸರ್ಕಾರ ಮತ್ತೆ ಲಾಕ್‌ಡೌನ್ ಮಾಡಬಹುದು ಎಂಬ ಭೀತಿ ಉದ್ಯಮಿಗಳಲ್ಲಿ ಕಳವಳ ಮೂಡಿಸಿದೆ.

ಎಲ್ಲೆಡೆ ಕಾರ್ಮಿಕರ ಕೊರತೆ

ಗಾರ್ಮೆಂಟ್ಸ್ ಕಾರ್ಖಾನೆಗಳು ಚೇತರಿಕೆಯ ಹಾದಿಯಲ್ಲಿರುವ ಕಾರಣ ಬೇಡಿಕೆಗೆ ತಕ್ಕಂತೆ ಉಡುಪು ತಯಾರಿಸಿಕೊಡಲು ದೊಡ್ಡ ದೊಡ್ಡ ಕಂಪನಿಗಳಿಂದಲೂ ಸಾಧ್ಯವಾಗುತ್ತಿಲ್ಲ. ಕಾರ್ಮಿಕರ ಕೊರತೆ ಎಲ್ಲಾ ಉದ್ದಿಮೆಗಳನ್ನೂ ಕಾಡುತ್ತಿದೆ. ಶಾಹಿ ಎಕ್ಸ್‌ಪೋರ್ಟ್ ಪೀಣ್ಯ ಯೂನಿಟ್‌ನಲ್ಲಿ 2 ಸಾವಿರ ನೌಕರರನ್ನು ಹೊಂದಿತ್ತು. ಈಗ 1 ಸಾವಿರ ಕಾರ್ಮಿಕರಷ್ಟೇ ಇದ್ದಾರೆ. ಇನ್ನೂ 1 ಸಾವಿರ ನೌಕರರ ಅಗತ್ಯವಿದೆ ಎನ್ನುತ್ತಾರೆ ಇಲ್ಲಿನ ಕಾರ್ಮಿಕರು.

ಕೋವಿಡ್ ಮತ್ತು ಲಾಕ್‌ಡೌನ್‌ಗೆ ಹೆದರಿ ಊರಿಗೆ ಮರಳಿದವರಲ್ಲಿ ಹಲವರು ಮತ್ತೆ ವಾಪಸ್ ಬರಲು ಮನಸ್ಸು ಮಾಡುತ್ತಿಲ್ಲ. ಸಣ್ಣ ಗಾರ್ಮೆಂಟ್ಸ್ ಕಾರ್ಖಾನೆಗಳಿಂದ ದೊಡ್ಡ ಕಂಪನಿಗಳ ತನಕ ಎಲ್ಲಾ ಉದ್ದಿಮೆಗಳ ಗೇಟಿನಲ್ಲಿ 'ಕಾರ್ಮಿಕರು ಬೇಕಾಗಿದ್ದಾರೆ' ಎಂಬ ಫಲಕಗಳು ರಾರಾಜಿಸುತ್ತಿವೆ. 4 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಿರುವ ಈ ಉದ್ಯಮ ಮತ್ತೆ ತನ್ನ ಹಳೆಯ ವೈಭವಕ್ಕೆ ಮರಳುವ ತವಕದಲ್ಲಿದೆ.

ಲಾಕ್‌ಡೌನ್ ತೆರವಾದರೂ ಮೂರು ತಿಂಗಳ ಕಾಲ ಸಿದ್ಧ ಉಡುಪು ತಯಾರಿಕೆಗೆ ಬೇಡಿಕೆ ಕುದುರಲಿಲ್ಲ. ಕಾರ್ಮಿಕರಿಗೆ ಕೆಲಸ ನೀಡಬೇಕೆಂಬ ಕಾರಣಕ್ಕೆ ಮಾಸ್ಕ್ ತಯಾರಿಸಿ ಮಾರಾಟ ಮಾಡಿದೆವು

ನಿಶಿತ್, ಸುವರ್ಣ ಗಾರ್ಮೆಂಟ್ಸ್ ಕಾರ್ಖಾನೆಯ ವ್ಯವಸ್ಥಾಪಕ

ಲಾಕ್‌ಡೌನ್ ವೇಳೆ ಕೆಲಸ ಕಳೆದುಕೊಂಡು ಸಾಕಷ್ಟು ಪರಿಪಾಟಲು ಅನುಭವಿಸಿದೆವು. ಎರಡು ತಿಂಗಳಿನಿಂದ ಉದ್ಯಮ ಚೇತರಿಸಿಕೊಂಡಿದೆ. ಮತ್ತೊಮ್ಮೆ ಲಾಕ್‌ಡೌನ್ ಮಾಡುವ ನಿರ್ಧಾರವನ್ನು ಸರ್ಕಾರ ಕೈಗೊಳ್ಳಲೇಬಾರದು

ಮಹೇಶ್, ಗಾರ್ಮೆಂಟ್ಸ್ ಕಾರ್ಖಾನೆ ಉದ್ಯೋಗಿ

950 ರಾಜ್ಯದಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಗಳ ಸಂಖ್ಯೆ

776 ಬೆಂಗಳೂರಿನಲ್ಲಿ ಇರುವ ಗಾರ್ಮೆಂಟ್ಸ್ ಕಾರ್ಖಾನೆಗಳು

4 ಲಕ್ಷ ರಾಜ್ಯದ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಇರುವ ಒಟ್ಟು ಕಾರ್ಮಿಕರ ಸಂಖ್ಯೆ

3 ಲಕ್ಷ ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿರುವ ನೌಕರರು

40% ಈಗಲೂ ಬಾಗಿಲು ಮುಚ್ಚಿರುವ ಗಾರ್ಮೆಂಟ್ಸ್ ಕಾರ್ಖಾನೆಗಳು

ಲಾಕ್‌ಡೌನ್ ವೇಳೆ ಮತ್ತು ನಂತರ ಸಾಕಷ್ಟು ತೊಂದರೆ ಅನುಭವಿಸಿದೆವು. ಮೂರು ತಿಂಗಳಿಂದ ಸ್ವಲ್ಪ ಸುಧಾರಿಸಿಕೊಂಡಿದ್ದೇವೆ. ಮತ್ತೆ ಲಾಕ್‌ಡೌನ್ ನಿರ್ಧಾರ ಕೈಗೊಂಡರೆ ಉದ್ಯಮವೇನಾಗಲಿದೆ ಎಂದು ಊಹಿಸಲೂ ಆಗದು **ಗುರುಲಿಂಗಪ್ಪ (ರಾಜು),** ಗಾರ್ಮೆಂಟ್ಸ್ ಕಾರ್ಖಾನೆ ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ

ಗಾರ್ಮೆಂಟ್ಸ್ ಕಾರ್ಖಾನೆಯೊಂದರಲ್ಲಿ ಬಟ್ಟೆಗಳ ರಾಶಿಯ ನಡುವೆ ಕೆಲಸ ನಿರ್ವಹಿಸುತ್ತಿರುವ ಮಹಿಳೆಯರು –ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

₹8,300 ಮಾತ್ರ ವೇತನ

'ರಾಜ್ಯದಲ್ಲಿ ಕಾರ್ಮಿಕರನ್ನು 86 ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ. ಈ ಪೈಕಿ 82 ರೀತಿಯ ಕಾರ್ಮಿಕರಿಗೆ ಕನಿಷ್ಠ ವೇತನ ತಿಂಗಳಿಗೆ ₹12,250 ಇದೆ. ಉಳಿದ ಗಾರ್ಮೆಂಟ್ಸ್, ಟೆಕ್ಸ್‌ಟೈಲ್, ಡೈಯಿಂಗ್ ಆ್ಯಂಡ್ ಪ್ರಿಂಟಿಂಗ್ ಮತ್ತು ಸಿಲ್ಕ್ ಕಾರ್ಖಾನೆಗಳ ನೌಕರರಿಗೆ ತಿಂಗಳ ಕನಿಷ್ಠ ವೇತನ ₹8,300 ಇದೆ' ಎಂದು ಗಾರ್ಮೆಂಟ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಸಲಹೆಗಾರ ಕೆ.ಆರ್.ಜಯರಾಂ ತಿಳಿಸಿದರು.

'2017ರ ಡಿಸೆಂಬರ್‌ನಲ್ಲಿ ಕನಿಷ್ಠ ವೇತನ ಪರಿಷ್ಕರಣೆ ಮಾಡಿ ಸರ್ಕಾರ ಕರಡು ಅಧಿಸೂಚನೆ ಪ್ರಕಟಿಸಿತ್ತು. ಉದ್ಯಮಿಗಳ ಮನವಿ ಆಧರಿಸಿ ಸರ್ಕಾರ ಅಧಿಸೂಚನೆ ವಾಪಸ್ ಪಡೆಯಿತು. ಇದನ್ನು ನಾವು ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದೆವು. ಸರ್ಕಾರ ಹೊರಡಿಸಿದ್ದ ಅಧಿಸೂಚನೆ ಸರಿ ಇದೆ ಎಂದು ಹೈಕೋರ್ಟ್ ಹೇಳಿತ್ತು. ಅದನ್ನು ಆಡಳಿತ ಮಂಡಳಿಗಳು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದವು. ಆದರೆ, ಸುಪ್ರೀಂ ಕೋರ್ಟ್ ಕೂಡ ಹೈಕೋರ್ಟ್ ಅದೇಶವನ್ನೇ ಎತ್ತಿ ಹಿಡಿಯಿತು' ಎಂದು ವಿವರಿಸಿದರು.

'ಈ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡು ಒಂದೂವರೆ ತಿಂಗಳು ಕಳೆದಿದೆ. ಸರ್ಕಾರ ಇನ್ನೂ ವೇತನ ಪರಿಷ್ಕರಣೆ ಮಾಡಿಲ್ಲ. ಗಾರ್ಮೆಂಟ್ಸ್ ಉದ್ದಿಮೆಗಳಲ್ಲಿ ಮಹಿಳಾ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಸರ್ಕಾರ ಕೂಡ ಮಹಿಳೆಯರನ್ನು ಶೋಷಣೆ ಮಾಡುತ್ತಿದೆ. ಕೂಡಲೇ ವೇತನ ಪರಿಷ್ಕರಣೆ ಮಾಡಿ ಆದೇಶ ಹೊರಡಿಸಬೇಕು' ಎಂದು ಒತ್ತಾಯಿಸಿದರು.

ವಿಡಿಯೋ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸಂಕಷ್ಟಕ್ಕೆ ಸಿಲುಕಿದ ಬಿಡಿಭಾಗ ವಿತರಕರು

ಉದ್ಯಮ ಈಗ ಚೇತರಿಕೆ ಹಾದಿಗೆ ಮರಳಿದ್ದರೂ ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಬಿಡಿ ಭಾಗ ಪೂರೈಕೆ ಮಾಡುವವರು ಮಾತ್ರ ಈಗಲೂ ಸಂಕಷ್ಟದಲ್ಲಿದ್ದಾರೆ.

ಬಿಡಿಭಾಗ ಸರಬರಾಜು ವಹಿವಾಟು ನಡೆಯುವುದು ಸಂಪೂರ್ಣ ಸಾಲದ ವ್ಯವಹಾರದ ಮೂಲಕ. ಗಾರ್ಮೆಂಟ್ಸ್ ಉದ್ದಿಮೆ ಚೆನ್ನಾಗಿ ನಡೆಯುತ್ತಿದ್ದಾಗ ಈ ವಹಿವಾಟು ಕೂಡ ಸರಾಗವಾಗಿಯೇ ನಡೆಯುತ್ತಿತ್ತು. ಲಾಕ್‌ಡೌನ್ ನಂತರ ಎಲ್ಲವೂ ತಲೆಕೆಳಗಾಗಿದೆ.

'ನಾನು ಸುಮಾರು 150 ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಬಿಡಿಭಾಗ ಪೂರೈಸುತ್ತಿದ್ದೆ. ಇವುಗಳಲ್ಲಿ 40ರಿಂದ 50 ಗಾರ್ಮೆಂಟ್ಸ್ ಕಾರ್ಖಾನೆಗಳು ಇನ್ನೂ ಬಾಗಿಲು ತೆರೆದಿಲ್ಲ. ಒಬ್ಬೊಬ್ಬರಿಂದಲೂ ₹50 ಸಾವಿರದಿಂದ ₹3 ಲಕ್ಷ ತನಕ ದುಡ್ಡು ಬಾಕಿ ಇದೆ. ಕನಿಷ್ಠ ₹40 ಲಕ್ಷ ಬಾಕಿ ಇದೆ. ವಸೂಲಿ ಮಾಡುವುದು ಹೇಗೆ ಎಂದೇ ಗೊತ್ತಾಗುತ್ತಿಲ್ಲ' ಎಂದು ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಬಿಡಿಭಾಗ ಪೂರೈಸುವ ರಮೇಶ್ ಹೇಳಿದರು.

'ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಮತ್ತೆ ಆರಂಭಿಸಿರುವ ಕೆಲ ಮಾಲೀಕರು ಹಿಂದಿನಂತೆ ಸಹಕಾರ ನೀಡಿ ಎಂದು ಕೇಳುತ್ತಿದ್ದಾರೆ. ಹಳೇ ಬಾಕಿ ವಸೂಲಿ ಆಗಬೇಕೆಂದರೆ ಹೊಸ ಸಾಲ ಕೊಡಬೇಕಾದ ಅನಿವಾರ್ಯ ಇದೆ. ಏನು ಮಾಡಬೇಕೆಂಬ ಗೊಂದಲ ಇರುವಾಗಲೇ ಕೋವಿಡ್ ಎರಡನೇ ಅಲೆಯ ಭೀತಿಯೂ ಕಾಣಿಸಿಕೊಂಡಿದೆ. ಮತ್ತೊಮ್ಮೆ ಲಾಕ್‌ಡೌನ್ ಆದರೆ ನಮ್ಮ ಸ್ಥಿತಿ ಏನಾಗುವುದೋ ಗೊತ್ತಾಗುತ್ತಿಲ್ಲ. ಎಲ್ಲವೂ ಬಿಳಿ ಹಾಳೆಯಂತೆ ಕಾಣಿಸುತ್ತಿದೆ' ಎಂದು ಹೇಳುವಾಗ ಅವರ ಕಣ್ಣಾಲಿಗಳು ಒದ್ದೆಯಾದವು.

'ಬಲವಂತದ ರಾಜೀನಾಮೆ; ಕಳ್ಳತನದ ಮಚ್ಚುವಿಕೆ'

'ಈಗ ಕಾರ್ಮಿಕರ ಕೊರತೆ ಉದ್ಯಮವನ್ನು ಕಾಡುತ್ತಿದೆ. ಆದರೆ, ಲಾಕ್‌ಡೌನ್ ತೆರವಾದ ವೇಳೆ ಕಾರ್ಖಾನೆಗಳು ಮುಚ್ಚಲಿವೆ ಎಂಬ ಸುದ್ದಿ ಹಬ್ಬಿಸಿ ಕಾರ್ಮಿಕರಿಂದ ಬಲವಂತದ ರಾಜೀನಾಮೆ ಪಡೆದಕೊಳ್ಳಲಾಯಿತು' ಎಂಬುದು ಗಾರ್ಮೆಂಟ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಆರೋಪ.

'ಕಾರ್ಖಾನೆ ಮುಚ್ಚಿದರೆ ಕಡಿತ ಆಗಿರುವ ಭವಿಷ್ಯನಿಧಿ (ಪಿಎಫ್) ಇನ್ನಿತರ ಹಣ ಕೈಸೇರುವುದಿಲ್ಲ ಎಂದು ಹೆದರಿ ಸಾಕಷ್ಟು ಕಾರ್ಮಿಕರು ಸ್ವಯಂ ರಾಜೀನಾಮೆ ನೀಡಿದರು. ಕಾರ್ಮಿಕರು ಸ್ವಯಂ ರಾಜೀನಾಮೆ ನೀಡಿದ್ದರೂ ಸರ್ಕಾರ ಅದನ್ನು ಪರಿಶೀಲಿಸಬೇಕಾಗಿದೆ' ಎಂದು ಯೂನಿಯನ್ ಅಧ್ಯಕ್ಷೆ ಆರ್. ಪ್ರತಿಭಾ ಹೇಳಿದರು.

'ಈಗ ಹಳೆ ಕಾರ್ಮಿಕರನ್ನೇ ಮತ್ತೆ ಹೊಸದಾಗಿ ಕೆಲಸಕ್ಕೆ ಸೇರಿಕೊಳ್ಳಲಾಗುತ್ತಿದೆ. ಆದರೆ, ಅವರ ಸೇವಾ ಹಿರಿತನ ನಷ್ಟವಾಯಿತು. ಈ ಕುರಿತ ವಿವರವಾದ ವರದಿಯೊಂದನ್ನು ಸಿದ್ಧಪಡಿಸಿ ಬಿಡುಗಡೆ ಮಾಡಲಾಗಿದೆ. ಕಾರ್ಮಿಕ ಸಚಿವರಿಗೂ ಇದನ್ನು ನೀಡಲಾಗಿದೆ' ಎಂದು ತಿಳಿಸಿದರು.

ಮರ ಉಳಿಸಲು ಅಭಿಯಾನ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಅಭಿವೃದ್ಧಿಯ ಹೆಸರಿನಲ್ಲಿ ಎಚ್‌ಎಎಲ್ ಮುಖ್ಯ ರಸ್ತೆಯ ಸುರಂಜನ್ ದಾಸ್ ಜಂಕ್ಷನ್ ಬಳಿ ಕೆಳ ಸೇತುವೆ ನಿರ್ಮಾಣಕ್ಕಾಗಿ ಸಾಲುಮರಗಳಿಗೆ ಪಾಲಿಕೆಯು ಕೊಡಲಿ ಹಾಕುವುದನ್ನು ನಿಲ್ಲಿಸಿ ಮರಗಳಿಗೆ ರಕ್ಷಣೆ ನೀಡಬೇಕು' ಎಂದು ವೃಕ್ಷ ಬಚಾವೋ ಆಂದೋಲನ ಸಮಿತಿಯ ಸದಸ್ಯರು ಭಾನುವಾರ ಅಭಿಯಾನ ನಡೆಸಿದರು.

ವೃಕ್ಷ ಬಚಾವೋ ಆಂದೋಲನ ಸಮಿತಿಯ ಸದಸ್ಯರು 'ಮರ ಉಳಿಸಿ' ಅಭಿಯಾನ ನಡೆಸಿದರು

ಪಾಲಿಕೆಯ ಮಾಜಿ ಸದಸ್ಯ ಎನ್. ರಮೇಶ್ ನೇತೃತ್ವದಲ್ಲಿ ಮರಗಳಿಗೆ ಬಟ್ಟೆಯ ಪರದೆ ಕಟ್ಟುವ ಮೂಲಕ ಮರ ಉಳಿಸಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಎಚ್‌ಎಎಲ್ ಬಸ್ ನಿಲ್ದಾಣ ಬಳಿ ಹಮ್ಮಿಕೊಂಡಿದ್ದ ಈ ಅಭಿಯಾನದಲ್ಲಿ 'ನಮ್ಮ ಮರ ನಮ್ಮ ಉಸಿರು', 'ಇದು ನನ್ನ ಕಣ್ಣೀರು, ರಕ್ತ ಕಣ್ಣೀರು', 'ಮರಕ್ಕೂ ಜೀವವಿದೆ ಅಳಲು ಬಿಡಬೇಡಿ' ಎಂಬ ಘೋಷವಾಕ್ಯಗಳನ್ನು ಕೂಗಿದರು.

ಎನ್. ರಮೇಶ್, 'ಸರ್ಕಾರವು ಅಭಿವೃದ್ಧಿ ಹೆಸರಿನಲ್ಲಿ ಮೆಟ್ರೊ, ಮೇಲ್ಸೇತುವೆ, ಕೆಳಸೇತುವೆ ಎಂದು ಹೇಳಿಕೊಂಡು 150 ರಿಂದ 200 ವರ್ಷಗಳ ಮರಗಳನ್ನು ರಾತ್ರೊ ರಾತ್ರಿ ಕಡಿಯಲು ಮುಂದಾಗಿದೆ. ಮರಗಳಿಗೆ ಕೊಡಲಿ ಹಾಕುವ ಕೆಲಸ ಮಾಡುತ್ತಿದೆ' ಎಂದು ದೂರಿದರು.

'ಮುಖ್ಯ ರಸ್ತೆಯ ಎಡ ಮತ್ತು ಬಲ ಭಾಗದಲ್ಲಿ ವಿಸ್ತರಣೆಗೆ ಸರ್ವೀಸ್ ರಸ್ತೆ ಮಾಡಿಕೊಂಡು ಈ ಮರಗಳ ಬದಲಾಗಿ ಬೇರೆ ಗಿಡಗಳನ್ನು ನೆಟ್ಟರೆ ನಮ್ಮ ಅಭ್ಯಂತರವಿಲ್ಲ. ಆದರೆ ಮರಗಳಿಗೆ ಕಟ್ಟರ್, ಕೊಡಲಿ, ಇಂಜೆಕ್ಷನ್ ಕೊಡುವುದು, ಆಸಿಡ್ ಹಾಕುವುದನ್ನು ಮಾಡಲಾಗುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವೃಕ್ಷ ಬಚಾವೋ ಆಂದೋಲನ ಸಮಿತಿಯ ಮುಖ್ಯಸ್ಥ ಪರಿಸರ ಮಂಜು, 'ಎಚ್‌ಎಎಲ್ ಮುಖ್ಯ ರಸ್ತೆಯ ಕೆಳ ಸೇತುವೆ ನಿರ್ಮಾಣಕ್ಕೆ ಅಡ್ಡಲಾಗಿರುವ ಮರಗಳನ್ನು ತೆರವುಗೊಳಿಸಲು ಒಟ್ಟು 48 ಮರಗಳ ಪೈಕಿ 25ಕ್ಕೆ ಕೊಡಲಿ ಏಟು ನೀಡಲು ಪಾಲಿಕೆ ನಿರ್ಧರಿಸಿದೆ. ಈಗಾಗಲೇ 8 ಬೃಹತ್ ಮರಗಳನ್ನು ಕತ್ತರಿಸಲಾಗಿದ್ದು ಇನ್ನುಳಿದ ಹದಿನೇಳು ಮರಗಳ ರಕ್ಷಣೆಗೆ ಮುಂದಾಗಿದ್ದೇವೆ' ಎಂದರು.

ವನ್ಯಜೀವಿ ಸಂರಕ್ಷಕ ಸಿಂಹಾದ್ರಿ ಕಿರಣ್ ಕುಮಾರ್, ಲಕ್ಷ್ಮೀನಾರಾಯಣ, ಹರೀಶ್, ಶಿವಪ್ಪ ಹಾಗೂ ಸ್ಥಳೀಯ ಪರಿಸರ ಪ್ರೇಮಿಗಳು ಇದ್ದರು.

ನಗರದಲ್ಲಿ ಇಂದು

'ಜಲಶಕ್ತಿ ಅಭಿಯಾನ'ದ ಉದ್ಘಾಟನೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ಸ್ಥಳ–ಮೊದಲನೆ ಮಹಡಿ, ವಿಕಾಸ ಸೌಧ, ಮಧ್ಯಾಹ್ನ 12.30

ಪ್ರೊ.ಎಸ್.ವಿ.ಪರಮೇಶ್ವರ ಭಟ್ಟ ಸಂಸ್ಮರಣ ಪ್ರಶಸ್ತಿ ಪ್ರದಾನ: ಪುರಸ್ಕೃತರು–ಲೇಖಕಿ ನೀಳಾದೇವಿ, ಅಧ್ಯಕ್ಷತೆ–ಎಸ್.ವಿ.ಪರಮೇಶ್ವರ ಭಟ್ಟ ಪ್ರತಿಷ್ಠಾನದ ಅಧ್ಯಕ್ಷ ಬಿ.ಎ.ವಿವೇಕ ರೈ, ಅತಿಥಿಗಳು–ಹಿರಿಯ ಲೇಖಕಿ ಕೆ.ಆರ್.ಸಂಧ್ಯಾ ರೆಡ್ಡಿ, ಎಸ್.ಪಿ.ರಾಮಚಂದ್ರ, ವನಮಾಲ ಸಂಪನ್ನಕುಮಾರ್, ಶೈಲಜಾ ಸುರೇಶ್, ಜಿ.ಎನ್.ಮೋಹನ್, ಜಿಪಿಓ ಚಂದ್ರು, ಆಯೋಜನೆ–ಎಸ್.ವಿ.ಪರಮೇಶ್ವರ ಭಟ್ಟ ಪ್ರತಿಷ್ಠಾನ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಸಂಜೆ 4.30

'ಅಲ್ಲಮ'-ನೃತ್ಯ ಪ್ರದರ್ಶನ, ಅತಿಥಿಗಳು–ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ರಮಣಶ್ರೀ ಸಮೂಹ ಸಂಸ್ಥೆಗಳ ಮುಖ್ಯಸ್ಥ ಎಸ್.ಷಡಕ್ಷರಿ, ಜಾಫರ್ ಮೊಹಿಯುದ್ದೀನ್, ಆಯೋಜನೆ–ಆರ್ಟಿಕುಲೇಟ್ ಟ್ರಸ್ಟ್ ಫಾರ್ ಆರ್ಟ್ಸ್, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

'ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆ ಒಂದು ವಿಕೇಂದ್ರೀಕೃತ ವಿಧಾನ' ಕುರಿತು ವೆಬಿನಾರ್: ಮಾತನಾಡುವವರು–ಡಿ.ರಂದೀಪ್, ಎಸ್.ವೆಂಕಟೇಶ್ ಶೇಖರ್, ಶ್ರೀನಿವಾಸ್, ಪೂನಂ ಬಿರ್ ಕಸ್ತೂರಿ, ಶಿರ್ಡಿ ಪ್ರಸಾದ್ ಟೇಕೂರ್, ಗಂಗಮ್ಮ ಮತ್ತು ಮೈತ್ರೇಯಿ, ಆಯೋಜನೆ–ಎನ್ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್ (ಇಎಸ್‌ಜಿ), ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)

37 ದಂಪತಿ ಒಂದುಗೂಡಿಸಿದ ಲೋಕ್‌ಅದಾಲತ್

ಪ್ರಜಾವಾಣಿ ವಾರ್ತೆ

ಮೈಸೂರು: ವಿಚ್ಛೇದನ ಬಯಸಿದ್ದ 37 ದಂಪತಿ, ಶನಿವಾರ ಇಲ್ಲಿ ನಡೆದ 'ಮೆಗಾ ಲೋಕ್‌ಅದಾಲತ್'ನಲ್ಲಿ ಮತ್ತೆ ಒಂದಾಗಿದ್ದಾರೆ. ಇವರಲ್ಲಿ 65 ವರ್ಷದ ಜೋಡಿ ಸೇರಿರುವುದು ವಿಶೇಷ.

ಐದು ವರ್ಷಗಳ ಹಿಂದೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದವರೂ, ಇದೀಗ ವಿಚ್ಛೇದನ ನಿರ್ಧಾರದಿಂದ ದೂರ ಸರಿದು, ಪರಸ್ಪರ ಒಂದಾಗಿ ಬಾಳ್ವೆ ಮಾಡಲು ಸಮ್ಮತಿ ವ್ಯಕ್ತಪಡಿಸಿದ್ದಾರೆ. ಮದುವೆಯಾಗಿ ಎರಡೇ ತಿಂಗಳಿಗೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದವರೂ ಇವರಲ್ಲಿದ್ದರು.

'ಇಲ್ಲಿನ ಮೂರು ಕೌಟುಂಬಿಕ ನ್ಯಾಯಾಲಯಗಳಲ್ಲಿ ನಡೆಸಿದ ಆಪ್ತಸಮಾಲೋಚನೆಯ ಬಳಿಕ, 29 ದಂಪತಿ ಒಟ್ಟಿಗೆ ಇರಲು ನಿರ್ಧರಿಸಿದರು. ತಿ.ನರಸೀಪುರದಲ್ಲೂ 8 ಜೋಡಿ ಒಂದಾದವು. ಇವರಿಗೆ ಸಿಹಿ ತಿನಿಸಿ, ಶುಭ ಹಾರೈಸಿ, ಹೂಗುಚ್ಛ ನೀಡಿ ಕಳುಹಿಸಲಾಯಿತು' ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ತಿಳಿಸಿದ್ದಾರೆ.

2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ದಾಖಲಾಗಿದ್ದ ಕೌಟುಂಬಿಕ ದೌರ್ಜನ್ಯ ಪ್ರಕರಣವೊಂದರಲ್ಲಿ ಸುಮಾರು 60-65 ವಯಸ್ಸಿನ ಗಂಡ–ಹೆಂಡತಿಯನ್ನು ಮತ್ತೆ ಒಂದುಗೂಡಿಸಿ ಕಳುಹಿಸಲಾಗಿದೆ ಎಂದು ಮಾಹಿತಿ ನೀಡಿದರು.

38 ವರ್ಷಗಳಷ್ಟು ಹಳೆಯ ಆಸ್ತಿ ಪಾಲುದಾರಿಕೆ ಪ್ರಕರಣ ಹಾಗೂ 80 ಚೆಕ್‌ಬೌನ್ಸ್ ಪ್ರಕರಣಗಳೂ ರಾಜಿಸಂಧಾನದ ಮೂಲಕ ಇತ್ಯರ್ಥವಾಗಿವೆ.

ಕೆ.ಆರ್.ನಗರ ತಾಲ್ಲೂಕಿನಲ್ಲಿ ಆಸ್ತಿ ಪಾಲು ಪ್ರಕರಣವೊಂದರಲ್ಲಿ 80 ವರ್ಷಕ್ಕೂ ಹೆಚ್ಚಿನ ವಯಸ್ಸಿನವರಾದ ಅಣ್ಣ ಮತ್ತು ಇಬ್ಬರು ತಂಗಿಯರ ವ್ಯಾಜ್ಯವನ್ನು ರಾಜಿ ಮೂಲಕ ಇತ್ಯರ್ಥಗೊಳಿಸಲಾಗಿದೆ ಎಂದರು.

ಪ್ರಧಾನ ಜಿಲ್ಲಾ ಮತ್ತು ಸೆಷೆನ್ಸ್ ನ್ಯಾಯಾಧೀಶರಾದ ರಾಮಚಂದ್ರ ಡಿ ಹುದ್ದಾರ್ ಇದ್ದರು.

ಕಾಲುವೆಗೆ ಬಿದ್ದ ವಾಹನ ಇಬ್ಬರು ಬಾಲಕಿಯರ ಸಾವು

ಕೆ.ಆರ್.ನಗರ: ತಾಲ್ಲೂಕಿನ ಶ್ರೀರಾಂಪುರದಲ್ಲಿ ನಡೆದ ಮದುವೆಗೆ, ಕುಪ್ಪೆ ಗ್ರಾಮದಿಂದ ಜನರನ್ನು ಕರೆದೊಯ್ಯುತ್ತಿದ್ದ ಸರಕು ಸಾಗಣೆ ಲಾರಿಯು ಹೊಸೂರು ಬಳಿ ಭಾನುವಾರ ರಾತ್ರಿ ನಾಲೆಗೆ ಬಿದ್ದಿದ್ದು, ಬಾಲಕಿಯರಿಬ್ಬರು ಜಲಸಮಾಧಿಯಾಗಿದ್ದಾರೆ. ಹಲವರಿಗೆ ಗಂಭೀರ ಗಾಯಗಳಾಗಿವೆ.

ಕುಪ್ಪೆ ಗ್ರಾಮದ ಕೃಷ್ಣಯ್ಯ ಅವರ ಪುತ್ರಿಯರಾದ ಪಲ್ಲವಿ (13), ಪುಷ್ಪಲತಾ (10) ಮೃತಪಟ್ಟವರು.

ಹಸಿವು: ಹುಲಿ ಮರಿಗಳ ಸಾವು

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ಉಪವಿಭಾಗದ ನುಗು ವನ್ಯಜೀವಿ ವಲಯದಲ್ಲಿ ಭಾನುವಾರ ಮೂರು ಹುಲಿ ಮರಿಗಳು ಪತ್ತೆಯಾಗಿದ್ದು, ಅದರಲ್ಲಿ ಒಂದು ಸ್ಥಳದಲ್ಲಿಯೇ ಮೃತಪಟ್ಟಿದೆ. ಮತ್ತೊಂದು ಚಿಕಿತ್ಸೆಗೆ ಸ್ಪಂದಿಸದೆ ಮೈಸೂರಿನ ಮೃಗಾಲಯದಲ್ಲಿ ಮೃತಪಟ್ಟಿದೆ.

ಶವಪರೀಕ್ಷೆ ನಡೆಸಿದ್ದು, ಹಸಿವಿನಿಂದ ಮೃತಪಟ್ಟಿರುವುದು ತಿಳಿದುಬಂದಿದೆ.

ಮರಿಗಳು ಶೋಚನೀಯ ಸ್ಥಿತಿಯಲ್ಲಿ ಇರುವುದನ್ನು ಗಮನಿಸಿದ ಸಿಬ್ಬಂದಿ, ಹಿರಿಯ ಅರಣ್ಯಾಧಿಕಾರಿಗಳ ಗಮನಕ್ಕೆ ತಂದು ಮೃಗಾಲಯಕ್ಕೆ ಕಳುಹಿಸಿಕೊಟ್ಟರು. ಬದುಕುಳಿದ ಗಂಡು ಹುಲಿ ಮರಿಯ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ ಎಂದು ಸಹಾಯಕ ವಲಯ ಅರಣ್ಯಾಧಿಕಾರಿ ಕೆ.ಪರಮೇಶ್ ತಿಳಿಸಿದ್ದಾರೆ.

ಪತ್ತೆಯಾದ ಹುಲಿ ಮರಿಗಳು

'ಹುಲಿ ಮರಿಗಳು ಪತ್ತೆಯಾದ ಸ್ಥಳದಲ್ಲಿ ಕೂಂಬಿಂಗ್ ನಡೆಸಿ ತಾಯಿ ಹುಲಿಯ ಹೆಜ್ಜೆ ಗುರುತು ಪತ್ತೆ ಮಾಡಲಾಗಿದೆ. ತಾಯಿ ಹುಲಿಯ ಪತ್ತೆಗೆ ಶೋಧನ ಕಾರ್ಯ ಪ್ರಗತಿಯಲ್ಲಿದೆ. ಇದಕ್ಕಾಗಿ ಕ್ಯಾಮೆರಾ ಅಳವಡಿಸಿ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ' ಎಂದು ಹುಲಿ ಯೋಜನೆ ನಿರ್ದೇಶಕ ಎಸ್.ಆರ್.ನಟೇಶ್ ತಿಳಿಸಿದ್ದಾರೆ.

ಬೋನ್‌ನಿಂದ ತಪ್ಪಿಸಿಕೊಂಡ ಕರಡಿ

ಆನೇಕಲ್: ಇಲ್ಲಿಯ ಬನ್ನೇರುಘಟ್ಟ ಜೈವಿಕ ಉದ್ಯಾನದಿಂದ ಭಾನುವಾರ ಕರಡಿಯೊಂದು ತಪ್ಪಿಸಿಕೊಂಡು ಪರಾರಿಯಾಗಿದ್ದು, ಬನ್ನೇರುಘಟ್ಟದ ಸುತ್ತಮುತ್ತಲಿನ ಪ್ರದೇಶದಲ್ಲಿ ರಾತ್ರಿ ಪಹರೆ ಹಾಕಲಾಗಿದೆ.

ತುಮಕೂರು ಸಿದ್ದಗಂಗಾ ಮಠದ ಬಳಿ ಬೋನಿಗೆ ಬಿದ್ದಿದ್ದ 7–8 ವರ್ಷದ ಗಂಡು ಕರಡಿಯನ್ನು ಸಂರಕ್ಷಿಸಿ ಭಾನುವಾರ ಸಂಜೆ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ತರಲಾಗಿತ್ತು. ಉದ್ಯಾನದ ಪ್ರಾಣಿ ಪುನರ್‌ವಸತಿ ಕೇಂದ್ರಕ್ಕೆ ಸ್ಥಳಾಂತರಿಸುವಾಗ ಕರಡಿ ಬೋನ್‌ನಿಂದ ತಪ್ಪಿಸಿಕೊಂಡು ಪರಾರಿಯಾಗಿದೆ.

ಉರುಗುಗಳಿಂದ ಪರಚಿ ಬೋನಿನ ಕಂಬಿಗಳನ್ನು ಕಿತ್ತು ಹಾಕಿರುವ ಕರಡಿ ತಪ್ಪಿಸಿಕೊಂಡು ಓಡಿ ಹೋಗುವಾಗ ಉದ್ಯಾನದ ವಾಹನ ಚಾಲಕ ಜಯಶಂಕರ್ ಮೇಲೆ ದಾಳಿ ನಡೆಸಿ ಬಲಕಿವಿಯನ್ನು ಪರಚಿ ಗಾಯಗೊಳಿಸಿದೆ. ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ ತಿಳಿಸಿದ್ದಾರೆ.

ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಪರಕೀಯರನ್ನು ದೇಶದಿಂದ ತೊಲಗಿಸಲು ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟವರು ಸಂಗೊಳ್ಳಿ ರಾಯಣ್ಣ, ಅವರ ಹಾದಿಯಲ್ಲಿ ನಡೆಯುವ ಮೂಲಕ ಸಮಾಜವನ್ನು ಕಟ್ಟುವ ಕೆಲಸದಲ್ಲಿ ಎಲ್ಲರೂ ಕೈಜೋಡಿಸಬೇಕು' ಎಂದು ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಕರೆ ನೀಡಿದರು. ಗುಲಗಂಜನಹಳ್ಳಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಿತರಕ್ಷಣಾ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂಗೊಳ್ಳಿರಾಯಣ್ಣ ಪ್ರತಿಮೆ ಅನಾವರಣ ಮಾಡಿ ಅವರು ಮಾತನಾಡಿದರು.

'ಪ್ರತಿಮೆ ನಿರ್ಮಾಣ ಮಾಡಿದರೆ ಸಾಲದು. ಅವರ ತತ್ವ, ಆದರ್ಶಗಳನ್ನು ಮೈಗೂಡಿಸಿಕೊಂಡು ಅವರಂತೆಯೇ ದೇಶಪ್ರೇಮಿಯಾದಾಗ ಮಾತ್ರ ಸಾರ್ಥಕ ಭಾವ ಮೂಡುತ್ತದೆ' ಎಂದರು.

ಹೊಸದುರ್ಗ ಕನಕಗುರು ಪೀಠದ ಶ್ರೀಈಶ್ವರಾನಂದಪುರಿ ಸ್ವಾಮೀಜಿ 'ಮಾನವ, ವನ್ಯ ಜೀವಿ ಉಳಿಯಬೇಕಾದರೆ ಎಲ್ಲರೂ ಪರಿಸರಪ್ರೇಮ ಮೆರೆಯಬೇಕು' ಎಂದರು.

ನೂತನವಾಗಿ ಅನಾವರಣಗೊಂಡ ಸಂಗೊಳ್ಳಿ ರಾಯಣ್ಣ ಪ್ರತಿಮೆ ಎದುರು ಸ್ವಾಮೀಜಿಗಳು ಹಾಗೂ ಗಣ್ಯರು ಇದ್ದಾರೆ

ಗ್ರಾಮದ ವೀರಯೋಧ ಕಿರಣ್ ಕುಮಾರ್ ಅವರಿಗೆ ಬೆಳ್ಳಿ ಕಿರೀಟ ನೀಡಿ ಸನ್ಮಾನಿಸಲಾಯಿತು. ಸಹಕಾರ ಸಚಿವ ಎಸ್. ಟಿ.ಸೋಮಶೇಖರ್ ಹಾಜರಿದ್ದರು.

ನಕಲಿ ಕೀ ಮಾಡಿಸಿ ಬೈಕ್ ಕಳವು

ಬೆಂಗಳೂರು: ನಕಲಿ ಕೀ ಮಾಡಿಸಿಟ್ಟುಕೊಂಡು ಸಾರ್ವಜನಿಕರ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪಿ ಅನಿಲ್‌ಕುಮಾರ್‌ನನ್ನು (24) ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ. 'ಸ್ಥಳೀಯ ಕಾವೇರಿಪುರ ನಿವಾಸಿ ಅನಿಲ್‌ಕುಮಾರ್, ಹಲವು ದಿನಗಳಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 8.15 ಲಕ್ಷ ಮೌಲ್ಯದ 6 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಿರುದ್ಯೋಗಿಯಾಗಿದ್ದ ಆರೋಪಿ, ಕಳ್ಳತನದಿಂದಲೇ ಹಣ ಸಂಪಾದನೆ ಮಾಡುತ್ತಿದ್ದ. ನಕಲಿ ಕೀ ಮಾಡಿಟ್ಟುಕೊಂಡಿದ್ದ ಆರೋಪಿ, ಮನೆ ಮುಂದೆ ನಿಲ್ಲಿಸುತ್ತಿದ್ದ ಹಾಗೂ ಪಾರ್ಕಿಂಗ್ ಜಾಗದಲ್ಲಿರುತ್ತಿದ್ದ ಬೈಕ್‌ಗಳನ್ನು ಕದ್ದೊಯ್ಯುತ್ತಿದ್ದ. ಇಂಥ ಬೈಕ್‌ಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ. ಖರೀದಿದಾರರು, ದಾಖಲೆ ಕೇಳಿದರೆ ಕೆಲ ದಿನ ಬಿಟ್ಟು ಕೊಡುವುದಾಗಿ ಹೇಳಿ ನಾಪತ್ತೆಯಾಗುತ್ತಿದ್ದ. ಕೆಲ ಬೈಕ್‌ಗಳನ್ನು ಆರೋಪಿ ಬಳಕೆ ಮಾಡುತ್ತಿದ್ದ. ಇತ್ತೀಚೆಗೆ ಆರೋಪಿ ಬಗ್ಗೆ ಮಾಹಿತಿ ಸಿಕ್ಕಿತ್ತು. ಕಾಮಾಕ್ಷಿಪಾಳ್ಯ, ಚಂದ್ರಾ ಲೇಔಟ್ ಹಾಗೂ ಜೆ.ಪಿ. ನಗರ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಬೈಕ್ ಕದ್ದಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿದರು.

ವಾಹನ ಕದ್ದಿದ್ದ ಆರೋಪದಡಿ ಬಂಧನ

ಬೆಂಗಳೂರು: ರಾಜರಾಜೇಶ್ವರಿ ನಗರ ಠಾಣೆ ವ್ಯಾಪ್ತಿಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. 'ಮಾರಪ್ಪ ಲೇಔಟ್ ನಿವಾಸಿ ಬಿಶ್ವಜಿತ್ ಮೊಂಡಲ್ (25) ಹಾಗೂ ಜಯದೇವ್ (20) ಬಂಧಿತರು. ಅವರಿಂದ ಒಟ್ಟು ₹1.23 ಲಕ್ಷ ಮೌಲ್ಯದ ಎರಡು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ದಕ್ಷಿಣ ತಮಿಳುನಾಡಿನ ಕೆಲವು ಸಮುದಾಯಗಳ ಧ್ರುವೀಕರಣ: ಡಿಎಂಕೆಗೆ ಅನುಕೂಲವಾಗುವ ಸಾಧ್ಯತೆ

ಎಐಎಡಿಎಂಕೆಗೆ ಜಾತಿ ಧ್ರುವೀಕರಣದ ಏಟು

• ಇ.ಟಿ.ಬಿ. ಶಿವಪ್ರಿಯನ್

ಮುಖ್ಯಾಂಶಗಳು

- ಚದುರಿಹೋದ ಕುಲಮತ್ತೂರು ಸಮುದಾಯದ ಮತಗಳು
- ಎಎಂಎಂಕೆಯತ್ತ ಜಾರುತ್ತಿವೆ ಸಣ್ಣ ಸಮುದಾಯಗಳು

ಮದುರೈ: ಕೆಲವು ಸಮುದಾಯಗಳ ವಿಶೇಷವಾಗಿ ಮುಕುಲತ್ತೂರು ಸಮುದಾಯದ ಮತಗಳು ಕ್ರೋಡೀಕರಣಗೊಳ್ಳುತ್ತಿರುವುದು, ಆಡಳಿತಾರೂಢ ಎಐಎಡಿಎಂಕೆಗೆ ತಮಿಳುನಾಡಿನ ದಕ್ಷಿಣ ಭಾಗದ ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ತಲೆನೋವಾಗಿ ಪರಿಣಮಿಸುವ ಸಾಧ್ಯತೆ ಇದೆ.

ದೀರ್ಘಕಾಲದಿಂದ ಎಐಎಡಿಎಂಕೆಗೆ ಬೆಂಬಲವಾಗಿ ನಿಂತಿದ್ದ ಮುಕುಲತ್ತೂರು ಸಮುದಾಯದ ಮತಗಳು ಪಕ್ಷದಿಂದ ಚದುರಿ ಹೋಗುತ್ತಿರುವುದು 2019ರ ಲೋಕಸಭಾ ಚುನಾವಣೆ ಹಾಗೂ ಆ ನಂತರ ನಡೆದ ಉಪಚುನಾವಣೆಗಳಲ್ಲಿ ಪಕ್ಷದ ಅನುಭವಕ್ಕೆ ಬಂದಿದೆ. ಈ ಮತಗಳು ವಿ.ಕೆ. ಶಶಿಕಲಾ ಅವರ ಸೋದರಳಿಯ ಟಿ.ಟಿ.ವಿ. ದಿನಕರನ್ ನೇತೃತ್ವದ ಎಎಂಎಂಕೆ ಪಕ್ಷದತ್ತ ವಾಲುತ್ತಿವೆ.

ಎಎಂಎಂಕೆಯು ಈ ಬಾರಿ ನಟ ವಿಜಯಕಾಂತ್ ನೇತೃತ್ವದ ಡಿಎಂಡಿಕೆ ಪಕ್ಷದ ಜತೆ ಮೈತ್ರಿ ಮಾಡಿಕೊಂಡಿದೆ. ರಾಜ್ಯದ ಕೆಲವು ಭಾಗಗಳಲ್ಲಿ ಈ ಪಕ್ಷವು ಪ್ರಭಾವ ಹೆಚ್ಚಿಸಿಕೊಂಡಿರುವುದರಿಂದ, ದಕ್ಷಿಣದ 10 ಜಿಲ್ಲೆಗಳ 58 ಕ್ಷೇತ್ರಗಳಲ್ಲಿ ಎಐಎಡಿಎಂಕೆ– ಬಿಜೆಪಿ ಮೈತ್ರಿ ಅಭ್ಯರ್ಥಿಗಳಿಗೆ ಮುಳುವಾಗಿ, ಇದರ ಲಾಭವು ಡಿಎಂಕೆ– ಕಾಂಗ್ರೆಸ್ ಮೈತ್ರಿಗೆ ಆಗುವ ಸಾಧ್ಯತೆ ಇದೆ.

ದಿನಕರನ್ ಮತ್ತು ಎಐಎಡಿಎಂಕೆ: ಕೆಲವು ಸಮುದಾಯದ ಮತಗಳು ಎಐಎಡಿಎಂಕೆಯ ಕೈಜಾರಲು ದಿನಕರನ್ ಪ್ರಭಾವವೊಂದೇ ಕಾರಣವಲ್ಲ. ಶಶಿಕಲಾ ಅವರನ್ನು ಮೂಲೆಗುಂಪು ಮಾಡಿದ್ದು, ಶೇ 20ರಷ್ಟು ಎಂಬಿಸಿ ಮೀಸಲಾತಿಯಲ್ಲಿ ಶೇ 10.5ರಷ್ಟನ್ನು ಪ್ರಭಾವಿ ಸಮುದಾಯವಾದ ವಣ್ಣಿಯಾರ್ ಸಮುದಾಯಕ್ಕೆ ನೀಡಲು ತೀರ್ಮಾನಿಸಿದ್ದು, ಪರಿಶಿಷ್ಟ ಜಾತಿಯ ಪಲ್ಲಾರ್ ಸೇರಿದಂತೆ ಏಳು ಉಪಜಾತಿಗಳನ್ನು 'ದೇವೇಂದ್ರಕುಲ ವೆಲ್ಲಾಲರ್' ಅಡಿ ಸೇರಿಸಿದ ಕೇಂದ್ರದ ನಿರ್ಧಾರಗಳೂ ಎಐಎಡಿಎಂಕೆಯ ಗೆಲುವಿಗೆ ತಡೆಯೊಡ್ಡುವ ಸಾಧ್ಯತೆ ಇದೆ.

ಇನ್ನೊಂದೆಡೆ, 2019ರಲ್ಲಿ ತನಗೆ ಲಭಿಸಿದ ಮತಗಳನ್ನು ಭದ್ರವಾಗಿರಿಸಲು ಡಿಎಂಕೆ ಸರ್ವ ಪ್ರಯತ್ನಗಳನ್ನು ಮಾಡುತ್ತಿದೆ. ತೂತ್ತುಕುಡಿಯಲ್ಲಿ ನಡೆಸಿದ್ದ ಸ್ಟರ್‌ಲೈಟ್ ಸಂಸ್ಥೆ ವಿರುದ್ಧದ ಹೋರಾಟವು ಈ ವಿಚಾರದಲ್ಲಿ ಪಕ್ಷಕ್ಕೆ ಲಾಭವಾಗಿ ಪರಿಣಮಿಸಬಹುದು. ಆಡಳಿತ ವಿರೋಧಿ ಅಲೆ ಹಾಗೂ ಕಾಂಗ್ರೆಸ್, ಎಡಪಕ್ಷಗಳು ಹಾಗೂ ಎಂಡಿಎಂಕೆಯ ಪಾರಂಪರಿಕ ಮತಗಳು ತಮ್ಮನ್ನು ಗೆಲ್ಲಿಸಬಲ್ಲವು ಎಂಬ ನಿರೀಕ್ಷೆಯೂ ಡಿಎಂಕೆ ನಾಯಕರಿಗಿದೆ.

ಆದರೆ, ಏಳು ಉಪ ಜಾತಿಗಳನ್ನು ದೇವೇಂದ್ರಕುಲ ವೆಲ್ಲಾಲರ್ ಗುಂಪಿನಡಿ ತಂದಿರುವುದರಿಂದ ಮುಕುಲತ್ತೂರ್, ಪಿಳ್ಳೈ, ಶೈವ ವೆಲಲಾರ್ ಮುಂತಾದ ಪ್ರಭಾವಿ ಸಮುದಾಯಗಳ ಮತಗಳು ನಮ್ಮತ್ತ ಬರಲಿವೆ ಎಂದು ಎಐಎಡಿಎಂಕೆ ಲೆಕ್ಕಾಚಾರ ಹಾಕಿದೆ.

ದಕ್ಷಿಣದ ಐದು ಲೋಕಸಭಾ ಕ್ಷೇತ್ರಗಳಲ್ಲಿ ಕಳೆದಬಾರಿ ಎಎಂಎಂಕೆ ಪಕ್ಷವು ಒಂದು ಲಕ್ಷಕ್ಕೂ ಹೆಚ್ಚು ಮತಗಳನ್ನು ಪಡೆದಿತ್ತು. ಇದು ಮುಕುಲತ್ತೂರು ಸಮುದಾಯದ ಮತಗಳು ಧ್ರುವೀಕರಣಗೊಂಡಿರುವುದರ ಸೂಚನೆಯಾಗಿದೆ. ಶಶಿಕಲಾ ಅವರು ಇದೇ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಅಷ್ಟೇ ಅಲ್ಲ, 2019ರಲ್ಲಿ ನಡೆದ ಉಪಚುನಾವಣೆಯಲ್ಲೂ ಈ ಸಮುದಾಯದ ಮತಗಳು ಎಐಎಡಿಎಂಕೆಯ ಸೋಲಿಗೆ ಕಾರಣವಾಗಿದ್ದವು.

ವಣ್ಣಿಯಾರ್ ಸಮುದಾಯಕ್ಕೆ ಶೇ 10.5ರಷ್ಟು ಮೀಸಲಾತಿ ನೀಡಿದ್ದಕ್ಕಾಗಿ ಮುಕುಲತ್ತೂರು ಸಮುದಾಯದ ಉಪ ಪಂಗಡ ಪಿರಮಲೈ ಕಲ್ಲಾರ್‌ನ ಮತದಾರರು ಎಐಎಡಿಎಂಕೆ ಜತೆಗೆ ಮುನಿಸಿಕೊಂಡಿದ್ದಾರೆ. ಈ ಕ್ರಮದಿಂದ ಎಂಬಿಸಿ ಕೋಟಾದ ಅಡಿ ತಮಗೆ ಲಭಿಸುತ್ತಿದ್ದ ಸೌಲಭ್ಯಗಳಲ್ಲಿ ಒಂದು ಭಾಗವನ್ನು ಈ ಸಮುದಾಯ ಕಸಿದುಕೊಳ್ಳಲಿದೆ ಎಂಬುದು ಅವರ ವಾದ. ಉಪಮುಖ್ಯಮಂತ್ರಿ ಪನ್ನೀರ್‌ಸೆಲ್ವಂ ಅವರು ಪ್ರತಿನಿಧಿಸುವ ಬೋದಿನಾಯಕನೂರು ಸೇರಿದಂತೆ ಕನಿಷ್ಠ 8 ವಿಧಾನಸಭಾ ಕ್ಷೇತ್ರಗಳಲ್ಲಿ ಪಿರಮಲೈ ಕಲ್ಲಾರ್ ಸಮುದಾಯದ ಮತಗಳು ನಿರ್ಣಾಯಕವಾಗಿವೆ.

'ಭಿನ್ನಾಭಿಪ್ರಾಯಗಳ ಹೊರತಾಗಿಯೂ ಮುಕುಲತ್ತೂರು ಸಮುದಾಯವು ಎಂಜಿಆರ್ ಕಾಲದಿಂದ ಇತ್ತೀಚಿನವರೆಗೆ ಎಐಎಡಿಎಂಕೆಗೆ ಬೆಂಬಲವಾಗಿ ನಿಂತಿತ್ತು. ಶಶಿಕಲಾ ಅವರನ್ನು ಮೂಲೆಗುಂಪು ಮಾಡಿದ್ದು ಮತ್ತು ಎಎಂಎಂಕೆ ಪ್ರವೇಶದಿಂದ ಎಐಎಡಿಎಂಕೆಯ ಚಿಂತೆಯನ್ನು ಈ ಸಮುದಾಯವು ಹೆಚ್ಚಿಸಿದೆ' ಎಂದು ರಾಜಕೀಯ ವಿಶ್ಲೇಷಕ ಪಿ. ರಾಮಜಯಂ ವಿಶ್ಲೇಷಿಸಿದ್ದಾರೆ.

ಹಿಂದುಳಿದ ಜಿಲ್ಲೆಗಳಾದ ಶಿವಗಂಗಾ ಮತ್ತು ರಾಮನಾಥಪುರಂನಲ್ಲಿ ಈ ಬಾರಿ ಕುಡಿಯುವ ನೀರು, ನೀರಾವರಿ ಹಾಗೂ ಸೌಲಭ್ಯಗಳ ಕೊರತೆಯೇ ಚುನಾವಣೆಯ ಮುಖ್ಯ ವಿಷಯಗಳಾಗಿವೆ. ಆಡಳಿತದಲ್ಲಿ ಬದಲಾವಣೆ ಆಗಲೇಬೇಕು ಎಂದು ಇಲ್ಲಿನ ಜನರು ಈಗ ವಾದಿಸುತ್ತಿದ್ದಾರೆ.

ಮುಸ್ಲಿಂ ಮತಗಳನ್ನು ತಮ್ಮತ್ತ ಸೆಳೆಯುವ ಪ್ರಯತ್ನಗಳನ್ನು ಎಎಂಎಂಕೆ ಮಾಡುತ್ತಿದ್ದರೂ, ತೂತ್ತುಕುಡಿ, ತಿರುನಲ್ವೇಲಿ ಹಾಗೂ ಕನ್ಯಾಕುಮಾರಿ ಜಿಲ್ಲೆಗಳ ಅಲ್ಪಸಂಖ್ಯಾತ ಮತಗಳು ಡಿಎಂಕೆ– ಕಾಂಗ್ರೆಸ್ ಮೈತ್ರಿಕೂಟದ ಪಾಲಾಗುವ ಸಾಧ್ಯತೆ ಹೆಚ್ಚಿದೆ. ನಗರ ಪ್ರದೇಶದ ಯುವಕರ ಮತಗಳನ್ನು ಮಕ್ಕಳ್ ನೀಧಿ ಮಯ್ಯಂ ಸೆಳೆಯಬಹುದು. ಆದರೆ ಗ್ರಾಮೀಣ ಭಾಗದಲ್ಲಿ ಯುವಕರ ಮತಗಳನ್ನು ನಾಮ್ ತಮಿಳರ್ ಕಚ್ಚಿ (ಎನ್‌ಟಿಕೆ) ಸೆಳೆಯುವ ನಿರೀಕ್ಷೆ ಇದೆ.

ತಮಿಳುನಾಡು ಮುಖ್ಯಮಂತ್ರಿ ಎಡಪ್ಪಾಡಿ ಪಳನಿಸ್ವಾಮಿ ಮತ್ತು ಉಪ ಮುಖ್ಯಮಂತ್ರಿ ಒ. ಪನ್ನೀರ್‌ಸೆಲ್ವಂ ಅವರಿಂದ ಚುನಾವಣಾ ಪ್ರಚಾರ

2016ರಲ್ಲಿಯೂ ಹಿನ್ನಡೆ

2016ರ ಫಲಿತಾಂಶ ಹಾಗೂ ಅಂಕಿಅಂಶಗಳನ್ನು ನೋಡಿದರೂ ಈ ಬಾರಿ ಎಐಎಡಿಎಂಕೆ ಮೈತ್ರಿಕೂಟಕ್ಕೆ ಒಳ್ಳೆಯ ಭವಿಷ್ಯವೇನೂ ಕಾಣಿಸುತ್ತಿಲ್ಲ. 2016ರಲ್ಲಿ ಜಯಲಲಿತಾ ಅವರು ಈ ಭಾಗದಲ್ಲಿ ಭಾರಿ ಪ್ರಚಾರ ನಡೆಸಿದ್ದರೂ 32 ಕ್ಷೇತ್ರಗಳನ್ನು ಮಾತ್ರ ಗೆಲ್ಲಲು ಎಐಎಡಿಎಂಕೆಗೆ ಸಾಧ್ಯವಾಗಿತ್ತು. ಡಿಎಂಕೆ– ಕಾಂಗ್ರೆಸ್ ಮೈತ್ರಿಯು 26 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ನಾಲ್ಕು ಕ್ಷೇತ್ರಗಳಲ್ಲಿ ಎಐಎಡಿಎಂಕೆ ಅಭ್ಯರ್ಥಿಗಳ ಗೆಲುವಿನ ಅಂತರವು 500 ಮತಗಳಿಗೂ ಕಡಿಮೆ ಇತ್ತು.

'ಜಯಲಲಿತಾ ಅವರ ಸಾವಿನ ವಿಚಾರವಾಗಿ ನಾವು ಯಾವತ್ತೂ ಶಶಿಕಲಾ ವಿರುದ್ಧ ಕೆಟ್ಟ ಮಾತುಗಳನ್ನಾಡಿರಲಿಲ್ಲ' ಎಂದು ಉಪಮುಖ್ಯಮಂತ್ರಿ ಒ. ಪನ್ನೀರ್‌ಸೆಲ್ವಂ ಹಾಗೂ ಇತರ ಕೆಲವು ಸಚಿವರು ಇತ್ತೀಚೆಗೆ ಹೇಳಿಕೆ ನೀಡಿದ್ದಾರೆ. ಇದು ಈ ಭಾಗದಲ್ಲಿ ಎಐಎಡಿಎಂಕೆಯ ಸ್ಥಿತಿ ಚೆನ್ನಾಗಿಲ್ಲ ಎಂಬುದರ ಸೂಚನೆ' ಎಂದು ವಿಶ್ಲೇಷಿಸಲಾಗಿದೆ.

'ಕರಿ' ದಿನ: ಸತೀಶ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಸತೀಶ ಜಾರಕಿಹೊಳಿ ಮಾರ್ಚ್ 29ರಂದು ಬೆಳಿಗ್ಗೆ 11ಕ್ಕೆ ನಾಮಪತ್ರ ಸಲ್ಲಿಸಲಿದ್ದಾರೆ.

ಈ ಭಾಗದಲ್ಲಿ ಹೋಳಿ ಹುಣ್ಣಿಮೆ ಮರು ದಿನವನ್ನು (ಸೋಮವಾರ) 'ಕರಿ' ಎಂದು ಗುರುತಿಸಲಾಗುತ್ತದೆ. ಅಂದು ಶುಭ ಕಾರ್ಯ ಮಾಡಲು ಬಹುತೇಕರು ಬಯಸುವುದಿಲ್ಲ. ನಾಮಪತ್ರ ಸಲ್ಲಿಕೆಗೆ ಸತೀಶ ಅವರು ಈ ದಿನವನ್ನು ಆಯ್ಕೆ ಮಾಡಿಕೊಂಡಿದ್ದಾರೆ.

'ಆಡಂಬರ, ಮೆರವಣಿಗೆ ಇಲ್ಲದೆ ಸರಳವಾಗಿ, ಪಕ್ಷದ ಮುಖಂಡರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಲು ನಿರ್ಧರಿಸಲಾಗಿದೆ. ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬಾರದು' ಎಂದು ಕೋರಿದ್ದಾರೆ.

'ಯಮಕನಮರಡಿ ವಿಧಾನಸಭಾ ಕ್ಷೇತ್ರದ ಚುನಾವಣೆ ವೇಳೆ ರಾಹುಕಾಲದಲ್ಲಿ ನಾಮಪತ್ರ ಸಲ್ಲಿಸಿದ್ದೆ. ಕರಿ ದಿನ, ರಾಹುಕಾಲದಲ್ಲಿ ನನಗೆ ನಂಬಿಕೆ ಇಲ್ಲ. ಒಳ್ಳೆ ಕೆಲಸ ಮಾಡಿದರೆ ಒಳ್ಳೆಯ ಕಾಲ. ಕೆಟ್ಟ ಕೆಲಸ ಮಾಡಿದರೆ ಕೆಟ್ಟ ಕಾಲ' ಎಂದು ಪ್ರತಿಕ್ರಿಯಿಸಿದರು.

ಎಂ.ಜಿ.ಮುಳೆ ಇಂದು ಎನ್‌ಸಿಪಿಗೆ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣ (ಬೀದರ್ ಜಿಲ್ಲೆ): 'ಮಾಜಿ ಶಾಸಕ ಎಂ.ಜಿ. ಮುಳೆ ಅವರು ಸೋಮವಾರ (ಮಾರ್ಚ್ 29) ಜೆಡಿಎಸ್ ತೊರೆದು ಎನ್‌ಸಿಪಿಗೆ ಸೇರ್ಪಡೆ ಆಗುವರು.

ಇಲ್ಲಿನ ಪಕ್ಷದ ಕಚೇರಿಯಲ್ಲಿ ಬೆಳಿಗ್ಗೆ 11ಕ್ಕೆ ನಡೆಯುವ ಸೇರ್ಪಡೆ ಸಮಾರಂಭದಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ತಿಲಕ ನಂದ್ಯಾಳ ಭಾಗವಹಿಸುವರು. ಮಾರ್ಚ್ 30ರಂದು ಕ್ಷೇತ್ರದ ಉಪ ಚುನಾವಣೆಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವರು' ಎಂದು ಪಕ್ಷದ ರಾಜ್ಯ ಘಟಕದ ಕಾರ್ಯದರ್ಶಿ ರಾಮಭಾವು ಜಾಧವ ತಿಳಿಸಿದ್ದಾರೆ.

ಸಭೆಗೂ ಬಿಜೆಪಿಗೂ ಸಂಬಂಧವಿಲ್ಲ: 'ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾರ್ಚ್ 30ರಂದು ಉಪಚುನಾವಣೆ ಸಂಬಂಧ ಆಯೋಜಿಸಿರುವ ಸಭೆಗೂ ಬಿಜೆಪಿಗೂ ಸಂಬಂಧವಿಲ್ಲ. ಅವರ ಯಾವುದೇ ಸಭೆಯಲ್ಲಿ ಪಕ್ಷದ ಪದಾಧಿಕಾರಿಗಳು ಪಾಲ್ಗೊಂಡರೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಶಿವಾನಂದ ಮಂಠಾಳಕರ್ ಎಚ್ಚರಿಕೆ ನೀಡಿದ್ದಾರೆ.

ಬಿಜೆಪಿ ಬಲೆಯಲ್ಲಿ ಪಳನಿಸ್ವಾಮಿ: ರಾಹುಲ್

ಚೆನ್ನೈ (ಪಿಟಿಐ): 'ಭ್ರಷ್ಟಾಚಾರ ನಡೆಸಿರುವ ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಅವರು ಬಿಜೆಪಿಯ ಬಲೆಗೆ ಬಿದ್ದಿದ್ದು, ಈಗ ಕೇಂದ್ರದ ಸಚಿವ ಅಮಿತ್ ಶಾ ಅವರ ಮುಂದೆ ತಲೆತಗ್ಗಿಸಿ ನಿಂತಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಭಾನುವಾರ ಟೀಕಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು ತಮಿಳುನಾಡಿನ ಮುಖ್ಯಮಂತ್ರಿಯನ್ನು ನಿಯಂತ್ರಿಸುವುದು ಮತ್ತು ತಮ್ಮ ಕಾಲು ಮುಟ್ಟಿ ನಮಸ್ಕರಿಸುವಂತೆ ಮಾಡುವುದನ್ನು ನೋಡಿದ್ದೇನೆ. ಇದನ್ನು ಸ್ವೀಕರಿಸಲು ನಾನು ಸಿದ್ಧನಿಲ್ಲ. ಉತ್ತರ ಪ್ರದೇಶದಲ್ಲೂ ಒಬ್ಬ ಭ್ರಷ್ಟ ನಾಯಕನನ್ನು ಬಲೆಗೆ ಬೀಳಿಸಿರುವ ಬಿಜೆಪಿಯು, ಶಾ ಅವರ ಮುಂದೆ ತಲೆತಗ್ಗಿಸಿ ನಿಲ್ಲುವಂತೆ ಮಾಡಿದೆ. ಪಳನಿಸ್ವಾಮಿಯ ಸ್ಥಿತಿಯೂ ಹಾಗೆಯೇ ಆಗಿದೆ' ಎಂದು ರಾಹುಲ್ ಹೇಳಿದರು. ಆದರೆ ಉತ್ತರ ಪ್ರದೇಶದ ನಾಯಕನ ಹೆಸರನ್ನು ಅವರು ಉಲ್ಲೇಖಿಸಿಲ್ಲ.

'ಶಾ ಅವರ ಮುಂದೆ ತಲೆ ತಗ್ಗಿಸುವ ಇಚ್ಛೆ ಮುಖ್ಯಮಂತ್ರಿಗೆ ಇಲ್ಲ. ಅಷ್ಟೇ ಅಲ್ಲ ತಮಿಳುನಾಡಿನ ಯಾವೊಬ್ಬನೂ ಅದನ್ನು ಬಯಸಲಾರ. ಭವ್ಯವಾದ ತಮಿಳು ಸಂಸ್ಕೃತಿಗೆ ಸೇರಿರುವ ವ್ಯಕ್ತಿಯು ಮೋದಿ, ಶಾ ಅವರ ಮುಂದೆ ತಲೆತಗ್ಗಿಸಿ ನಿಂತಿರುವುದು, ಅವರ ಕಾಲು ಮುಟ್ಟಿ ನಮಸ್ಕರಿಸುವುದನ್ನು ನೋಡಿ ನನಗೆ ಸಿಟ್ಟು ಬಂದಿತ್ತು. ಆದರೆ ಅವರು ಮಾಡಿದ ಭ್ರಷ್ಟಾಚಾರದ ಕಾರಣದಿಂದ ತಲೆತಗ್ಗಿಸಿ ನಿಲ್ಲಬೇಕಾಗಿ ಬಂದಿದೆ' ಎಂದರು.

'ಮಾಸ್ಕ್ ಧರಿಸಿದ ಎಐಎಡಿಎಂಕೆ'

ಕೋವಿಡ್–19 ತಡೆಗಟ್ಟಲು ಧರಿಸುವ ಮಾಸ್ಕ್ ಮತ್ತು ಎಐಎಡಿಎಂಕೆಯನ್ನು ಹೋಲಿಸಿ ರಾಹುಲ್ ಮಾತನಾಡಿದ್ದಾರೆ. ಆಡಳಿತ ಪಕ್ಷದ ಹಿಂದೆ ಇರುವುದು ಆರ್‌ಎಸ್‌ಎಸ್ ಮತ್ತು ಬಿಜೆಪಿ. ಎಐಎಡಿಎಂಕೆ ಮಾಸ್ಕ್ ಮಾತ್ರ ಎಂದು ಹೇಳಿದರು. ಸೇಲಂನಲ್ಲಿ ನಡೆದ ಭಾರಿ ಸಮಾವೇಶದಲ್ಲಿ ಅವರು ಮಾತನಾಡಿದರು. ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಮೈತ್ರಿಕೂಟದ ಎಲ್ಲ ಅಂಗ ಪಕ್ಷಗಳ ಮುಖಂಡರು ಭಾಗಿಯಾಗಿದ್ದರು.

ಬಿಜೆಪಿಗೆ ಅನುಕೂಲ ಮಾಡಿಕೊಡಲು ನಿಯಮ ಬದಲಿಸಿದ ಆಯೋಗ: ಟಿಎಂಸಿ ಆರೋಪ

'ಏಜೆಂಟ್ ನೇಮಕ ಹಳೆ ನಿಯಮ ವಾಪಸ್ ತನ್ನಿ'

ನವದೆಹಲಿ (ಪಿಟಿಐ): ಒಂದು ವಿಧಾನಸಭಾ ಕ್ಷೇತ್ರದ ಮತದಾರ ತನ್ನ ಕ್ಷೇತ್ರದ ಯಾವುದೇ ಮತಗಟ್ಟೆಯ ಏಜೆಂಟ್ ಆಗಿ ಕೆಲಸ ಮಾಡಲು ಅವಕಾಶ ನೀಡುವ ಆದೇಶ ಹೊರಡಿಸುವಂತೆ ಚುನಾವಣಾ ಆಯೋಗವನ್ನು ಕೇಳಿಕೊಳ್ಳಬೇಕು ಎಂದು ಬಿಜೆಪಿಯ ಇಬ್ಬರು ನಾಯಕರು ಮಾತನಾಡಿಕೊಂಡಿದ್ದಾರೆ ಎಂದು ಹೇಳಲಾದ ದೂರವಾಣಿ ಕರೆಯ ಆಡಿಯೊ ಕ್ಲಿಪ್ ಅನ್ನು ಟಿಎಂಸಿ ಶನಿವಾರ ರಾತ್ರಿ ಬಿಡುಗಡೆ ಮಾಡಿದೆ.

ಇದು ಟಿಎಂಸಿ ಮತ್ತು ಬಿಜೆಪಿ ನಡುವಣ ವಾಗ್ವಾದಕ್ಕೆ ಕಾರಣವಾಗಿದೆ. ಅಲ್ಲದೆ, ಟಿಎಂಸಿಯು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ. ಈ ಆದೇಶವನ್ನು ವಾಪಸ್ ಪಡೆಯಬೇಕು ಎಂದು ಟಿಎಂಸಿ ಒತ್ತಾಯಿಸಿದೆ.

ಬಿಜೆಪಿ ನಾಯಕರಾದ ಮುಕುಲ್ ರಾಯ್ ಮತ್ತು ಶಿಶಿರ್ ಬಜೋರಿಯಾ ಅವರ ನಡುವಣ ಫೋನ್ ಮಾತುಕತೆಯ ಆಡಿಯೊ ಕ್ಲಿಪ್ ಅನ್ನು ಟಿಎಂಸಿ ಬಿಡುಗಡೆ ಮಾಡಿದೆ. ಚುನಾವಣಾ ಆಯೋಗದ ಜತೆ ನಡೆಸಬೇಕಿರುವ ಮಾತುಕತೆಗೆ ಪಟ್ಟಿ ಸಿದ್ಧಪಡಿಸಿಕೊಳ್ಳುವುದರ ಬಗ್ಗೆ ಇಬ್ಬರು ನಾಯಕರೂ ದೂರವಾಣಿ ಮೂಲಕ ಚರ್ಚಿಸಿದ್ದಾರೆ. ಮುಖ್ಯವಾಗಿ ಮತಗಟ್ಟೆ ಏಜೆಂಟ್‌ಗಳ ನೇಮಕದ ಬಗ್ಗೆ ಹೆಚ್ಚು ಚರ್ಚೆ ನಡೆಸಿದ್ದಾರೆ.

ಬಿಜೆಪಿಯ ಇಬ್ಬರು ಪ್ರಮುಖ ನಾಯಕರ ಮಧ್ಯೆ ಈ ಸಂಭಾಷಣೆ ಯಾವಾಗ ನಡೆದಿದೆ ಎಂಬ ಮಾಹಿತಿ ಬಹಿರಂಗವಾಗಿಲ್ಲ. ಆದರೆ, ಚುನಾವಣಾ ಆಯೋಗವು ಕಳೆದ ವಾರವಷ್ಟೇ ಈ ನಿಯಮಗಳಲ್ಲಿ ಬದಲಾವಣೆ ಮಾಡಿ, ಆದೇಶ ನೀಡಿತ್ತು. ಈಗ ಈ ಆದೇಶವನ್ನು ವಾಪಸ್ ಪಡೆಯಬೇಕು ಎಂದು ಟಿಎಂಸಿ ಪಟ್ಟು ಹಿಡಿದಿದೆ.

ಕದ್ದು ಆಲಿಸಿದವರು ಯಾರು?

'ಬಿಜೆಪಿ ನಾಯಕರ ದೂರವಾಣಿ ಕರೆಯನ್ನು ಕದ್ದಾಲಿಕೆ ಮಾಡಿದವರು ಯಾರು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಶ್ನಿಸಿದ್ದಾರೆ.

'ಈ ಆಡಿಯೊ ಕ್ಲಿಪ್ ದೂರವಾಣಿ ಕದ್ದಾಲಿಕೆಯದ್ದು. ಕದ್ದಾಲಿಕೆ ಮಾಡುವುದು ಕಾನೂನುಬಾಹಿರವಲ್ಲವೇ? ಫೋನ್ ಕರೆಯನ್ನು ಯಾರು ಮತ್ತು ಏಕೆ ಕದ್ದಾಲಿಕೆ ಮಾಡಿದರು ಎಂಬ ವಿವರವನ್ನು ಟಿಎಂಸಿ ಲಿಖಿತ ರೂಪದಲ್ಲಿ ನೀಡಬೇಕು' ಎಂದು ಅಮಿತ್ ಶಾ ಆಗ್ರಹಿಸಿದ್ದಾರೆ.

ಮೊದಲು ಇದ್ದ ನಿಯಮ

ಮತಗಟ್ಟೆ ಏಜೆಂಟರ ನೇಮಕಕ್ಕೆ ಸಂಬಂಧಿಸಿದಂತೆ ಚುನಾವಣಾ ಆಯೋಗವು 2009ರ ಮಾರ್ಚ್‌ನಲ್ಲಿ ಆದೇಶ ಹೊರಡಿಸಿತ್ತು. 'ಆಯಾ ಕ್ಷೇತ್ರದ ಅಭ್ಯರ್ಥಿಯು ತಮ್ಮ ಮತಗಟ್ಟೆ ಏಜೆಂಟರನ್ನು ನೇಮಕ ಮಾಡಬಹುದು. ಆ ಕ್ಷೇತ್ರದಲ್ಲಿ ಬರುವ ಮತಗಟ್ಟೆಯ ಅಥವಾ ಪಕ್ಕದ ಮತಗಟ್ಟೆಯ ಮತದಾರನನ್ನು ಮಾತ್ರ ಮತಗಟ್ಟೆ ಏಜೆಂಟ್ ಆಗಿ ನೇಮಕ ಮಾಡಬಹುದು' ಎಂದು ಆದೇಶದಲ್ಲಿ ವಿವರಿಸಲಾಗಿತ್ತು.

ಸಂಭಾಷಣೆಯ ವಿವರ

'ಮತಗಟ್ಟೆಗಳಲ್ಲಿ ಏಜೆಂಟ್ ಆಗಿ ಕಾರ್ಯನಿರ್ವಹಿಸುವವರು ಅದೇ ಮತಗಟ್ಟೆಯ ಮತದಾರರಾಗಿರಬೇಕು ಎಂಬ ನಿಯಮವನ್ನು ಬದಲಾಯಿಸಬೇಕು. ರಾಜ್ಯದ ಮತದಾರರು, ರಾಜ್ಯದ ಯಾವ ಮತಗಟ್ಟೆಯಲ್ಲಾದರೂ ಪಕ್ಷಗಳ ಏಜೆಂಟ್ ಆಗಿ ಕಾರ್ಯನಿರ್ವಹಿಸಬಹುದು ಎಂದು ನಿಯಮವನ್ನು ಬದಲಿಸುವಂತೆ ಕೇಳಿಕೊಳ್ಳಬೇಕು. ಈ ಕೆಲಸ ಆಗದಿದ್ದರೆ, ಮತದಾನದ ದಿನ ಮತಗಟ್ಟೆಗಳಲ್ಲಿ ಏಜೆಂಟರಾಗಿ ನೇಮಕ ಮಾಡಲೂ ನಮ್ಮಲ್ಲಿ ಜನರಿಲ್ಲ. ಹಲವು ಮತಗಟ್ಟೆಗಳಲ್ಲಿ ಏಜೆಂಟ್‌ಗಳನ್ನು ಹಾಕಲು ಸಾಧ್ಯವೇ ಇಲ್ಲ' ಎಂದು ಮುಕುಲ್ ರಾಯ್ ಹೇಳಿದ್ದಾರೆ. ಶಿಶಿರ್ ಅವರು ಇದಕ್ಕೆ ಸಮ್ಮತಿ ಸೂಚಿಸಿದ್ದಾರೆ.

ಆಯೋಗದ ಆದೇಶ

'ಕೆಲವು ಸಣ್ಣ-ಪುಟ್ಟ ಪಕ್ಷಗಳಿಗೆ ಎಲ್ಲಾ ಮತಗಟ್ಟೆಗಳಲ್ಲಿ, ಆಯಾ ಮತಗಟ್ಟೆಯ ಮತದಾರರನ್ನೇ ಏಜೆಂಟರಾಗಿ ನೇಮಕ ಮಾಡಲು ಸಾಧ್ಯವಾಗುತ್ತಿಲ್ಲವಂತೆ. ಈ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ, ನಿಯಮಗಳಲ್ಲಿ ಬದಲಾವಣೆ ಮಾಡಲಾಗಿದೆ. ಆಯಾ ವಿಧಾನಸಭಾ ಕ್ಷೇತ್ರದ ಯಾವುದೇ ಮತದಾರನನ್ನು, ಯಾವುದೇ ಮತಗಟ್ಟೆಯ ಏಜೆಂಟ್ ಆಗಿ ನೇಮಕ ಮಾಡಬಹುದು' ಎಂದು ಚುನಾವಣಾ ಆಯೋಗವು ಮಾರ್ಚ್ 19ರಂದು ಆದೇಶ ಹೊರಡಿಸಿತ್ತು.

'ಬಿಜೆಪಿ ಪರ ಪಕ್ಷಪಾತ'

'ಬಿಜೆಪಿಯ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡಲು ಚುನಾವಣಾ ಆಯೋಗವು ಇಂತಹ ಬದಲಾವಣೆ ಮಾಡಿದೆ. ಈ ಬದಲಾವಣೆಗೆ ಆಯೋಗವು ನೀಡಿರುವ ಕಾರಣ ಅಸ್ಪಷ್ಟವಾಗಿದೆ. ಯಾವುದೋ ಒಂದು ರಾಜಕೀಯ ಪಕ್ಷಕ್ಕೆ, ಅದರಲ್ಲೂ ಬಿಜೆಪಿಗೆ ಅನುಕೂಲ ಮಾಡಿಕೊಡಲು ಇಂತಹ ಬದಲಾವಣೆ ಮಾಡಲಾಗಿದೆ ಎಂದು ಅನುಮಾನ ಮೂಡುತ್ತಿದೆ. ಮತದಾನದ ದಿನಗಳು ನಿಗದಿಯಾಗಿ, ಮತದಾನಕ್ಕೆ ಒಂದೆರಡು ದಿನ ಬಾಕಿ ಇರುವಾಗ ಇಂತಹ ಆದೇಶ ಹೊರಡಿಸುವುದು ಕಾನೂನುಬಾಹಿರ. ಇದು ಪಕ್ಷಪಾತದ ನಿರ್ಧಾರ. ಈ ಕೂಡಲೇ ಈ ಆದೇಶವನ್ನು ವಾಪಸ್ ಪಡೆಯಬೇಕು' ಎಂದು ಟಿಎಂಸಿ ಆಗ್ರಹಿಸಿದೆ.

KRISHNA BHAGYA JALA NIGAM LIMITED.
(A.Government of Karnataka Undertaking)
Office of the Executive Engineer, KBJNL NLBC Division., (Irrigation Department) Hunasagi-585215
Tq :Hunasagi, Dist :Yadigir. State:Karnataka - Ph/Fax No-08444-200422

IFT. No.: KBJNL/ NLBC/PB/AWP/2020-21/ 1155 Date:-26.03.2021

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಅಡಿ 2020–21ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡಿರುತ್ತದೆ. ಒಟ್ಟು 07 ಕಾಮಗಾರಿಗಳಲ್ಲಿ, 05 Two Cover System ಮತ್ತು 02 single cover System ಮುಖಾಂತರ ಟೆಂಡರ ಆಹ್ವಾನಿಸಲಾಗಿದ್ದು Qualification criteria ನಲ್ಲಿ ನಮೂದಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಅರ್ಹ ದರ್ಜೆ ಗುತ್ತಿಗೆದಾರರು ಭಾಗವಹಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಈ ಕಛೇರಿ ಟೆಂಡರು ಪ್ರಕಟಣೆ ಸಂ. 1151/1152/1153/2020–21 ದಿನಾಂಕ: 25–03–2021 ಅಡಿಯಲ್ಲಿ ಮೊಹರಾದ ಶೇಕಡಾವಾರು ಟೆಂಡರ್‌ಗಾಗಿ ಇ–ಪೋರ್ಟಲ್ ಮುಖಾಂತರ http://eproc.karnataka.gov.in/eportal/ines.seam ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ ಪ್ರಕ್ರಿಯೆಯು ಈ ಕೆಳಗಿನಂತೆ ಇರುತ್ತದೆ

ಕ್ರ.ಸಂ.	ವಿವರ	ಟೆಂಡರ ಪ್ರಕ್ರಿಯೆಯ ದಿನಾಂಕ
1	ಟೆಂಡರ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ	30.03.2021 ರಿಂದ 07.04.2021 ಸಂಜೆ 5.00 ಗಂಟೆಯವರೆಗೆ
2	ಪ್ರೀಬಿಡ್ ಮೀಟಿಂಗ್ (Two Cover System ಗೆ ಮಾತ್ರ)	03–04–2021 ಮುಂಜಾನೆ 11.00 ಗಂಟೆಗೆ
3	ಟೆಂಡರನ Technical bid ತೆರೆಯುವ ದಿನಾಂಕ	09–04–2021 ಮುಂಜಾನೆ 11.00 ಗಂಟೆಗೆ
4	ಟೆಂಡರನ Financial bid ತೆರೆಯುವ ದಿನಾಂಕ (Two Cover System ಗೆ ಮಾತ್ರ)	12–04–2021 ಮುಂಜಾನೆ 11.00 ಗಂಟೆಗೆ

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಗುತ್ತಿಗೆದಾರರು ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in/eportal/ines.seamನಲ್ಲಿ, ವೀಕ್ಷಿಸಬಹುದಾಗಿದ್ದು ಹಾಗೂ ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಇವರಿಂದ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಕೃಭಾಜನಿನಿ, ನಾಎದಂಕಾ ವಿಭಾಗ, ಹುಣಸಗಿ.

ಹಿರಿಯ ಭೂ ವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ
ಚಿಕ್ಕಮಗಳೂರು – 577 102
OFFICE OF THE SENIOR GEOLOGIST, MINES,AND GEOLOGY DEPT, CHIKKAMAGALURU - 577102
Email : sgchikmagalur@gmail.com Telephone : 08262-220039
No : DMG/SG/DS/E-TENDER/2020-21 DATE : 29-03-2021

ಇ–ಟೆಂಡರ್ ಮರು ಆಹ್ವಾನ ಪ್ರಕಟಣೆ:–

ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ಮಂಜೂರು ಮಾಡಲಾದ ಹಾಗೂ ಕಾರ್ಯನಿರ್ವಹಿಸುತ್ತಿರುವ ಕಲ್ಲು ಗಣಿ ಗುತ್ತಿಗೆಗಳ ಡ್ರೋಣ್ ಮತ್ತು ಡಿ.ಜಿ.ಪಿ.ಎಸ್ ಸರ್ವೆಕಾರ್ಯ ಕೈಗೊಳ್ಳಲು "Providing Services for conducting Drone and DGPS survey of Building stone Quarry leased/licensed area and any quary area identified by the officers of DMG to carry out Boundary fixation and assessment of Volume of Mineral Extracted within and Outside Quarry Area and to record the reduced level (RL's) of quarry lease granted with in Chikkamagaluru District
ಅರ್ಹ ನೋಂದಾಯಿತ ಸಂಸ್ಥೆ/ಕಂಪನಿಯವರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪೋರ್ಟಲ್ ನಲ್ಲಿ ತಿಳಿಸುವ ಮರು ಪಾವತಿಸಲಾಗದ ಅರ್ಜಿ ಶುಲ್ಕ ಮತ್ತು E.M.D. Declaration format (Fprm-14)ನ್ನುಭರ್ತಿ ಮಾಡಿ ಇ–ಪ್ರೊಕ್ಯೂರ್ ಮೆಂಟ್ ಪೋರ್ಟ್‌ಲ್ ಗೆ ಆನ್ ಲೈನ್ ಮುಖಾಂತರ ದಿನಾಂಕ: 23–04–2021 ರೊಳಗಾಗಿ ಸಲ್ಲಿಸಬೇಕಾಗಿ ಚಾಲ್ತಿ ಕಲ್ಲು ಗಣಿ ಗುತ್ತಿಗೆಗಳ ವಿವರ, ಟೆಂಡರ್ ಬಿಡ್ ಡಾಕ್ಯೂಮೆಂಟ್ ಡೌನ್ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ, ಪ್ರಿ–ಬಿಡ್ ಸಭೆಯ ದಿನಾಂಕ ಮತ್ತು ಇತರೆ ವಿವರಗಳನ್ನು ಇ–ಪೋರ್ಟ್‌ಲ್ ಟೆಂಡರ್ ಡಾಕ್ಯೂಮೆಂಟ್ ನಲ್ಲಿ ನೀಡಲಾಗಿದೆ ಟೆಂಡರ್ ಗೆ ಸಂಬಂಧಿಸಿದ ಷರತ್ತು, ನಿಬಂಧನೆಗಳು ಹಾಗೂ ಹೆಚ್ಚಿನ ವಿವರಗಳನ್ನು " **ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಐ.ಡಿ.ಎಸ್.ಜಿ ಕಾಲೇಜ್ ಎದುರು ಮರಳಸಿದ್ದ ಕಾಂಪ್ಲೆಕ್ಸ್, ಜ್ಯೋತಿ ನಗರ, ಚಿಕ್ಕಮಗಳೂರು ಜಿಲ್ಲೆ**" ರವರ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿದೆ .

ಸಹಿ/– ಹಿರಿಯ ಭೂವಿಜ್ಞಾನಿ ಹಾಗೂ ಸದಸ್ಯ ಕಾರ್ಯದರ್ಶಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ(ಗಣಿ)
ಚಿಕ್ಕಮಗಳೂರು ಜಿಲ್ಲೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೇರಳ ಚುನಾವಣಾ ಕಣಕ್ಕೆ 'ಸಿಎಎ' ಪ್ರವೇಶ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಚುನಾವಣೆಗಳು ಸಮೀಪಿಸುತ್ತಿದ್ದಂತೆಯೇ ಪೌರತ್ವ (ತಿದ್ದುಪಡಿ) ಕಾಯ್ದೆಯೂ (ಸಿಎಎ) ಪ್ರಚಾರದ ಮುಖ್ಯ ವಿಚಾರವಾಗಿ ಮುನ್ನೆಲೆಗೆ ಬಂದಿದೆ. ಬಿಜೆಪಿ ಮತ್ತು ಸಿಪಿಎಂ, ಸಿಎಎ ವಿಚಾರವನ್ನು ಮುಂದಿಟ್ಟುಕೊಂಡು ಪ್ರಚಾರ ನಡೆಸುತ್ತಿವೆ.

ಇಲ್ಲಿನ ಪುದುಪಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಮಾತನಾಡಿದ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು, 'ಸಿಎಎ ವಿಚಾರದಲ್ಲಿ ಜನರಿಗೆ ನೀಡಿರುವ ಭರವಸೆಗಳನ್ನು ಈಡೇರಿಸಲು ನಾವು ಬದ್ಧರಾಗಿದ್ದೇವೆ. ಅಷ್ಟೇ ಅಲ್ಲ, 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ನೀಡಿದ್ದ ಎಲ್ಲಾ ಭರವಸೆಗಳನ್ನು ಈಡೇರಿಸುತ್ತೇವೆ' ಎಂದರು.

ಇನ್ನೊಂದೆಡೆ, ಎಲ್‌ಡಿಎಫ್ ರ‍್ಯಾಲಿಯೊಂದರಲ್ಲಿ ಮಾತನಾಡಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, 'ಕೇರಳದಲ್ಲಿ ಸಿಎಎಯನ್ನು ಜಾರಿ ಮಾಡಲು ಬಿಡುವುದಿಲ್ಲ. ಇದನ್ನು ನಾವು ಈ ಹಿಂದೆಯೇ ಸ್ಪಷ್ಟಪಡಿಸಿದ್ದೇವೆ' ಎಂದಿದ್ದಾರೆ.

ಸಿಎಎಯನ್ನು ವಿರೋಧಿಸಿ ಕಳೆದ ವರ್ಷ ಕೇರಳದಲ್ಲಿ ಸಿಪಿಎಂ ಹಾಗೂ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟಗಳು ತೀವ್ರ ಪ್ರತಿಭಟನೆ ನಡೆಸಿದ್ದವು. 'ಈ ಕಾಯ್ದೆ ತಾರತಮ್ಯ ನೀತಿಯುಳ್ಳದ್ದು ಹಾಗೂ ಮುಸ್ಲಿಂ ವಿರೋಧಿಯಾದುದು' ಎಂದು ಈ ಪಕ್ಷಗಳು ವಾದಿಸಿದ್ದವು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಕೇರಳದ ವರ್ಕಳ ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿಯ ಪರವಾಗಿ ಭಾನುವಾರ ಪ್ರಚಾರ ನಡೆಸಿದರು
–ಪಿಟಿಐ ಚಿತ್ರ

ತನಿಖೆಗೆ ಬಿಜೆಪಿ ವಿರೋಧ

ಕೇಂದ್ರದ ತನಿಖಾ ಸಂಸ್ಥೆಗಳ ವಿರುದ್ಧ ನ್ಯಾಯಾಂಗ ತನಿಖೆ ನಡೆಸಲು ಮುಂದಾಗಿರುವ ಕೇರಳ ಸರ್ಕಾರದ ಕ್ರಮಕ್ಕೆ ಬಿಜೆಪಿ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಇದು ತನ್ನ ಮಾನ ಕಾಪಾಡಿಕೊಳ್ಳಲು ಕೇರಳ ಸರ್ಕಾರ ಮಾಡುತ್ತಿರುವ ಪ್ರಯತ್ನ' ಎಂದು ಕೇಂದ್ರದ ಗೃಹಸಚಿವ ಅಮಿತ್ ಶಾ ಹೇಳಿದ್ದಾರೆ; 'ಸರ್ಕಾರದ ಈ ಕ್ರಮವು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಉಂಟುಮಾಡುವಂಥದ್ದು' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಚಿನ್ನದ ಕಳ್ಳಸಾಗಾಣಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಕೇಂದ್ರದ ತನಿಖಾ ಸಂಸ್ಥೆಗಳು, ಅದನ್ನು ನೆಪವಾಗಿಟ್ಟುಕೊಂಡು ರಾಜ್ಯ ಸರ್ಕಾರದ ಘನತೆಗೆ ಧಕ್ಕೆ ಉಂಟುಮಾಡುವ ಪ್ರಯತ್ನ ಮಾಡುತ್ತಿವೆ ಎಂದು ಆರೋಪಿಸಿರುವ ರಾಜ್ಯ ಸರ್ಕಾರವು, ಈ ಸಂಸ್ಥೆಗಳ ವಿರುದ್ಧ ನ್ಯಾಯಾಂಗ ತನಿಖೆ ನಡೆಸಲು ಶುಕ್ರವಾರ ತೀರ್ಮಾನಿಸಿದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹಾಗೂ ಕೆಲವು ಸಚಿವರ ವಿರುದ್ಧ ಹೇಳಿಕೆ ನೀಡುವಂತೆ ಆರೋಪಿಗಳ ಮೇಲೆ ಒತ್ತಡ ಹೇರಿದ್ದಾರೆ ಎಂಬ ಆರೋಪದ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ವಿರುದ್ಧ ಕೇರಳ ಪೊಲೀಸರು ದೂರನ್ನು ಸಹ ದಾಖಲಿಸಿದ್ದಾರೆ.

'ಚುನಾವಣೆಗೆ ತಡೆ ಅಸಾಂವಿಧಾನಿಕ'

ಕೇರಳದಿಂದ ರಾಜ್ಯಸಭೆಗೆ ಮೂವರು ಸದಸ್ಯರನ್ನು ಆಯ್ಕೆ ಮಾಡುವ ಪ್ರಕ್ರಿಯೆಗೆ ತಾತ್ಕಾಲಿಕ ತಡೆ ನೀಡಿರುವ ಚುನಾವಣಾ ಆಯೋಗದ ಕ್ರಮದ ಬಗ್ಗೆ ಸಂದೇಹ ವ್ಯಕ್ತಪಡಿಸಿರುವ ಸಿಪಿಎಂ ಮುಖಂಡ ಸೀತಾರಾಂ ಯೆಚೂರಿ ಅವರು 'ಇದು ಅಸಾಂವಿಧಾನಿಕ ಕ್ರಮ' ಎಂದಿದ್ದಾರೆ.

'ಆಯೋಗದ ಈ ಕ್ರಮದಿಂದ ಕೇರಳದಿಂದ ರಾಜ್ಯಸಭೆಗೆ ಪ್ರಾತಿನಿಧ್ಯವನ್ನು ನಿರಾಕರಿಸಿದಂತಾಗಿದೆ' ಎಂದು ಯೆಚೂರಿ ಅವರು ಪ್ರಚಾರ ರ‍್ಯಾಲಿಯೊಂದರಲ್ಲಿ ಮಾತನಾಡುತ್ತಾ ಹೇಳಿದರು.

ಕೇಂದ್ರದ ತನಿಖಾ ಸಂಸ್ಥೆಗಳ ವಿರುದ್ಧ ನ್ಯಾಯಾಂಗ ತನಿಖೆಗೆ ಮುಂದಾಗಿರುವ ಸರ್ಕಾರದ ಕ್ರಮವನ್ನು ಬೆಂಬಲಿಸಿದ ಯೆಚೂರಿ, 'ರಾಜ್ಯ ಸರ್ಕಾರದ ಅನುಮತಿ ಇಲ್ಲದೆ ಕೇಂದ್ರದ ಯಾವುದೇ ಸಂಸ್ಥೆಯು ಯಾವುದೇ ರಾಜ್ಯದ ವಿಚಾರದಲ್ಲಿ ಮಧ್ಯಪ್ರವೇಶ ಮಾಡುವಂತಿಲ್ಲ. ಕೇಂದ್ರದ ಸಚಿವರು ಸಂವಿಧಾನವನ್ನು ಪುನಃ ಓದುವುದು ಅಗತ್ಯ' ಎಂದರು.

ಕಾಂಗ್ರೆಸ್ ಪಕ್ಷವನ್ನೂ ಟೀಕೆಗೆ ಒಳಪಡಿಸಿದ ಅವರು, 'ಈ ರಾಷ್ಟ್ರೀಯ ಪಕ್ಷವು ಬಿಜೆಪಿ– ಆರ್‌ಎಸ್‌ಎಸ್ ಮುಖಂಡರಿಗಿಂತ ಜೋರಾಗಿ ಹಿಂದುತ್ವದ ಘೋಷಣೆಗಳನ್ನು ಕೂಗಲು ಉತ್ಸುಕವಾಗಿದೆ. ಆ ಮೂಲಕ ಕೋಮು ಧ್ರುವೀಕರಣಕ್ಕೆ ಸಹಾಯ ಮಾಡುತ್ತಿದೆ' ಎಂದರು.

ಪುರಸಭೆ ಕಾರ್ಯಾಲಯ, ಬ್ಯಾಡಗಿ
(ಜಿ: ಹಾವೇರಿ)
ನಂ. ಪುಸಬ್ಯಾ/ಆವಿ/14ನೇಹಸಾಮೂ/ಟೆಂಪ್ರ/2020–21 ದಿ:25–03–2021

ಟೆಂಡರ ಪ್ರಕಟಣೆ

ಸನ್ 2018–19 ನೇ ಸಾಲಿನ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಲ್ಲಿನ Electro Mechanical Equipments (DMA/2020-21/IND11810) ಪೂರೈಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಅಧಿಕೃತ ಪೂರೈಕೆದಾರರು ಹಾಗೂ ಮಾರಾಟಗಾರರಿಂದ ಐಟಂವಾರು ಟೆಂಡರಗಳನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಕರ್ನಾಟಕ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ್ಸ್ ಕೆ.ಜಿ–2 ರಂತೆ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರಮೆಂಟ್ ಟೆಂಡರನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ www.eprockarnataka.gov.in ನಲ್ಲಿ ಪಡೆದುಕೊಳ್ಳಬಹುದು.

1. ಇ–ಪ್ರೊಕ್ಯೂರಮೆಂಟ್ ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿ: 08–04–2021 (ಸಂಜೆ4–00ರವರೆಗೆ)
2. ಇ–ಪ್ರೊಕ್ಯೂರಮೆಂಟ್ ಮುಖಾಂತರ ಟೆಂಡರ ತೆರೆಯುವ ದಿನಾಂಕ: 09–04–2021 ರ ಸಂಜೆ 5–00 ಘಂಟೆಯ ನಂತರ (ಆನ್‌ಲೈನ್ ಮೂಲಕ)

ಸಹಿ/– (ಕವಿತಾ. ಕೆ. ಸೊಪ್ಪಿನಮಠ) ಅಧ್ಯಕ್ಷರು ಪುರಸಭೆ, ಬ್ಯಾಡಗಿ
ಸಹಿ/– (ಶ್ರೀ ವ್ಹಿ. ಎಮ್. ಪೂಜಾರ) ಮುಖ್ಯಾಧಿಕಾರಿ, ಪುರಸಭೆ, ಬ್ಯಾಡಗಿ

ನುಡಿ–ಕಿಡಿ



ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದಲ್ಲಿ ಮತದಾನ ನಡೆದ 30 ಕ್ಷೇತ್ರಗಳ ಪೈಕಿ 26ರಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

30 ಕ್ಷೇತ್ರವನ್ನೂ ಗೆಲ್ಲುತ್ತೇವೆ ಎಂದು ಅಮಿತ್ ಶಾ ಏಕೆ ಹೇಳಲಿಲ್ಲ. ನಾಲ್ಕು ಕ್ಷೇತ್ರಗಳನ್ನು ಕಾಂಗ್ರೆಸ್ ಮತ್ತು ಎಡಪಕ್ಷಗಳಿಗೆ ಬಿಟ್ಟುಕೊಟ್ಟಿದ್ದಾರೆಯೇ?

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಅಷ್ಟು ಸೀಟು ಗೆಲ್ಲುತ್ತೇವೆ, ಇಷ್ಟು ಸೀಟು ಗೆಲ್ಲುತ್ತೇವೆ ಎಂದು ಹೇಳುವುದು ಗುಜರಾತ್‌ಗೆ ಸೀಮಿತವಾಗಿರಲಿ. ಇದು ಪಶ್ಚಿಮ ಬಂಗಾಳ. ಇಲ್ಲಿ ಆಟ ನಮ್ಮದು

ಡೆರೆಕ್ ಒಬ್ರಿಯಾನ್, ಟಿಎಂಸಿ ನಾಯಕ

ಕೇರಳದಲ್ಲಿ ಬಿಜೆಪಿ ಗರಿಷ್ಠ ಮಟ್ಟ ತಲುಪಿ ಆಗಿದೆ. ಶ್ರೀಧರನ್ ಅವರನ್ನು ಅಭ್ಯರ್ಥಿಯಾಗಿ ಘೋಷಿಸುವುದರೊಂದಿಗೆ ಆ ಪರಿಣಾಮವೂ ಅಲ್ಲಿಗೆ ಮುಗಿಯಿತು. 88 ವರ್ಷ ವಯಸ್ಸಿನ ತಂತ್ರಜ್ಞ ರಾಜ್ಯದ ರಾಜಕೀಯ ಭವಿಷ್ಯವೇನು ಎಂಬುದಕ್ಕೆ ಉತ್ತರ ಆಗಲಾರದು

ಶಶಿ ತರೂರ್, ಕಾಂಗ್ರೆಸ್ ಮುಖಂಡ

ಚುನಾವಣಾ ಕಣದಲ್ಲಿ

- **ಕಾಂಗ್ರೆಸ್ ಪ್ರಣಾಳಿಕೆ:** ಎಲ್ಲರಿಗೂ ಕೋವಿಡ್ ಲಸಿಕೆ ಉಚಿತ, ನೀಟ್ ರದ್ದತಿ, ಹೊಸ ಶೈಕ್ಷಣಿಕ ನೀತಿಜಾರಿ, ಗೃಹಿಣಿಯರಿಗೆ ₹1,000, ಗಿರಣಿಗಳಿಗೆ ಮರು ಚಾಲನೆ, ಹುತಾತ್ಮ ಯೋಧರ ಕುಟುಂಬದವರಿಗೆ ಪಿಂಚಣಿ ಹೆಚ್ಚಳ – ಇವು ಪುದುಚೇರಿ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪ್ರಕಟಿಸಿದ ಪ್ರಣಾಳಿಕೆಯ ಪ್ರಮುಖ ಅಂಶಗಳು. ಕಾಂಗ್ರೆಸ್ ಹಿರಿಯ ಮುಖಂಡ ವೀರಪ್ಪ ಮೊಯಿಲಿ ಅವರು ಭಾನುವಾರ ಪ್ರಣಾಳಿಕೆ ಬಿಡುಗಡೆ ಮಾಡಿದರು. ಮಾಜಿ ಮುಖ್ಯಮಂತ್ರಿ ನಾರಾಯಣಸ್ವಾಮಿ, ಪ್ರಧಾನ ಕಾರ್ಯದರ್ಶಿ ದಿನೇಶ್ ಗುಂಡೂರಾವ್ ಇದ್ದರು.
- **ಯಾರಿಗೆ ಹೆಚ್ಚು ಸ್ಥಾನ?:** 47 ವಿಧಾನಸಭಾ ಸ್ಥಾನಗಳಿಗೆ ಶನಿವಾರ ನಡೆದ ಮೊದಲ ಹಂತದ ಮತದಾನದಲ್ಲಿ ಪೂರ್ವ ಮತ್ತು ಉತ್ತರ ಅಸ್ಸಾಂನ ಜನರು ಬಿಜೆಪಿ ವಿರುದ್ಧ ಮತ ಚಲಾಯಿಸಿದ್ದಾರೆ ಎಂದು ಕಾಂಗ್ರೆಸ್ ಮತ್ತು ಎಐಯುಡಿಎಫ್ ಪಕ್ಷಗಳು ಭಾನುವಾರ ಹೇಳಿವೆ. ಮೊದಲ ಹಂತದಲ್ಲಿ ಕನಿಷ್ಠ 35 ಸ್ಥಾನಗಳಲ್ಲಿ ಗೆಲ್ಲುತ್ತೇವೆ ಎಂದು ಅಸ್ಸಾಂ ಕಾಂಗ್ರೆಸ್ ಘಟಕದ ಅಧ್ಯಕ್ಷ ರಿಪುನ್ ಬೋರಾ ಹೇಳಿದ್ದಾರೆ. ಅಸ್ಸಾಂನಲ್ಲಿ 47 ಕ್ಷೇತ್ರಗಳ ಪೈಕಿ ಬಿಜೆಪಿ 37ರಲ್ಲಿ ಗೆಲ್ಲಲಿದೆ ಎಂದು ಅಮಿತ್ ಶಾ ಅವರು ಹೇಳಿಕೆ ನೀಡಿದ ಬೆನ್ನಲ್ಲೇ ಬೋರಾ ಈ ಹೇಳಿಕೆ ನೀಡಿದ್ದಾರೆ.
- **ರಾಜಾ ವಿರುದ್ಧ ದೂರು:** ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಹಾಗೂ ಅವರ ತಾಯಿಯ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ ಕಾರಣಕ್ಕೆ ಡಿಎಂಕೆ ಮುಖಂಡ, ಸಂಸದ ಎ. ರಾಜಾ ವಿರುದ್ಧ ಚೆನ್ನೈ ಪೊಲೀಸರು ದೂರು ದಾಖಲಿಸಿದ್ದಾರೆ. ಚುನಾವಣಾ ರ‍್ಯಾಲಿಯೊಂದರಲ್ಲಿ ಮಾತನಾಡಿದ ರಾಜಾ ಅವರು ಆಕ್ಷೇಪಾರ್ಹವಾದ ಹೇಳಿಕೆಗಳನ್ನು ನೀಡಿದ್ದರು.
- **ಬಾಂಬ್ ವಶ:** ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ವಿವಿಧ ಭಾಗಗಳಲ್ಲಿ ಭಾರಿ ಪ್ರಮಾಣದಲ್ಲಿ ಕಚ್ಚಾ ಬಾಂಬ್‌ಗಳು, ನಾಡ ಬಂದೂಕುಗಳನ್ನು ವಶಪಡಿಸಿಕೊಳ್ಳಲಾಗಿದೆ. ಖಚಿತ ಸುಳಿವಿನ ಮೇರೆಗೆ ಪೊಲೀಸರು ದಾಳಿ ನಡೆಸಿದ್ದರು.

ಮುಂಡಗೋಡ, ಭರಮಸಾಗರದಲ್ಲಿ ಸಿಡಿಲು ಬಡಿದು ಮನೆಗೆ ಹಾನಿ

ವಿವಿಧೆಡೆ ಆಲಿಕಲ್ಲು ಸಹಿತ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉತ್ತರ ಕನ್ನಡ, ಚಿತ್ರದುರ್ಗ, ಮಂಡ್ಯ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಭಾನುವಾರ ಆಲಿಕಲ್ಲು, ಗುಡುಗು ಸಹಿತ ಧಾರಾಕಾರ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಭಾನುವಾರ ಗುಡುಗು, ಆಲಿಕಲ್ಲಿನೊಂದಿಗೆ ಬಿರುಸಿನ ಮಳೆಯಾಗಿದ್ದು, ವಿಜಯಪುರ ಜಿಲ್ಲೆಯ ಕೂಡ್ಲಗಿಯಲ್ಲಿ ಗುಡುಗು ಸಹಿತ ಮಳೆಯಾಗಿದೆ.

ಮುಂಡಗೋಡದಲ್ಲಿ ಅರ್ಧ ಗಂಟೆ ಆಲಿಕಲ್ಲು ಮಳೆಯಾಗಿದೆ. ಸಿಡಿಲು ಬಡಿದು ಮನೆಯೊಂದಕ್ಕೆ ಹಾನಿಯಾಗಿದೆ. ಯಲ್ಲಾಪುರ, ಹಳಿಯಾಳ, ಶಿರಸಿಯಲ್ಲಿ ಕೆಲ ಸಮಯ ಭಾರಿ ಮಳೆಯಾಗಿದೆ.

ಕರಾವಳಿ ಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಮೂಡುಬಿದಿರೆ, ಬಂಟ್ವಾಳ, ಬೆಳ್ತಂಗಡಿಯಲ್ಲಿ ಅಲ್ಲಲ್ಲಿ ಚದುರಿದ ಮಳೆಯಾಗಿದೆ. ಮಂಗಳೂರು ತಾಲ್ಲೂಕಿನ ಉಳ್ಳಾಲ, ಕೋಟೇಶ್ವರದಲ್ಲಿ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ಹಾಗೂ ಕೊಪ್ಪದಲ್ಲಿ ಸುಮಾರು ಅರ್ಧ ಗಂಟೆ ಮಳೆ ಸುರಿಯಿತು.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಭರಮಸಾಗರ, ಚಿಕ್ಕಜಾಜೂರಿನಲ್ಲಿ ಗುಡುಗು ಮಳೆಯಾಗಿದೆ. ಸಿರಿಗೆರೆಯಲ್ಲಿ ಗುಡುಗು ಸಹಿತ ಆಲಿಕಲ್ಲು ಮಳೆಯಾಗಿದೆ. ಆಲಿಕಲ್ಲು ಮಳೆಯಿಂದ ಅಡಿಕೆ ಹೊಂಬಾಳೆ, ಮಾವಿನ ಹೂವು, ತರಕಾರಿ ಬೆಳೆಗಳಿಗೆ ಹಾನಿಯಾಗುತ್ತದೆ ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ.

ಭರಮಸಾಗರದ ವಿನಾಯಕ ಚಿತ್ರಮಂದಿರದ ಬಳಿಯ ಅಲ್ಲಾಬಕ್ಷ್ ಎಂಬುವವರ ಮನೆಯ ಮೇಲಂತಸ್ತಿನ ಒಂದು ಭಾಗಕ್ಕೆ ಸಿಡಿಲು ಬಡಿದಿದೆ. ಕಟ್ಟಡದ ಸ್ವಲ್ಪ ಭಾಗ ಉದುರಿ ಬಿದ್ದಿದೆ.

ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕು, ಉಚ್ಚಂಗಿದುರ್ಗ, ತ್ಯಾವಣಿಗೆ, ಸಂತೇಬೆನ್ನೂರಿನಲ್ಲಿ ಗಾಳಿ ಜೋರಾಗಿತ್ತು. ಗುಡುಗು ಸಹಿತ ಹಗುರ ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಂಜೆ ಗುಡುಗು ಸಹಿತ ಮಳೆ ಸುರಿಯಿತು. ಶಿವಮೊಗ್ಗ ಸೇರಿ ಶಿಕಾರಿಪುರ, ತೀರ್ಥಹಳ್ಳಿ, ರಿಪ್ಪನ್‌ಪೇಟ್, ಕೋಣಂದೂರು ಭಾಗಗಳಲ್ಲಿ ಅಲ್ಲಲ್ಲಿ ಮಳೆಯಾಗಿದೆ.

ಮಂಡ್ಯ ಜಿಲ್ಲೆಯ ಹಲವೆಡೆ ಭಾನುವಾರ ಮಧ್ಯಾಹ್ನ ಗುಡುಗು, ಗಾಳಿ ಸಹಿತ ಸುಮಾರು ಅರ್ಧ ತಾಸು ಭಾರಿ ಮಳೆ ಸುರಿಯಿತು. ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಗ್ರಾಮ ಹಾಗೂ ಸುತ್ತಮುತ್ತ ಗುಡುಗು ಸಹಿತ ಮಳೆಯಾಗಿದೆ.

ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ನಗರ ಹಾಗೂ ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ ಸಂಜೆ 20 ನಿಮಿಷ ಗಾಳಿ ಸಹಿತ ಮಳೆಯಾಗಿದೆ.

ಸಂಕ್ಷಿಪ್ತ ಸುದ್ದಿ

ನದಿಯಲ್ಲಿ ಮುಳುಗಿ ಇಬ್ಬರು ಬಾಲಕರ ಸಾವು

ವೀರೇಶ ಕಿವಳ್ಳಿ

ಮಹೇಶ ಬೈಲಪ್ಪ

ಹಾವೇರಿ: ತಾಲ್ಲೂಕಿನ ನಾಗನೂರ ಗ್ರಾಮದಲ್ಲಿ ಭಾನುವಾರ ಹೋಳಿಹಬ್ಬದಲ್ಲಿ ಬಣ್ಣದೋಕುಳಿ ಆಡಿ ವರದಾ ನದಿಗೆ ಸ್ನಾನಕ್ಕೆ ಹೋದಾಗ ಇಬ್ಬರು ಬಾಲಕರು ಮುಳುಗಿ ಸಾವನ್ನಪ್ಪಿದ್ದಾರೆ.

ವೀರೇಶ ನಾಗೇಶ ಅಕ್ಕಿವಳ್ಳಿ (13) ಹಾಗೂ ಮಹೇಶ ಬೈಲಪ್ಪ ಮುರಡಣ್ಣನವರ(13) ಮೃತರು.
ಮೃತ ವೀರೇಶನ ಸಹೋದರ ಯೋಗೇಶ ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ವಸತಿ ನಿಲಯದಲ್ಲಿ ಇದ್ದುಕೊಂಡು ಹಾವೇರಿ ಮುನ್ಸಿಪಲ್ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕ ವೀರೇಶ ಹೋಳಿಗಾಗಿ ಊರಿಗೆ ಬಂದಿದ್ದ. ಮಹೇಶ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ಓದುತ್ತಿದ್ದ.

ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಲಗಿದ್ದ ಬಾಲಕಿ ಹೊತ್ತೊಯ್ದು ಅತ್ಯಾಚಾರ

ಹಾಸನ: ನಗರ ಹೊಸ ಬಸ್ ನಿಲ್ದಾಣದಲ್ಲಿ ಪೋಷಕರೊಂದಿಗೆ ಮಲಗಿದ್ದ ಆರು ವರ್ಷದ ಬಾಲಕಿಯನ್ನು ಶನಿವಾರ ತಡರಾತ್ರಿ ಹೊತ್ತೊಯ್ದು ಅತ್ಯಾಚಾರ ನಡೆಸಲಾಗಿದೆ.

ಮೈಸೂರಿಗೆ ಹೋಗಲು ಅಲೆಮಾರಿ ಕುಟುಂಬ ಬಸ್ ನಿಲ್ದಾಣಕ್ಕೆ ಬಂದಿದ್ದು, ಬಸ್ ಸಿಗಲಿಲ್ಲ. ಹೀಗಾಗಿ, ತಂದೆ, ತಾಯಿ ಜತೆ ಬಾಲಕಿಯೂ ನಿಲ್ದಾಣದಲ್ಲಿ ಮಲಗಿದ್ದಾಳೆ. ಅಲ್ಲಿಗೆ ಬಂದ ವ್ಯಕ್ತಿ, ಹೆಗಲ ಮೇಲೆ ಹೊತ್ತುಕೊಂಡು ಹೋಗಿ, ಸಮೀಪದ ಪೊದೆಯಲ್ಲಿ ಅತ್ಯಾಚಾರ ನಡೆಸಿ ಪರಾರಿಯಾಗಿದ್ದಾನೆ. ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಾಲಕಿಯನ್ನು ಎತ್ತಿಕೊಂಡು ಹೋಗಿರುವ ದೃಶ್ಯ ಸಿ.ಸಿ ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ರಥೋತ್ಸವ ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ಭಾನುವಾರ ನಡೆದ ಗಂಗಾಧರೇಶ್ವರ ಮಹಾರಥೋತ್ಸವದಲ್ಲಿ ಭಾಗಿಯಾಗಿದ್ದ ಭಕ್ತರು ರಥ ಎಳೆದು ಸಂಭ್ರಮಿಸಿದರು

ಕಂಬಳದ ‘ಉಸೇನ್ ಬೋಲ್ಟ್’ ಹೊಸ ದಾಖಲೆ

ಮಂಗಳೂರು: ಬಂಟ್ವಾಳ ತಾಲ್ಲೂಕಿನ ಕಕ್ಯಪದವು ಮೈರ ‘ಸತ್ಯ– ಧರ್ಮ’ ಜೋಡುಕರೆ ಕಂಬಳದಲ್ಲಿ 8.78 ಸೆಕೆಂಡ್‌ನಲ್ಲಿ 100 ಮೀ. ಅಂತರವನ್ನು ಕ್ರಮಿಸಿ, ಮಿಜಾರು ಅಶ್ವತ್ಥಪುರ ಶ್ರೀನಿವಾಸ ಗೌಡ ತನ್ನದೇ ಹೆಸರಿನಲ್ಲಿದ್ದ ದಾಖಲೆಯನ್ನು ಉತ್ತಮ ಪಡಿಸಿಕೊಂಡಿದ್ದಾರೆ.

ಕಳೆದ ವಾರ ವೇಣೂರು–ಪೆರ್ಮುಡದಲ್ಲಿ ನಡೆದ ಕಂಬಳದಲ್ಲಿ ಶ್ರೀನಿವಾಸ ಗೌಡ 8.96 ಸೆಕೆಂಡ್‌ನಲ್ಲಿ 100 ಮೀ. ಕ್ರಮಿಸುವ ಮೂಲಕ ದಾಖಲೆ ನಿರ್ಮಿಸಿದ್ದರು.

ಹಗ್ಗ ಹಿರಿಯ ವಿಭಾಗದ ಫೈನಲ್‌ನಲ್ಲಿ ಮಿಜಾರು ಪ್ರಸಾದ್ ನಿಲಯ ಶಕ್ತಿಪ್ರಸಾದ್ ಶೆಟ್ಟಿ ‘ಎ’ ಕೋಣಗಳನ್ನು ಶ್ರೀನಿವಾಸ್ ಗೌಡ ಓಡಿಸಿದರು.

ಶ್ರೀನಿವಾಸ ಗೌಡ

‘ಕಂಬಳಗಳಲ್ಲಿ ಈ ಹಿಂದೆ 125 ಮೀಟರ್‌ಗೆ ಸೆನ್ಸಾರ್ ಅಳವಡಿಸಿ, ಸಮಯ ದಾಖಲಿಸಲಾಗುತ್ತಿತ್ತು. ಇದೇ ಮೊದಲ ಬಾರಿಗೆ ಮೈರ ಕಂಬಳದಲ್ಲಿ ಸೆನ್ಸಾರ್ ಅನ್ನು 100 ಮೀಟರ್‌ಗೆ ಅಳವಡಿಸಲಾಗಿದೆ’ ಎಂದು ಜಿಲ್ಲಾ ಕಂಬಳ ಸಮಿತಿ ಕಾರ್ಯದರ್ಶಿ ಎಡ್ತೂರು ರಾಜೀವ ಶೆಟ್ಟಿ ತಿಳಿಸಿದ್ದಾರೆ.

6ರಿಂದ 9ನೇ ತರಗತಿಗೆ ಬೇಗ ಪರೀಕ್ಷೆ: ಕ್ಯಾಮ್ಸ್ ಮನವಿ

ಬೆಂಗಳೂರು: ‘ಕೋವಿಡ್ ಕಾರಣಕ್ಕೆ ಶಾಲೆಗಳು ಮುಚ್ಚುವ ಸ್ಥಿತಿ ಉದ್ಭವಿಸುವ ಮೊದಲೇ ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಇಲಾಖೆ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ 6ರಿಂದ 9ನೇ ತರಗತಿವರೆಗೆ ಬೇಗ ಪರೀಕ್ಷೆ ಮುಗಿಸಲು ಅವಕಾಶ ಕಲ್ಪಿಸಬೇಕು’ ಎಂದು ಸರ್ಕಾರಕ್ಕೆ ಕರ್ನಾಟಕ ಖಾಸಗಿ ಪ್ರಾಥಮಿಕ, ಪ್ರೌಢ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ (ಕ್ಯಾಮ್ಸ್) ಒತ್ತಾಯಿಸಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರಿಗೆ ಪತ್ರ ಬರೆದಿರುವ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್, ‘ಪರೀಕ್ಷೆಗೆ ಎಲ್ಲ ಸಿದ್ಧತೆಗಳು ಆಗಿವೆ. ಮುಂದಿನ ಶೈಕ್ಷಣಿಕ ವರ್ಷದ ಸಿದ್ಧತೆಗೂ ಸೂಕ್ತ ಸಮಯ ಬೇಕಾಗುತ್ತದೆ. ಆದ್ದರಿಂದ, ಪರೀಕ್ಷೆ ನಡೆಸಲು ಕ್ಯಾಮ್ಸ್ ನಿರ್ಧರಿಸಿದ್ದು, ಸಮ್ಮತಿಗಾಗಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ’ ಎಂದು ತಿಳಿಸಿದ್ದಾರೆ.

‘ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಜೂನ್‌ನಿಂದಲೇ ಆನ್‌ಲೈನ್ ಪಾಠ ಆರಂಭವಾಗಿದೆ. ಪಠ್ಯ ಪುನರಾವರ್ತನೆಯೂ ಮುಗಿದಿದೆ. ವರ್ಷವಿಡೀ ಕಲಿತಿದ್ದು ವ್ಯರ್ಥವಾಗದ ರೀತಿಯಲ್ಲಿ 6ರಿಂದ 9ನೇ ತರಗತಿ ಪರೀಕ್ಷೆ ನಡೆಬೇಕಾಗಿದೆ. ಕೋವಿಡ್‌ನಿಂದಾಗಿ ಮುಂದಿನ ದಿನಗಳಲ್ಲಿ ಶಾಲೆಗೆ ರಜಾ ಕೊಟ್ಟು ಮಕ್ಕಳಿಗೆ ಈ ವರ್ಷ ಕೂಡಾ ಪರೀಕ್ಷೆ ಇಲ್ಲದಾಗುವ ಭೀತಿ ಎದುರಾಗಿದೆ’ ಎಂದಿದ್ದಾರೆ.

‘ಆಯಾ ಶಾಲೆಗಳ ಅನುಕೂಲಕ್ಕೆ ಪೂರಕ ಮತ್ತು ಪೋಷಕರ ಅಭಿಪ್ರಾಯದಂತೆ ತಕ್ಷಣ ಪರೀಕ್ಷೆ ಪ್ರಕ್ರಿಯೆ ಮಾಡಲು ಕ್ಯಾಮ್ಸ್ ಮುಂದಾಗಿದೆ. ಇದನ್ನು ಇಲಾಖೆಗಮನಕ್ಕೂ ತರಲಾಗಿದೆ. ನಿಯಮಾನುಸಾರ 10 ಮತ್ತು 12ನೇ ತರಗತಿಯ ಪರೀಕ್ಷೆಯನ್ನು ನಿಗದಿಯಂತೆ ನಡೆಸಲಾಗುವುದು. ವರ್ಷವಿಡೀ ಆನ್‌ಲೈನ್ ಮತ್ತು ಆಫ್‌ಲೈನ್ ತರಗತಿ ನಡೆಸಿ ಶಿಕ್ಷಕ ವರ್ಗ ಶ್ರಮಿಸಿದ್ದು, ಅವರಿಗೆ ಬೇಸಿಗೆ ರಜಾ ಅನಿವಾರ್ಯವಾಗಿದೆ’ ಎಂದೂ ಹೇಳಿದ್ದಾರೆ.

ರಾಜ್ಯ ಸಹಕಾರ ಮಹಾಮಂಡಳ: ಶಾಸಕ ಜಿಟಿಡಿ ಬಣಕ್ಕೆ ಗೆಲುವು

ಬೆಂಗಳೂರು: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಮುಂದಿನ ಐದು ವರ್ಷಗಳ ಅವಧಿಗೆ ನಿರ್ದೇಶಕ ಮಂಡಳಿ ಆಯ್ಕೆಗೆ ಭಾನುವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದ ತಂಡದ ಎಲ್ಲ 14 ಅಭ್ಯರ್ಥಿಗಳು ಜಯಶಾಲಿಯಾಗಿದ್ದಾರೆ.

ರೇಸ್ ಕೋರ್ಸ್ ರಸ್ತೆಯಲ್ಲಿರುವ ಸಹಕಾರ ಮಹಾಮಂಡಳದ ಕಚೇರಿಯಲ್ಲಿ ಸಂಜೆ 4 ಗಂಟೆವರೆಗೆ ಚುನಾವಣೆ ನಡೆದು, ಬಳಿಕ ಫಲಿತಾಂಶ ಪ್ರಕಟಿಸಲಾಯಿತು. 29 ಜಿಲ್ಲಾ ಯೂನಿಯನ್‌ಗಳಿಂದ 13 ಸ್ಥಾನಗಳಿಗೆ 26 ಅಭ್ಯರ್ಥಿಗಳು ಕಣದಲ್ಲಿದ್ದರು. ಇತರ ವಲಯದಿಂದ ಒಂದು ಸ್ಥಾನಕ್ಕೆ ನಡೆದ ಚುನಾವಣೆಗೆ ನಾಲ್ವರು ಸ್ಪರ್ಧಿಸಿದ್ದರು.

ಆಯ್ಕೆಯಾದವರು: ಮೈಸೂರು ವಿಭಾಗ (ಮೂರು ಸ್ಥಾನಗಳು)– ಜಿ.ಟಿ.ದೇವೇಗೌಡ, ಬಿ.ಸಿ.ಲೋಕಪ್ಪ ಗೌಡ ಮತ್ತು ಜಯಕರ ಶೆಟ್ಟಿ ಬಿ.ಇಂದ್ರಾಳಿ. ಬೆಂಗಳೂರು ವಿಭಾಗ (ನಾಲ್ಕು ಸ್ಥಾನಗಳು)– ಎಚ್.ಎನ್.ಅಶೋಕ್, ಎ.ಸಿ.ನಾಗರಾಜ್, ರಾಮಿರೆಡ್ಡಿ ಮತ್ತು ಬಿ.ಡಿ.ಭೂ ಕಾಂತ.

ಬೆಳಗಾವಿ ವಿಭಾಗ (ಮೂರು ಸ್ಥಾನಗಳು)–ಜಗದೀಶಮಲ್ಲಿಕಾರ್ಜುನಕವಟಗಿಮಠ, ಈರಣ್ಣ ಪಟ್ಟಣ ಶೆಟ್ಟಿ ಮತ್ತು ಬಸವರಾಜ ನೀ. ಅರಬಗೊಂಡ. ಕಲಬುರ್ಗಿ ವಿಭಾಗ (ಮೂರು ಸ್ಥಾನಗಳು)– ಶೇಖರ ಗೌಡ ಪಾಟೀಲ, ಉಮಾಕಾಂತ ನಾಗಮಾರಪಳ್ಳಿ ಮತ್ತು ಜೆ. ಎಂ. ಶಿವಪ್ರಸಾದ್. ಇತರೆ ಸಹಕಾರ ಸಂಘಗಳ ಕ್ಷೇತ್ರ– ಗದಿಗೆಪ್ಪ ಗೌಡ ಪಾಟೀಲ

ಚುನಾಯಿತ ನಿರ್ದೇಶಕರನ್ನು ಮಹಾ ಮಂಡಳದ ಆಡಳಿತಾಧಿಕಾರಿ ವೈ.ಎಚ್. ಗೋಪಾಲಕೃಷ್ಣ, ವ್ಯವಸ್ಥಾಪಕ ನಿರ್ದೇಶಕ ಎಸ್.ಎನ್. ಅರುಣ್ ಕುಮಾರ್. ಕಾರ್ಯದರ್ಶಿ ಲಕ್ಷ್ಮೀಪತಯ್ಯ, ಚುನಾವಣಾಧಿಕಾರಿ ಸತೀಶ್ ಚಂದ್ರ ಅಭಿನಂದಿಸಿದರು.

ಒಳನೋಟ

‘ಗಣಿ ಜಿಲ್ಲೆ’ಗಳ ವಾಸಿಯಾಗದ ನೋವು

ಬೆಂಗಳೂರು:‘ಖನಿಜ ನಿಧಿ ಹೇರಳ, ಕೆಲಸ ವಿರಳ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಮಾ.28) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಗಣಿ ಪ್ರದೇಶದ ಜನರಿಗೆ ನೆರವಾಗಿ

ಗಣಿಬಾಧಿತ ಪ್ರದೇಶಗಳಲ್ಲಿ ಜನರು ತೀವ್ರತರವಾದ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಮೂಲ ಸೌಕರ್ಯಗಳಾದ ಶುದ್ಧ ಕುಡಿಯುವ ನೀರು, ಶಾಲೆ, ವಸತಿ ಮುಂತಾದ ಕೊರತೆಗಳಿಂದ ವಂಚಿತರಾಗಿದ್ದಾರೆ. ಅವರು ವಾಸಿಸುವ ಸ್ಥಳವೇ ದೂಳಿನಿಂದ ತುಂಬಿ ಹೋಗಿರುತ್ತದೆ. ಇಂತಹ ಪ್ರದೇಶಗಳಲ್ಲಿ ಸೌಲಭ್ಯಗಳಿಂದ ವಂಚಿತರಾಗಿ ಜೀವನ ನಡೆಸುತ್ತಿರುವವರ ಕಲ್ಯಾಣಕ್ಕೆ ಸರ್ಕಾರ ಮುಂದಾಗಬೇಕು.

ರಾಮಚಂದ್ರ, ಗುಬ್ಬಿ

ಅರಣ್ಯೀಕರಣ ನಡೆಯಲಿ

ಗಣಿಗಾರಿಕೆಯಿಂದಾಗಿ ಜನರ ಆರೋಗ್ಯ ಹಾಗೂ ಪರಿಸರದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಅರಣ್ಯ ನಾಶದಿಂದ ವನ್ಯಜೀವಿಗಳು ನಾಡಿನತ್ತ ಮುಖ ಮಾಡಿವೆ. ಮಾನವ ಮತ್ತು ಪ್ರಾಣಿಗಳ ಸಂಘರ್ಷಕ್ಕೂ ಕಾರಣವಾಗಿದೆ. ಮತ್ತೊಂದೆಡೆ ಗಣಿಗಾರಿಕೆ ನಡೆಯುವ ಭಾಗದಲ್ಲಿನ ಜನ ಮೂಲಸೌಕರ್ಯವೂ ಸಿಗದೆ ಪರದಾಡುತ್ತಿದ್ದಾರೆ. ಗಣಿಗಾರಿಕೆಗೆ ನೀಡುವ ಆದ್ಯತೆ ಅರಣ್ಯೀಕರಣಕ್ಕೂ ನೀಡಬೇಕು.

ಬಿ.ಎಸ್.ಚೈತ್ರ, ಚಿತ್ರದುರ್ಗ

ಶುದ್ಧ ಗಾಳಿಗೆ ಪರದಾಟ

ಗಣಿಗಾರಿಕೆಯಿಂದ ಪ್ರಕೃತಿ ತಾಯಿಯ ಮೇಲೆ ಭೀಕರವಾದ ದಾಳಿ ನಡೆದಿದೆ. ಗಣಿಗಾರಿಕೆಯಿಂದ ಬೇವು, ಹುಣಸೆ, ಮಾವು, ಸಪೋಟದಂತಹ ಹಣ್ಣುಗಳು ಫಸಲಿಗೂ ಮುನ್ನವೇ ದೂಳಿನಿಂದಾಗಿ ಉದುರುತ್ತಿವೆ. ಕ್ರಮೇಣ ಪರಿಸರ ವ್ಯವಸ್ಥೆ ಅಪಾಯಕಾರಿಯಾಗಿ ಬದಲಾಗುತ್ತಿದೆ. ಇದರಿಂದ ನಮಗೆ ಮುಂದೊಂದು ದಿನ ಉಸಿರಾಡುವ ಅಗತ್ಯವಿರುವ ಶುದ್ಧ ಗಾಳಿಗೂ ಪರದಾಡಬೇಕಿದೆ.

ಸಂತೋಷ ಕುಮಾರ್, ಸಿರುಗುಪ್ಪ, ಬಳ್ಳಾರಿ

‘ದೂಳು ಮುಕ್ತವಾಗಲಿ’

ಸಂಡೂರಿನ ಸುತ್ತಮುತ್ತ ಗಣಿಗಾರಿಕೆಯಿಂದಾಗಿ ಬಸ್‌ಗಳಲ್ಲಿನ ಫಲಕಗಳೇ ಕಾಣಿಸದೆ, ಅದರ ಮೇಲಿರುವ ದೂಳಿನಿಂದಲೇ ಸಂಡೂರಿನ ಬಸ್ ಇದೇ ಎಂದು ಗುರುತಿಸಬಹುದು. ಆ ಭಾಗದಲ್ಲಿ ಸಂಚರಿಸುವ ವಾಹನಗಳಿಗೆ ದೂಳೇ ಅಲಂಕಾರವಾಗಿದೆ. ಎತ್ತ ಕಣ್ಣಾಯಿಸಿದರೂ ಕೆಂದೂಳಿನ ರಾಶಿ, ಮಳೆಗಾಲದಲ್ಲಿ ಕೆಸರಿನ ಗದ್ದೆ. ಇಂತಹ ದುಸ್ಥಿತಿಯನ್ನು ಸರಿಪಡಿಸುವ ಅಗತ್ಯವಿದೆ.

ಮಂಜುನಾಥ್, ವಿಜಯನಗರ

ಸರ್ಕಾರದಿಂದಲೇ ಶೋಷಣೆ

ಗಣಿಬಾಧಿತ ಪ್ರದೇಶಗಳಲ್ಲಿನ ಜನರ ಬದುಕು ಶೋಚನೀಯ. ಕುಡಿಯುವ ನೀರು, ಶುದ್ಧ ಗಾಳಿ, ಮರ ಗಿಡ ಎಲ್ಲವೂ ಅಲ್ಲಿ ಕಣ್ಮರೆ. ಸರ್ಕಾರವೇ ಗಣಿಗಾರಿಕೆಗೆ ಪರವಾನಗಿ ನೀಡಿ, ಜನರ ಮೂಲ ಅಗತ್ಯಗಳನ್ನು ನಾಶ ಮಾಡಿದೆ. ಖನಿಜ ಪ್ರತಿಷ್ಠಾನಗಳಿಂದ ಜಿಲ್ಲಾ ಮಟ್ಟದ ಗಣಿಗಾರಿಕೆ ಪ್ರದೇಶಗಳಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ನಡೆಯಬೇಕು.

ವಿಜಯ್, ಚಿತ್ರದುರ್ಗ

ಭೂಗಳ್ಳರ ನಿಯಂತ್ರಿಸಿ

ಭೂ ಬಕಾಸುರರ ಹೊಡೆತಕ್ಕೆ ಸಿಲುಕಿ, ಭೂ ಹೊರಮ್ಮೆ ತನ್ನ ರೂಪ ಕಳೆದುಕೊಂಡಿದೆ. ಭೂಮಿ ತನ್ನ ಒಡಲಿನಲ್ಲಿರಿಸಿಕೊಂಡಿರುವ ಖನಿಜ ಸಂಪತ್ತನ್ನು ದೋಚಲಾಗುತ್ತಿದೆ. ಗಣಿಗಾರಿಕೆಯಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿ, ಅಲ್ಲಿನ ವನ್ಯಜೀವಿ ಆವಾಸ ಸ್ಥಾನ ನಾಶವಾಗುತ್ತಿದೆ. ಇದಕ್ಕೆ ಸರ್ಕಾರ ಕಡಿವಾಣ ಹಾಕುತ್ತಿದ್ದರೂ ಕೆಲವರ ಹಸ್ತಕ್ಷೇಪದಿಂದ ಸಾಮಾಜಿಕ ಜೀವವೈವಿಧ್ಯ ಸಮತೋಲನ ತಪ್ಪುತ್ತಿದೆ.

ಲೋಕೇಶ್, ಮೇಲುಕೋಟೆ

ಪರಿಸರ ರಕ್ಷಣೆಗೆ ಆದ್ಯತೆ

ಮಾನವ ತನ್ನ ಅನಿಯಮಿತ ಆಸೆ–ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ಪರಿಸರದ ಮೇಲೆ ನಿರಂತರವಾಗಿ ಸವಾರಿ ಮಾಡುತ್ತಿದ್ದಾನೆ. ಸಂಡೂರು ಗಣಿಗಾರಿಕೆಯಿಂದ ಅತ್ಯಂತ ಹೆಚ್ಚು ನಲುಗಿದ ಪ್ರದೇಶ ಎಂದು ಕರೆಯಲಾಗಿದೆ. ಇಂತಹ ಪ್ರದೇಶದಲ್ಲಿನ ಜನರ ಸ್ಥಿತಿಗತಿಯನ್ನು ಮುಂದಕ್ಕೆ ತರಲು ಯಾವುದೇ ಕ್ರಮ ನಡೆಯದಿರುವುದು ಶೋಚನೀಯ. ಅರಣ್ಯ ಸಂರಕ್ಷಣೆ ಹಾಗೂ ಜನರ ಆರೋಗ್ಯ ಸುಧಾರಣೆಗೆ ಒತ್ತು ನೀಡಬೇಕು.

ಗಣೇಶ್, ಸಂಡೂರು

ತವರು ಜಿಲ್ಲೆ 'ಉಸ್ತುವಾರಿ' ಆಸೆಗೆ ಸಿ.ಎಂ ತಣ್ಣೀರು?

ಒಂದನೇ ಪುಟದಿಂದ

ಆಯಾ ಜಿಲ್ಲೆಗೆ ಸೇರಿದವರನ್ನು ಉಸ್ತುವಾರಿ ಮಾಡುವುದರಿಂದ ಹಲವು ಸಮಸ್ಯೆಗಳು ಉದ್ಭವವಾಗುತ್ತಿದೆ. ಜಿಲ್ಲೆಯಲ್ಲಿ ತಮ್ಮದೇ ಪ್ರಭಾವಳಿಯನ್ನು ಸೃಷ್ಟಿಸಿಕೊಂಡು ಪಕ್ಷದ ಇತರ ಶಾಸಕರನ್ನು ಮೂಲೆಗುಂಪು ಮಾಡುವ ಕೆಲಸ ನಡೆಯುತ್ತಿದೆ. ಅಭಿವೃದ್ಧಿಗೆ ಒತ್ತು ನೀಡುತ್ತಿಲ್ಲ ಎಂಬುದಾಗಿ ಬಿಜೆಪಿ ಆಡಳಿತವಿರುವ ರಾಜ್ಯಗಳ ಶಾಸಕರಿಂದ ವರಿಷ್ಠರಿಗೆ ಸಾಕಷ್ಟು ದೂರುಗಳು ತಲುಪಿವೆ ಎಂದು ಮೂಲಗಳು ಹೇಳಿವೆ.

'ತಮ್ಮದಲ್ಲದ ಜಿಲ್ಲೆಯ ಸಚಿವರನ್ನು ಉಸ್ತುವಾರಿ ಮಾಡಿದರೆ ಆ ಜಿಲ್ಲೆಗಳ ಶಾಸಕರ ಅಸಮಾಧಾನಕ್ಕೂ ಕಾರಣವಾಗಬಹುದು ಎಂಬ ಮಾತು ಕೇಳಿಬಂದಿದೆ. ಆದರೆ, ಪಕ್ಷದ ವರಿಷ್ಠರ ಸೂಚನೆ ಇರುವುದರಿಂದ ಅದನ್ನು ಮುಖ್ಯಮಂತ್ರಿ ಪಾಲಿಸಬೇಕಾಗುತ್ತದೆ. ಇದನ್ನು ಬಿಜೆಪಿ ಆಡಳಿತದ ಎಲ್ಲ ರಾಜ್ಯಗಳಲ್ಲೂ ಜಾರಿ ಮಾಡಲಾಗುತ್ತಿದೆ ಎಂಬ ಸಮಜಾಯಿಷಿ ನೀಡಿ ಸಮಾಧಾನಪಡಿಸುತ್ತಾರೆ. ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡಲು ಇದು ಸಹಾಯಕವಾಗುತ್ತದೆ' ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

ಬಿಜೆಪಿ ರಾಷ್ಟ್ರೀಯ ಎಸ್‌ಸಿ ಮೋರ್ಚಾಗೆ 4 ಸಚಿವರು

ಬೆಂಗಳೂರು: ಬಿಜೆಪಿ ಎಸ್‌ಸಿ ಮೋರ್ಚಾದ ರಾಷ್ಟ್ರೀಯ ಘಟಕವನ್ನು ಪುನರ್ ರಚನೆ ಮಾಡಿದ್ದು, ಅದರಲ್ಲಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಸೇರಿ ರಾಜ್ಯದ ಆರು ಮಂದಿಗೆ ಅವಕಾಶ ನೀಡಲಾಗಿದೆ.

ರಾಷ್ಟ್ರೀಯ ಕಾರ್ಯಕಾರಿಣಿ ಕಾಯಂ ಆಹ್ವಾನಿತರು: ಗೋವಿಂದ ಕಾರಜೋಳ, ಸಚಿವರಾದ ಅರವಿಂದ ಲಿಂಬಾವಳಿ, ಪ್ರಭು ಚವ್ಹಾಣ, ಎಸ್.ಅಂಗಾರ. ವಿಶೇಷ ಆಹ್ವಾನಿತರು: ಡಿ.ಎಸ್.ವೀರಯ್ಯ ಮತ್ತು ವೆಂಕಟೇಶ ಮೌರ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಬಿಜೆಪಿ ಪ್ರಕಟಣೆಯಲ್ಲಿ ತಿಳಿಸಿದೆ.

ಸಿ.ಡಿ. ಪ್ರಕರಣ: ವಕೀಲರಿಗೇ ನೋಟಿಸ್ ಕೊಟ್ಟ ಪೊಲೀಸರು

ನ್ಯಾಯಾಧೀಶರ ಎದುರು ಇಂದು ಸಂತ್ರಸ್ತೆ ಹೇಳಿಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ ಪ್ರಕರಣ ದಿನಕ್ಕೊಂದು ತಿರುವು ಪಡೆಯುತ್ತಿದ್ದು, ಅಜ್ಞಾನ ಸ್ಥಳದಲ್ಲಿರುವ ಯುವತಿಯನ್ನು ವಿಚಾರಣೆಗೆ ಕರೆತರುವಂತೆ ಅವರ ಪರ ವಕೀಲರಿಗೆ ಇದೀಗ ಪೊಲೀಸರು ನೋಟಿಸ್ ನೀಡಿದ್ದಾರೆ.

ಇದರಿಂದಾಗಿ, ಸಂತ್ರಸ್ತೆ ಸೋಮವಾರ ನ್ಯಾಯಾಧೀಶರ ಮುಂದೆ ಹಾಜರಾಗಿ ಹೇಳಿಕೆ ನೀಡುವ ಸಾಧ್ಯತೆ ಇದೆ.

'ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿದ್ದ ರಮೇಶ ಜಾರಕಿಹೊಳಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ' ಎಂದು ಆರೋಪಿಸಿ ಯುವತಿ ನೀಡಿದ್ದ ಲಿಖಿತ ಹೇಳಿಕೆಯನ್ನು, ಅವರ ಪರ ವಕೀಲ ಜಗದೀಶ್ ಕೆ.ಎನ್. ಹಾಗೂ ಮಂಜುನಾಥ್ ಅವರು ಪೊಲೀಸರಿಗೆ ನೀಡಿದ್ದರು. ಅದೇ ದೂರಿನನ್ವಯ, ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಪ್ರಕರಣದಲ್ಲಿ ಯುವತಿ ಹೇಳಿಕೆ ಅಗತ್ಯವಿದ್ದು, ಈಗಾಗಲೇ ಅವರಿಗೆ ಮೂರು ಬಾರಿ ನೋಟಿಸ್ ನೀಡಲಾಗಿದೆ. ಅವರು ವಿಚಾರಣೆಗೆ ಬಂದಿಲ್ಲ. ನೀವು ಅವರನ್ನು ವಿಚಾರಣೆಗೆ ಕರೆದುಕೊಂಡು ಬನ್ನಿ' ಎಂದು ಪೊಲೀಸರು, ಜಗದೀಶ್ ಅವರಿಗೆ ವಾಟ್ಸ್‌ಆ್ಯಪ್ ಮೂಲಕ ನೋಟಿಸ್ ಪ್ರತಿ ಕಳುಹಿಸಿದ್ದಾರೆ.

'ಪ್ರಭಾವಕ್ಕೆ ಮಣಿದು ಪೊಲೀಸರು ಪ್ರಕರಣದ ದಿಕ್ಕು ತಪ್ಪಿಸಿದ್ದಾರೆ' ಎಂದು ಆರೋಪಿಸಿ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹರಿಬಿಟ್ಟಿರುವ ವಕೀಲರಾದ ಜಗದೀಶ್ ಹಾಗೂ ಮಂಜುನಾಥ್, 'ಪೊಲೀಸರ ಈ ನಡೆ ಸರಿ ಅನ್ನಿಸುತ್ತಿಲ್ಲ' ಎಂದಿದ್ದಾರೆ.

'ಯುವತಿ ದೂರಿನನ್ವಯ ಎಫ್‌ಐಆರ್ ದಾಖಲಾದ ನಂತರದ ಬೆಳವಣಿಗೆ ನೋಡಿದರೆ, ತನಿಖಾಧಿಕಾರಿ ಎದುರು ಯುವತಿಯನ್ನು ಹಾಜರುಪಡಿಸಬೇಕು ಎಂದು ಅನ್ನಿಸುತ್ತಿಲ್ಲ. ಹೀಗಾಗಿ, ಯುವತಿ ನೇರವಾಗಿ ನ್ಯಾಯಾಧೀಶರ ಎದುರು ಸೋಮವಾರವೇ ಹಾಜರಾಗಿ ಹೇಳಿಕೆ ದಾಖಲಿಸುವ ಸಾಧ್ಯತೆ ಇದೆ' ಎಂದೂ ಅವರು ಹೇಳಿದ್ದಾರೆ.

'ನ್ಯಾಯಾಧೀಶರ ಎದುರು ಯುವತಿ ದಾಖಲಿಸುವ ಸ್ವ-ಇಚ್ಛಾ ಹೇಳಿಕೆ ಮಹತ್ವದ್ದು. ಅದು ಪ್ರಕರಣದ ಬೆನ್ನೆಲುಬು. ಯುವತಿ ಹೇಳಿಕೆ ಆಧರಿಸಿ ನ್ಯಾಯಾಧೀಶರು ಯಾವುದೇ ರೀತಿಯಲ್ಲೂ ಆದೇಶ ಹೊರಡಿಸಬಹುದು. ನಂತರ, ಇಬ್ಬರನ್ನೂ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬಹುದು. ಆರೋಪಿ, ತಾನು ಪ್ರಭಾವಿ ಎಂದು ಪರೀಕ್ಷೆ ನಿರಾಕರಿಸಲಾಗದು' ಎಂದೂ ತಿಳಿಸಿದ್ದಾರೆ.

'ಆರೋಪಿಗೆ ಎಸ್‌ಐಟಿ ಬೆಂಬಲ'

'ಪ್ರಕರಣ ಸಂಬಂಧ ಕಬ್ಬನ್ ಪಾರ್ಕ್ ಹಾಗೂ ಸದಾಶಿವನಗರದಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್ ದಾಖಲಾಗಿವೆ. ಎರಡೂ ಪ್ರಕರಣಗಳ ತನಿಖೆಯನ್ನು ಒಂದೇ ತನಿಖಾ ಸಂಸ್ಥೆ ನಡೆಸುವುದು ಎಷ್ಟು ನ್ಯಾಯಯುತ' ಎಂದು ವಕೀಲ ಜಗದೀಶ್ ಪ್ರಶ್ನಿಸಿದರು.

'ಯುವತಿ ದೂರಿನಡಿ ದಾಖಲಾದ ಪ್ರಕರಣ ಆರೋಪಿ, ರಾಜ್ಯ ಸರ್ಕಾರದ ಭಾಗ ಹಾಗೂ ಪ್ರಭಾವಿ. ಅವರೇ ಈ ಕೃತ್ಯ ಎಸಗಿದ್ದಾರೆ. ಇದೀಗ ತನಿಖಾ ಸಂಸ್ಥೆಯು ಅವರಿಗೆ ಬೆಂಬಲ ನೀಡುತ್ತಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಅತ್ಯಾಚಾರದ ಆರೋಪಿಯೊಬ್ಬ, ಯಾವ ರೀತಿ ಬಹಿರಂಗವಾಗಿ ಮಾಧ್ಯಮಗಳಿಗೆ ಹೇಳಿಕೆ ಕೊಡುತ್ತಿದ್ದಾರೆ. ಬೇರೆ ಯಾರಾದರೂ ಸಾಮಾನ್ಯ ವ್ಯಕ್ತಿಯಾಗಿದ್ದರೆ ಇದು ಸಾಧ್ಯವಾಗುತ್ತಿತ್ತಾ' ಎಂದೂ ಅವರು ಪ್ರಶ್ನಿಸಿದರು.

ಯುವತಿ ಸ್ನೇಹಿತನಿಗೆ ಮತ್ತೊಮ್ಮೆ ನೋಟಿಸ್

ಯುವತಿಯ ಪೋಷಕರು ಹಾಗೂ ತಮ್ಮಂದಿರನ್ನು ಶನಿವಾರವಷ್ಟೇ ಎಸ್‌ಐಟಿ ಅಧಿಕಾರಿಗಳು ವಿಚಾರಣೆ ನಡೆಸಿ ಹೇಳಿಕೆ ಪಡೆದಿದ್ದರು. ಇದೀಗ, ಅದೇ ಹೇಳಿಕೆ ಆಧರಿಸಿ ಯುವತಿ ಸ್ನೇಹಿತನನ್ನು ವಿಚಾರಣೆ ನಡೆಸಲು ಅಧಿಕಾರಿಗಳು ಮುಂದಾಗಿದ್ದಾರೆ. ಸೋಮವಾರ ವಿಚಾರಣೆಗೆ ಬರುವಂತೆ ಸ್ನೇಹಿತನಿಗೆ ನೋಟಿಸ್ ಸಹ ನೀಡಿದ್ದಾರೆ.

ಬಣ್ಣದೋಕುಳಿ ಬೆಂಗಳೂರು ನಗರದಲ್ಲಿ ಭಾನುವಾರ ಸಜ್ಜನ್ ರಾವ್ ವೃತ್ತದ ಬಳಿ ಪುಟಾಣಿಗಳು ಪರಸ್ಪರ ಬಣ್ಣ ಹಚ್ಚಿ ಹೋಳಿ ಹಬ್ಬವನ್ನು ಆಚರಿಸಿದರು. -ಪ್ರಜಾವಾಣಿ ಚಿತ್ರ/ ರಂಜು ಪಿ

ನಿಧನವಾರ್ತೆ

ಅಕ್ಷರಗೆ ಮಾತೃವಿಯೋಗ

ಸಾಗರ: ತಾಲ್ಲೂಕಿನ ಹೆಗ್ಗೋಡಿನ ನೀನಾಸಂ ಸಂಸ್ಥೆಯ ಸಂಸ್ಥಾಪಕ ಕೆ.ವಿ. ಸುಬ್ಬಣ್ಣ ಅವರ ಪತ್ನಿ ಶೈಲಜಾ (85) ಭಾನುವಾರ ಮುಂಡಿಗೆಸರ ಗ್ರಾಮದ ತಮ್ಮ ನಿವಾಸದಲ್ಲಿ ನಿಧನರಾದರು.

ರಂಗಕರ್ಮಿ ಕೆ.ವಿ ಅಕ್ಷರ ಅವರ ಪುತ್ರ. ಕೆ.ವಿ.ಸುಬ್ಬಣ್ಣ ಅವರು ನೀನಾಸಂ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾಗ ಮನೆ, ತೋಟದ ಜವಾಬ್ದಾರಿಗಳನ್ನು ಶೈಲಜಾ ಸಂಪೂರ್ಣವಾಗಿ ನೋಡಿಕೊಳ್ಳುತ್ತಿದ್ದರು. ಈ ಕಾರಣದಿಂದಲೇ ಸುಬ್ಬಣ್ಣ ಅವರು ನೀನಾಸಂನಲ್ಲಿ ಹೆಚ್ಚು ಕಾಲ ತೊಡಗಿಸಿಕೊಳ್ಳುವಂತಾಗಿತ್ತು.

ಅಂತ್ಯಸಂಸ್ಕಾರ ಭಾನುವಾರ ಸ್ವಗ್ರಾಮದಲ್ಲಿ ನಡೆಯಿತು.

'ಎಸ್‌ಐಟಿ ತನಿಖೆ ಮೇಲೆ ಪ್ರತಿಭಟನೆ ಪ್ರಭಾವ ಬೀರಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಮೇಶ ಜಾರಕಿಹೊಳಿ ಸಿ.ಡಿ ವಿಚಾರಕ್ಕೆ ಸಂಬಂಧಿಸಿದಂತೆ ವಿವಿಧೆಡೆ ನಡೆಯುತ್ತಿರುವ ಪ್ರತಿಭಟನೆಗಳು ಎಸ್‌ಐಟಿ ತನಿಖೆ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಪ್ರತಿಭಟನೆಗಳು ಅಲ್ಲಲ್ಲಿ ನಡೆಯುತ್ತವೆ. ಅವುಗಳನ್ನು ಸ್ಥಳೀಯ ಪೊಲೀಸರು ನೋಡಿಕೊಳ್ಳುತ್ತಾರೆ. ನಮ್ಮ ತನಿಖೆ ಕ್ರಮಬದ್ಧವಾಗಿ, ವೈಜ್ಞಾನಿಕವಾಗಿ ನಡೆಯಲಿದೆ. ಎಸ್‌ಐಟಿಗೆ ನಾವು ಸ್ವಾತಂತ್ರ್ಯ ನೀಡಿದ್ದೇವೆ. ತನಿಖೆಯಿಂದ ಸತ್ಯಾಸತ್ಯತೆ ಹೊರಬರಲಿದೆ' ಎಂದರು.

'ಸಿ.ಡಿ ಯುವತಿಗೆ ರಕ್ಷಣೆ ನೀಡಲು ನಾವು ಈಗಲೂ ಬದ್ಧ. ಈಗಾಗಲೇ ಯುವತಿಗೆ ಐದು ಬಾರಿ ನೋಟಿಸ್ ನೀಡಿದ್ದೇವೆ. ಯುವತಿ ಇರುವ ಕಡೆಗೆ ಹೋಗಿ ರಕ್ಷಣೆ ನೀಡುತ್ತೇವೆ. ಅವರ ಕುಟುಂಬ ಸದಸ್ಯರಿಗೆ ರಕ್ಷಣೆ ನೀಡಲಾಗಿದೆ. ಪೊಲೀಸರ ನೈತಿಕತೆ ಕುಗ್ಗಿಸುವ ಕೆಲಸವನ್ನು ಯಾರೂ ಮಾಡಬಾರದು. ಎಸ್‌ಐಟಿ ತಂಡ ಕ್ರಮಬದ್ಧವಾಗಿ, ಸರಿಯಾದ ದಾರಿಯಲ್ಲಿ ತನಿಖೆ ನಡೆಸುತ್ತಿದೆ' ಎಂದರು.

'ಸಿದ್ದರಾಮಯ್ಯ ಅವರಿಗೆ ನೆನಪಿನ ಶಕ್ತಿ ಕಡಿಮೆ ಇದೆ. ಅವರು ಮುಖ್ಯಮಂತ್ರಿ ಆಗಿದ್ದಾಗ ಅಂದಿನ ಸಚಿವ ಎಚ್.ವೈ.ಮೇಟಿ ಸಿ.ಡಿ ಪ್ರಕರಣದಲ್ಲಿ ಏನು ಮಾಡಿದರು ಎಂಬುದು ಎಲ್ಲರಿಗೂ ಗೊತ್ತಿದೆ. ಪ್ರಕರಣವನ್ನು ಸಿಐಡಿಗೆ ಕೊಟ್ಟು ಮೇಟಿ ಪ್ರಕರಣ ಮುಚ್ಚಿ ಹಾಕಿದರು. ಯುವತಿ ದೂರು ನೀಡಿದರೂ ಪ್ರಕರಣ ದಾಖಲಿಸಲಿಲ್ಲ. ಒಬ್ಬ ಅಧಿಕಾರಿಯೇ ವಿಚಾರಣೆ ಮಾಡಿ ಮೇಟಿ ಅವರಿಗೆ ಕ್ಲೀನ್ ಚಿಟ್ ನೀಡಿದರು. ಇದೇ ವಿಷಯವನ್ನು ಅಧಿವೇಶನದಲ್ಲಿ ಹೇಳಿದ್ದೇನೆ' ಎಂದು ಬೊಮ್ಮಾಯಿ ಹೇಳಿದರು.

ಅತ್ಯಾಚಾರಿ ಆರೋಪಿಯನ್ನು ಗೂಳಿಯಂತೆ ಬಿಟ್ಟಿದೆ: ಕಾಂಗ್ರೆಸ್

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ. ಪ್ರಕರಣ ದಿನಕ್ಕೊಂದು ಆಯಾಮ ಪಡೆದುಕೊಳ್ಳುತ್ತಿರುವ ಮಧ್ಯೆ ಬಿಜೆಪಿ- ಕಾಂಗ್ರೆಸ್ ನಡುವೆ ಟ್ವೀಟ್ ಸಮರ ಜೋರಾಗಿದೆ.

ಭಾನುವಾರ ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, 'ರಮೇಶ್ ಜಾರಕಿಹೊಳಿಯ ಚಡ್ಡಿಯ ಲಾಡಿಯೂ ಸಡಿಲ, ನಾಲಿಗೆಯೂ ಸಡಿಲ, ಬುದ್ದಿಯೂ ಸಡಿಲ ಎನ್ನುವುದನ್ನು ಜಗತ್ತು ನೋಡಿದೆ. ರಾಜ್ಯದ ಮರ್ಯಾದೆ ದಿನದಿನಕ್ಕೂ ಕುಸಿಯುತ್ತಿದೆ. ಹೀಗಿದ್ದರೂ ಅತ್ಯಾಚಾರಿ ಆರೋಪಿಯನ್ನು ಗೂಳಿಯಂತೆ ತಿರುಗಲು ಬಿಟ್ಟಿದ್ದು ಸರ್ಕಾರದ ನೀಚತನವೋ ಅಥವಾ ಪೊಲೀಸರ ಹೇಡಿತನವೋ ಗೃಹ ಸಚಿವ ಬಸರಾಜ ಬೊಮ್ಮಾಯಿಯವರೇ' ಎಂದು ಪ್ರಶ್ನಿಸಿದೆ.

> **ರಾಜ್ಯದಲ್ಲಿ ಅಧಿಕಾರದಲ್ಲಿರುವ ಸಿ.ಡಿ ಸರ್ಕಾರ, ತನ್ನ ಅಕ್ರಮ ಚಟುವಟಿಕೆಯ ಸಿ.ಡಿಗಳನ್ನು ರಕ್ಷಿಸಿಕೊಳ್ಳಲು ನಾಟಕ ಮಾಡುತ್ತಿದೆ. ಈ ಸರ್ಕಾರಕ್ಕೆ ರಾಜ್ಯದ ಜನರ ಸಮಸ್ಯೆ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ**
>
> **ಡಿ.ಕೆ. ಸುರೇಶ್,** ಕಾಂಗ್ರೆಸ್ ಸಂಸದ

ಡಿ.ಕೆ.ಶಿವಕುಮಾರ್ ಕಾರಿಗೆ ಚಪ್ಪಲಿ ಎಸೆತ

ಒಂದನೇ ಪುಟದಿಂದ

ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಇಳಿದ ಶಿವಕುಮಾರ್ ಅಲ್ಲಿಂದ ಪಕ್ಷದ ಸಭೆ ನಿಗದಿಯಾಗಿದ್ದ ಸ್ಥಳಕ್ಕೆ ಪೊಲೀಸ್ ಬಿಗಿ ಭದ್ರತೆಯಲ್ಲಿ ತೆರಳುತ್ತಿದ್ದಾಗ ನೂರಾರು ಮಂದಿ ಕಪ್ಪು ಬಾವುಟ ಪ್ರದರ್ಶಿಸಿ, ಧಿಕ್ಕಾರ ಕೂಗಿದ್ದಾರೆ. ಪೊಲೀಸ್ ಭದ್ರತೆಯ ನಡುವೆಯೂ ವ್ಯಕ್ತಿಯೊಬ್ಬ ಶಿವಕುಮಾರ್ ಇದ್ದ ಕಾರಿನ ಮೇಲೆ ಚಪ್ಪಲಿ ತೂರಿದ್ದಾನೆ. ಪ್ರತಿಭಟನಾಕಾರರ ಗುಂಪಿನಲ್ಲಿದ್ದ ವ್ಯಕ್ತಿಯೊಬ್ಬ ಶಿವಕುಮಾರ್‌ಬೆಂಬಲಿಗರಕಾರಿನಮೇಲೆಕಲ್ಲೆಸೆದಿದ್ದು, ಕಾರಿನ ಗಾಜು ಪುಡಿಯಾಗಿವೆ.

ರಮೇಶ ಅವರ ತಮ್ಮ, ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಸತೀಶ ಜಾರಕಿಹೊಳಿ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋಮವಾರ ನಾಮಪತ್ರ ಸಲ್ಲಿಸುತ್ತಿದ್ದಾರೆ. ಆ ಸಂದರ್ಭದಲ್ಲಿ ಜತೆಗಿರುವುದಕ್ಕಾಗಿ ಶಿವಕುಮಾರ್ ಬೆಳಗಾವಿಯಲ್ಲೇ ತಂಗಿದ್ದಾರೆ. ಇವರು ವಾಸ್ತವ್ಯ ಹೂಡಿರುವ ಹೋಟೆಲ್‌ಗೆ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲಾಗಿದೆ.

'ಪ್ರತಿಭಟನೆಯ ಸ್ವಾಗತಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಈ ಸ್ವಾಗತವೇ ನಮಗೆ ದೊಡ್ಡ ಶಕ್ತಿಯಾಗುತ್ತದೆ. ಎಲ್ಲವನ್ನೂ ನಾನು ಕ್ರೀಡಾಸ್ಫೂರ್ತಿಯಿಂದ ತೆಗೆದುಕೊಳ್ಳುತ್ತೇನೆ' ಎಂದು ಶಿವಕುಮಾರ್ ಪ್ರತಿಕ್ರಿಯಿಸಿದ್ದಾರೆ.

ಮುಂದುವರಿದ ಪ್ರತಿಭಟನೆ: ರಮೇಶ ಜಾರಕಿಹೊಳಿ ಬಂಧನಕ್ಕೆ ಆಗ್ರಹಿಸಿ ಬೆಂಗಳೂರಿನ ಸದಾಶಿವನಗರದ ಅವರ ಮನೆಯ ಎದುರು ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ತಡರಾತ್ರಿ ಪ್ರತಿಭಟನೆ ನಡೆಸಿದ್ದರು. ಭಾನುವಾರವೂ ಬೆಳಿಗ್ಗೆ ರಮೇಶ ಮನೆ ಎದುರು ಪ್ರತಿಭಟನೆ ನಡೆಸಿದ 'ಕೈ' ಪಡೆಯ ಸದಸ್ಯರು, ಬಂಧನಕ್ಕೆ ಒತ್ತಾಯಿಸಿದರು.

ಯುವ ಕಾಂಗ್ರೆಸ್ ಕಾರ್ಯಕರ್ತರು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯ ಎದುರಿನಲ್ಲೂ ಪ್ರತಿಭಟನೆ ನಡೆಸಿದರು. ಶಿವಕುಮಾರ್ ವಿರುದ್ಧ ಅವಹೇಳನಕಾರಿ ಪದ ಬಳಕೆ ಮಾಡಿರುವ ಆರೋಪದಡಿ ರಮೇಶ ಜಾರಕಿಹೊಳಿ ವಿರುದ್ಧ ಪ್ರಕರಣ ದಾಖಲಿಸುವಂತೆ ಪೊಲೀಸ್ ಠಾಣೆಗೆ ದೂರನ್ನೂ ಸಲ್ಲಿಸಿದರು.

ಕನಕಪುರಕ್ಕೆ ಬರಲು ಸವಾಲು: ಕನಕಪುರದಲ್ಲಿ ಶಿವಕುಮಾರ್‌ಗೆ ಸೋಲುಣಿಸುವ ರಮೇಶ ಜಾರಕಿಹೊಳಿ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಮುಖಂಡರೂ ಪಂಥಾಹ್ವಾನ ನೀಡಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿದ ಸಂಸದ ಡಿ.ಕೆ. ಸುರೇಶ್, 'ರಮೇಶ ಜಾರಕಿಹೊಳಿ ಕನಕಪುರಕ್ಕಾದರೂ ಬರಲಿ, ಬೆಂಗಳೂರಿಗಾದರೂ ಬರಲಿ. ಬಂದಾಗ ನೋಡಿಕೊಂಡರಾಯಿತು' ಎಂದರು.

ಕನಕಪುರದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ವಿಧಾನ ಪರಿಷತ್ ಸದಸ್ಯ ಎಸ್. ರವಿ, 'ರಮೇಶ ಜಾರಕಿಹೊಳಿಗೆ ತಾಕತ್ತಿದ್ದರೆ ಕನಕಪುರಕ್ಕೆ ಬರಲಿ. ಸ್ವಾಭಿಮಾನಿ ಮಹಿಳೆಯರು ಪೊರಕೆ ಸೇವೆಯ ಸ್ವಾಗತ ನೀಡುತ್ತಾರೆ' ಎಂದು ಸವಾಲು ಹಾಕಿದರು.

ಮಲ್ಟಿಮೀಡಿಯಾ ಕೋರ್ಸ್ ಗರಿಗೆದರಿದ ಅವಕಾಶ

ಮಲ್ಟಿಮೀಡಿಯಾ ಅಥವಾ ಬಹು ಮಾಧ್ಯಮದ ಕೋರ್ಸ್‌ಗೆ ಸದ್ಯಕ್ಕಂತೂ ಅತ್ಯಂತ ಹೆಚ್ಚು ಬೇಡಿಕೆಯಿದೆ. ಚೆನ್ನಾಗಿ ಸಂಪಾದನೆ ಮಾಡುವಂತಹ ವೃತ್ತಿ ಅವಕಾಶಗಳು ವಿಪುಲವಾಗಿದ್ದು ವಿದ್ಯಾರ್ಥಿಗಳು ಇದರತ್ತ ಆಕರ್ಷಿತರಾಗುತ್ತಿದ್ದಾರೆ.

ಶ್ರುತಿ ಸುಬ್ರಹ್ಮಣ್ಯ

ಸಂದೇಶಗಳನ್ನು ಸೃಷ್ಟಿಸಲು ಬಳಸುವ ಧ್ವನಿ, ಚಿತ್ರ, ಬರಹ, ಗ್ರಾಫಿಕ್ಸ್, ಅನಿಮೇಶನ್ ಮೊದಲಾದ ವಿವಿಧ ರೂಪಗಳ ಮಾಧ್ಯಮಗಳನ್ನೊಳಗೊಂಡಿರುವ ಮಲ್ಟಿಮೀಡಿಯಾಗೆ ವಿವಿಧ ಸೇವಾ ವಲಯಗಳಲ್ಲಿ ಬಹು ಬೇಡಿಕೆಯಿದೆ. ವಿಷಯದ ಸೃಷ್ಟಿಗೆ ಹಾಗೂ ಸಂವಹನಕ್ಕೆ ಬಹಳಷ್ಟು ಉದ್ಯಮಗಳ ಆಯ್ಕೆ ಈ ಮಲ್ಟಿಮೀಡಿಯಾ. ಅದರಲ್ಲೂ ಮಾಧ್ಯಮ ಮತ್ತು ಸಂವಹನ ಉದ್ಯಮಗಳು ಹೆಚ್ಚಾಗಿ ಇದರ ಮೇಲೆ ನಡೆಯುತ್ತಿರುವುದರಿಂದ ಮಲ್ಟಿಮೀಡಿಯಾ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರ ಎನ್ನಬಹುದು. ಹೀಗಾಗಿ ಗ್ರಾಫಿಕ್ ವಿನ್ಯಾಸಕರು, ವೆಬ್ ವಿನ್ಯಾಸಕರು, ಗೇಮ್, ಅನಿಮೇಶನ್ ಮೊದಲಾದ ತಜ್ಞರಿಗೆ ಅವಕಾಶಗಳ ಬಾಗಿಲನ್ನು ತೆರೆದಿದೆ. ಮಕ್ಕಳು ಈ ಕ್ಷೇತ್ರದಲ್ಲಿ ಅವಕಾಶ ಹುಡುಕಿಕೊಳ್ಳಲು ಬಯಸಿದರೆ ಪೋಷಕರು ಅವರ ಕನಸಿಗೆ ನೀರೆರೆಯಲು ಹಿಂಜರಿಯಬೇಡಿ.

ವಿದ್ಯಾರ್ಥಿಗಳಿಗೆ ಪ್ರಯೋಜನ

ವಿದ್ಯಾರ್ಥಿಗಳು ವಿವಿಧ ಕೌಶಲಗಳನ್ನು ಕಲಿಯಬಹುದು. ಮಲ್ಟಿಮೀಡಿಯಾ ಕೋರ್ಸ್‌ನಲ್ಲಿ ವಿದ್ಯಾರ್ಥಿಗಳು ಗ್ರಾಫಿಕ್ ವಿನ್ಯಾಸ, ವಿಡಿಯೊ ಮತ್ತು ಆಡಿಯೊ ಎಡಿಟಿಂಗ್, ವೆಬ್ ವಿನ್ಯಾಸ, ವಿಎಫ್‌ಎಕ್ಸ್ ಸೃಷ್ಟಿ, 2ಡಿ ಮತ್ತು 3ಡಿ ಅನಿಮೇಶನ್ ಮತ್ತು ಮಲ್ಟಿಮೀಡಿಯಾ ಪ್ರೋಗ್ರಾಮಿಂಗ್ ಕಲಿಯಬಹುದು. ಫೋಟೊಶಾಪ್, ಕೋರಲ್ ಡ್ರಾ, ಫ್ಲಾಷ್, ಡ್ರೀಮ್‌ವೀವರ್, ಇಲಸ್ಟ್ರೇಟರ್, ಇನ್‌ಡಿಸೈನ್, ಪೇಜ್‌ಮೇಕರ್ ಮೊದಲಾದ ಸಾಫ್ಟ್‌ವೇರ್ ಬಳಕೆಯನ್ನು ಕಲಿಯಬಹುದು.

ಹಾಗಾದರೆ ಸಮಗ್ರವಾದ ಮಲ್ಟಿಮೀಡಿಯಾ ಕೋರ್ಸ್‌ನಿಂದ ಏನು ಪ್ರಯೋಜನವಿದೆ ಎಂಬುದನ್ನು ನೋಡೋಣ.

ಮಾಹಿತಿಯ ವಿಶ್ಲೇಷಣೆ: ಇಂದಿನ ಮಾಹಿತಿ ಯುಗದಲ್ಲಿ ಸಂದೇಶವನ್ನು ಶೀಘ್ರವಾಗಿ ಹಾಗೂ ಪರಿಣಾಮಕಾರಿಯಾಗಿ ನೀಡಲು ವಿವಿಧ ಮಾಧ್ಯಮಗಳ ಸಮರ್ಪಕ ಮಿಶ್ರಣದಿಂದ ಮಾತ್ರ ಸಾಧ್ಯ. ಇದರಿಂದ ಯಾರಿಗೆ ಸಂದೇಶ ತಲುಪುವುದೋ ಅಂಥವರು ಇದನ್ನು ಚೆನ್ನಾಗಿ ಅರ್ಥೈಸಿಕೊಂಡು ಬಹುಕಾಲ ಅದನ್ನು ಉಳಿಸಿಕೊಳ್ಳಲು ಸಮರ್ಥರಾಗುತ್ತಾರೆ.

ಸಮರ್ಪಕ ಬಳಕೆ: ಮಲ್ಟಿಮೀಡಿಯಾ ಬಳಕೆಯಿಂದ ವಿಸ್ತಾರವಾದ ಕ್ಷೇತ್ರಕ್ಕೆ ನಿಮ್ಮನ್ನು ನೀವು ತೆರೆದುಕೊಳ್ಳಬಹುದು. ಉದಾಹರಣೆಗೆ ವಿಡಿಯೊ ಗೇಮ್, ಮೊಬೈಲ್ ಆ್ಯಪ್, ಅನಿಮೇಟೆಡ್ ವಿಡಿಯೊದಂತಹ ಶೈಕ್ಷಣಿಕ ಮೂಲಗಳು, ಪವರ್ ಪಾಯಿಂಟ್ ಪ್ರೆಸೆಂಟೇಶನ್, ಕ್ವಿಜ್, ವಿಡಿಯೊ ಅಥವಾ ಡಾಕ್ಯುಮೆಂಟರಿ ಮೂಲಕ ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ, ವೆಬ್‌ಸೈಟ್ ಮತ್ತು ಆನ್‌ಲೈನ್ ಜಾಹೀರಾತುಗಳು.

ವೀಕ್ಷಕರಿಗೆ ದೃಶ್ಯ ಮತ್ತು ಶ್ರಾವ್ಯದ ಮೂಲಕ ವಿವಿಧ ಮಾಹಿತಿಗಳನ್ನು ನೀಡಿ ಅವರು ಅದರಲ್ಲೇ ತಲ್ಲೀನರಾಗಿರುವಂತೆ ಮಾಡುವ ಸಾಮರ್ಥ್ಯ ಮಲ್ಟಿಮೀಡಿಯಾಗೆ ಇದೆ. ಮಲ್ಟಿಮೀಡಿಯಾ ಬಳಕೆಯಿಂದ ವಿಷಯವನ್ನು ವೇಗವಾಗಿ ಅರ್ಥ ಮಾಡಿಕೊಳ್ಳಬಹುದು.

ಮಲ್ಟಿಮೀಡಿಯಾ ಹಿನ್ನೆಲೆ ಇರುವವರು ವಿಡಿಯೊ, ಇನ್ಫೋಗ್ರಾಫಿಕ್ಸ್, ಪಾಡ್‌ಕಾಸ್ಟ್, ವಿವಿಧ ವೇದಿಕೆಗಳಿಗೆ ಫ್ಲಾಷ್ ಬ್ಯಾನರ್ ಮೊದಲಾದ ವಿಷಯಗಳನ್ನು ಉತ್ತಮವಾಗಿ ರೂಪಿಸಬಹುದು. ಈ ವೇದಿಕೆಗಳು ವಿವಿಧ ಕಂಪನಿಗಳಿಗೆ ಸೇರಿದ ವೆಬ್‌ಸೈಟ್, ಅದರ ಸಾಮಾಜಿಕ ಮಾಧ್ಯಮ ಪ್ರೊಫೈಲ್‌ಗಳಾದ ಯೂಟ್ಯೂಬ್ ಚಾನೆಲ್, ಫೇಸ್‌ಬುಕ್ ಪೇಜ್, ಟ್ವಿಟರ್ ಖಾತೆಯನ್ನು ಒಳಗೊಂಡಿರುತ್ತವೆ. ನಿಗದಿತ ಗುರಿಯನ್ನು ತಲುಪಲು, ವೀಕ್ಷಕರು ಅಥವಾ ಓದುಗರ ಸಂಖ್ಯೆಯನ್ನು ಜಾಸ್ತಿ ಮಾಡಲು ವಿವಿಧ ಮಾಧ್ಯಮ ಸಂಸ್ಥೆಗಳಿಗೆ ಮಲ್ಟಿಮೀಡಿಯಾ ತಜ್ಞರು ನೆರವಿಗೆ ಬರುತ್ತಾರೆ.

ಅವಕಾಶಗಳು

ಮಲ್ಟಿಮೀಡಿಯಾ ಉದ್ಯಮಗಳಾದ ಸಿನಿಮಾ ತಯಾರಿಕೆ ಸಂಸ್ಥೆಗಳು, ವೆಬ್‌ಸೈಟ್‌ಗಳು, ಸುದ್ದಿ ಸಂಸ್ಥೆಗಳು, ಟಿವಿ ಚಾನೆಲ್‌ಗಳು, ಜಾಹೀರಾತು ಕಂಪನಿಗಳು, ಗೇಮಿಂಗ್ ಉದ್ಯಮ, ಟೆಲಿಕಾಂ ಉದ್ಯಮ ಮೊದಲಾದ ಕಡೆ ಮಲ್ಟಿಮೀಡಿಯಾ ತಜ್ಞರಿಗೆ ವಿಪುಲ ಅವಕಾಶಗಳಿವೆ. ಹಾಗೆಯೇ ಸಾಫ್ಟ್‌ವೇರ್ ಕಂಪನಿಗಳಲ್ಲೂ ಸಾಕಷ್ಟು ಉತ್ತಮ ಅವಕಾಶಗಳಿವೆ.

ಇವಲ್ಲದೇ ಶೈಕ್ಷಣಿಕ, ಮಾಹಿತಿ ತಂತ್ರಜ್ಞಾನ, ಆರೋಗ್ಯ ಕ್ಷೇತ್ರಗಳಲ್ಲಿ ಕೂಡ ಅವರ ಸೇವೆಗಳ ಬಗ್ಗೆ ಪ್ರಚಾರ ನೀಡಲು ಬಳಸಿಕೊಳ್ಳಲಾಗುತ್ತದೆ. ದೊಡ್ಡ ಕಂಪನಿಗಳ ರೀತಿಯಲ್ಲೇ ನವೋದ್ಯಮಗಳು ಕೂಡ ವೆಬ್‌ಸೈಟ್‌ಗಳ ಮೂಲಕ ಪ್ರಚಾರ ಪಡೆಯುತ್ತವೆ. ಈ ವೆಬ್‌ಸೈಟ್ ವಿನ್ಯಾಸ ಮತ್ತು ಅಭಿವೃದ್ಧಿಗೆ ಮಲ್ಟಿಮೀಡಿಯಾ ಕೌಶಲ ಅಗತ್ಯ.

ವಿವಿಧ ಬಗೆಯ ಮಾಧ್ಯಮಗಳ ಒಟ್ಟುಗೂಡುವಿಕೆಯಿಂದಾಗಿ ಹಾಗೂ ಜನರಲ್ಲಿ ಇದರ ಬಳಕೆ ಮತ್ತು ಹಂಚಿಕೆ ಹೆಚ್ಚಾಗಿರುವುದರಿಂದ ಮಲ್ಟಿಮೀಡಿಯಾ ಹೆಚ್ಚಿನ ಮಟ್ಟದಲ್ಲಿ ಬೆಳವಣಿಗೆ ಹೊಂದುವ ಎಲ್ಲಾ ಸಾಧ್ಯತೆಗಳಿವೆ. ಗೇಮಿಂಗ್ ತಂತ್ರಜ್ಞಾನ ಮತ್ತು ರಿಯಾಲಿಟಿ ಆ್ಯಪ್‌ಗಳಂತಹ ಕ್ಷೇತ್ರಗಳಲ್ಲಿ ಸಂಶೋಧನೆಗಳಿಂದಾಗಿ ವಿನ್ಯಾಸಕರು ತಮ್ಮ ಕೌಶಲವನ್ನು ಸುಧಾರಿಸಿಕೊಳ್ಳುವ ಅವಶ್ಯಕತೆಯೂ ಇದೆ. ಬಳಕೆದಾರರಿಗೆ ಹೊಸ ಬಗೆಯ ಅನುಭವ ನೀಡಲು ಇದು ಅಗತ್ಯ. ವೈದ್ಯಕೀಯ, ಔಷಧ ಮತ್ತು ರಕ್ಷಣಾ ಕ್ಷೇತ್ರಗಳು ಕೂಡ ತರಬೇತಿಯ ಅಂಗವಾಗಿ ಈಗ ವಿಷುವಲ್ ರಿಯಾಲಿಟಿಯತ್ತ ಮುಖ ಮಾಡಿವೆ. ಹೀಗಾಗಿ, ಅವಕಾಶಗಳು ಇನ್ನೂ ಜಾಸ್ತಿ ಆಗಲಿವೆ.

ಕೌಶಲಗಳು: ವಿವಿಧ ಬಗೆಯ ಸಾಫ್ಟ್‌ವೇರ್‌ಗಳ ಬಗ್ಗೆ ತಿಳಿವಳಿಕೆಯಲ್ಲದೇ ಸೃಜನಶೀಲತೆಯೂ ಈ ಕ್ಷೇತ್ರದಲ್ಲಿ ಅಗತ್ಯ. ಜೊತೆಗೆ ವಿನ್ಯಾಸದಲ್ಲಿ ಸೌಂದರ್ಯಪ್ರಜ್ಞೆ, ವರ್ಣಗಳ ಸಂಯೋಜನೆಯ ಅರಿವು, ಸಂವಹನ ಕೌಶಲ ಕೂಡ ಬೇಕಾಗುತ್ತದೆ.

ಕೋರ್ಸ್‌ಗಳು

ವಿಷುವಲ್ ಕಮ್ಯೂನಿಕೇಶನ್ ಅಥವಾ ಮಲ್ಟಿಮೀಡಿಯಾದಲ್ಲಿ ಮೂರು ವರ್ಷಗಳ ಪದವಿ ಕೋರ್ಸ್ ಮಾಡಿಕೊಂಡು ನೇರವಾಗಿ ಉದ್ಯೋಗಕ್ಕೆ ಸೇರಬಹುದು. ಹಾಗೆಯೇ ಎರಡು ವರ್ಷಗಳ ಸ್ನಾತಕೋತ್ತರ ಪದವಿ ಕೂಡ ಮಾಡಬಹುದು. ಅಲ್ಪಾವಧಿ ಡಿಪ್ಲೊಮಾ ಅಥವಾ ಸರ್ಟಿಫಿಕೇಟ್ ಕೋರ್ಸ್‌ಗಳು ಕೂಡಾ ಲಭ್ಯ. ಜೊತೆಗೆ ವಿವಿಧ ಟೂಲ್‌ಗಳು ಹಾಗೂ ತಂತ್ರಜ್ಞಾನದಲ್ಲಿ ಅನುಭವ ಪಡೆಯಲು ಕನಿಷ್ಠ ಒಂದು ವರ್ಷದ ತರಬೇತಿ ಕೂಡ ಅಗತ್ಯ.

ಉದ್ಯೋಗಕ್ಕೆ ಬೇಕು ಈ ನಾಲ್ಕು ಕೌಶಲಗಳು

ಪ್ರದೀಪ್ ವೆಂಕಟರಾಮ್

ಅಭ್ಯರ್ಥಿಗಳಿಗೆ ಸರಿಯಾದ ಉದ್ಯೋಗ ಸಿಗುವುದು ಎಷ್ಟು ಕಷ್ಟವೋ ಉದ್ಯೋಗದಾತರಿಗೆ ಕೌಶಲಯುಕ್ತ ಅಭ್ಯರ್ಥಿಗಳು ಸಿಗುವುದೂ ಸಹ ಅಷ್ಟೇ ಕಷ್ಟ! ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಕೌಶಲಾಭಿವೃದ್ಧಿಗೆ ಆದ್ಯತೆಯಿಲ್ಲದಿರುವುದೇ ಇದಕ್ಕೆ ಪ್ರಮುಖ ಕಾರಣ. ಅನುಷ್ಠಾನದ ಹಂತದಲ್ಲಿರುವ ನೂತನ ಶಿಕ್ಷಣ ನೀತಿಯಲ್ಲಿ ಈ ಸಮಸ್ಯೆಗೆ ಪರಿಹಾರವಿದೆಯಾದರೂ ವಿದ್ಯಾರ್ಥಿಗಳ ಕೌಶಲಾಭಿವೃದ್ಧಿಯಾಗಿ ಸರಾಗವಾಗಿ ಉದ್ಯೋಗಗಳು ಸಿಗುವುದಕ್ಕೆ ಇನ್ನೂ ಒಂದಷ್ಟು ವರ್ಷಗಳು ಬೇಕಾಗುತ್ತದೆ.

ಕೌಶಲವೆಂದರೆ, ಅಪೇಕ್ಷಿತ ಅಥವಾ ಪೂರ್ವನಿರ್ಧಾರಿತ ಮಾನದಂಡದಂತೆ ಕೆಲಸಕಾರ್ಯಗಳಲ್ಲಿ ಪರಿಣಾಮಗಳನ್ನು ಮೂಡಿಸುವಂತಹ ಸಾಮರ್ಥ್ಯ. ಆದ್ದರಿಂದ ವಿದ್ಯಾಭ್ಯಾಸದ ಮುಕ್ತಾಯ ಹಂತದಲ್ಲಿರುವ ವಿದ್ಯಾರ್ಥಿಗಳೂ ಮತ್ತು ಉದ್ಯೋಗವನ್ನು ಅರಸುತ್ತಿರುವವರೂ ಈ ನಾಲ್ಕು ಸಾಮಾನ್ಯ ಕೌಶಲಗಳನ್ನು ಕಲಿತರೆ ಉದ್ಯೋಗಗಳು ಸಿಗುವ ಸಾಧ್ಯತೆಗಳು ಹೆಚ್ಚಾಗುತ್ತದೆ.

1. ಯೋಜನೆ ಮತ್ತು ಸಮಯದ ನಿರ್ವಹಣೆ: ಯೋಜನೆಯೆಂದರೆ ಅಪೇಕ್ಷಿತ ಗುರಿಗಳನ್ನು ಸಾಧಿಸಲು ಅಗತ್ಯವಿರುವ ಚಟುವಟಿಕೆಗಳ ಬಗ್ಗೆ ಸಮಗ್ರವಾಗಿ ಯೋಚಿಸುವ ಪ್ರಕ್ರಿಯೆ. ಈ ಜವಾಬ್ದಾರಿಯನ್ನು ನಿರ್ವಹಿಸಲು ಪರಿಕಲ್ಪನಾ ಸಾಮರ್ಥ್ಯದ ಜೊತೆಗೆ ಸಮಯದ ನಿರ್ವಹಣೆಯ ಕೌಶಲ ಅಗತ್ಯ.

2. ಸಂವಹನ ಕೌಶಲಗಳು: ಸಕ್ರಿಯವಾಗಿ ಆಲಿಸುವುದು, ಪರಿಣಾಮಕಾರಿಯಾಗಿ ಮಾತನಾಡುವುದು, ಬರೆಯುವುದು, ಪ್ರಸ್ತುತಪಡಿಸುವುದು ಹಾಗೂ ಮುಗುಳ್ನಗೆಯುಕ್ತ ದೇಹಭಾಷೆ, ಈ ಕೌಶಲಗಳೆಲ್ಲವೂ ಉದ್ಯೋಗ ಗಳಿಸಲು ಮತ್ತು ಅದನ್ನು ಯಶಸ್ವಿಯಾಗಿ ನಿರ್ವಹಿಸಲು ಅತ್ಯಗತ್ಯ.

3. ಅಂತರ್-ವೈಯಕ್ತಿಕ ನೈಪುಣ್ಯತೆ: ಅನುಭೂತಿ ಮತ್ತು ತಾಳ್ಮೆಗಳಂತಹ ಮನೋಭಾವದ ಜೊತೆಗೆ, ಪ್ರತಿಯೊಬ್ಬರನ್ನು ಅನನ್ಯ ವ್ಯಕ್ತಿಯಂತೆ ಗುರುತಿಸಿ, ವಿನಾಕಾರಣ ಇತರರನ್ನು ಟೀಕಿಸದೆ, ಎಲ್ಲರ ಮನಸ್ಥಿತಿಯನ್ನು ಅರ್ಥಮಾಡಿಕೊಂಡು, ವಾದವಿವಾದಗಳಿಲ್ಲದೆ ಸುಲಲಿತವಾಗಿ ಕೆಲಸಕಾರ್ಯಗಳನ್ನು ನಿರ್ವಹಿಸುವುದೇ ಅಂತರ್-ವೈಯಕ್ತಿಕ ನೈಪುಣ್ಯತೆ. ಈ ಕೌಶಲವನ್ನು ಎಲ್ಲಾ ಉದ್ಯೋಗಿಗಳಿಂದ ನಿರೀಕ್ಷಿಸಲಾಗುತ್ತದೆ.

4. ನಾಯಕತ್ವದ ಕೌಶಲ: ಉಪಕ್ರಮ ಶಕ್ತಿ, ಉತ್ಸಾಹ, ಹೊಣೆಗಾರಿಕೆ, ಮುಂದಾಲೋಚನೆ, ಕಾರ್ಯತತ್ಪರತೆ, ಸ್ವಯಂಶಿಸ್ತು, ತಮ್ಮನ್ನು ಮತ್ತು ಇತರರನ್ನು ಪ್ರೇರೇಪಿಸುವ ಪರಿ, ವಿಶ್ವಾಸಾರ್ಹತೆ, ಪ್ರಾಮಾಣಿಕತೆ, ಬದ್ಧತೆ ಇವೆಲ್ಲವನ್ನು ಮೈಗೂಡಿಸಿಕೊಂಡರೆ ಉದ್ಯೋಗ ಸಿಗುವುದಲ್ಲದೆ, ನಾಯಕತ್ವದ ಸ್ಥಾನಮಾನಕ್ಕೆ ಮುಂದೆ ಅರ್ಹರಾಗಬಲ್ಲರು.

ವೈಯಕ್ತಿಕ ಸಂದರ್ಶನಗಳಲ್ಲಿ ಈ ಪ್ರಮುಖ ಕೌಶಲಗಳಿವೆಯೇ ಎನ್ನುವುದನ್ನು ಪರಿಶೀಲಿಸುವುದು ಸಂದರ್ಶನಕಾರರ ಜವಾಬ್ದಾರಿ. ಹಾಗಾಗಿ, ಉದ್ಯಮದ ಸನ್ನಿವೇಶಗಳನ್ನು ಸೃಷ್ಟಿಸಿ, ಪ್ರಶ್ನೆಗಳನ್ನು ಕೇಳುತ್ತಾ, ಅಭ್ಯರ್ಥಿಗಳ ವ್ಯಕ್ತಿತ್ವದ ಪರಿಪೂರ್ಣತೆ ಮತ್ತು ಕೊರತೆಗಳನ್ನು ಅಂದಾಜು ಮಾಡುತ್ತಾರೆ. ಪ್ರಾಮಾಣಿಕತೆ, ಸ್ವಯಂಶಿಸ್ತು, ಕಾರ್ಯತತ್ಪರತೆಗಳಂತಹ ಪ್ರಾಥಮಿಕ ಕೌಶಲಗಳಿಲ್ಲದಿದ್ದಲ್ಲಿ, ಅಭ್ಯರ್ಥಿಗಳು ಆಯ್ಕೆಯಾಗುವುದಿಲ್ಲ; ಏಕೆಂದರೆ, ಇಂತಹ ಪ್ರಾಥಮಿಕ ಕೌಶಲಗಳ ಕೊರತೆಗಳನ್ನು ಹೋಗಲಾಡಿಸುವುದು ಅಸಾಧ್ಯವೆನ್ನುವುದು ಮಾನವ ಸಂಪನ್ಮೂಲ ಅಧಿಕಾರಿಗಳ ಅಭಿಪ್ರಾಯ.

ಹಾಗಾಗಿ, ಉದ್ಯೋಗವನ್ನು ಬಯಸುವ ಅಭ್ಯರ್ಥಿಗಳು ಮತ್ತು ವೃತ್ತಿಜೀವನದಲ್ಲಿ ಯಶಸ್ಸಿನ ಅನ್ವೇಷಣೆಯಲ್ಲಿರುವ ಉದ್ಯೋಗಿಗಳು, ತಮ್ಮ ಶಕ್ತಿ, ಸಾಮರ್ಥ್ಯ, ಕುಂದು ಕೊರತೆಗಳನ್ನರಿತು, ಪ್ರಾಮಾಣಿಕ ಪ್ರಯತ್ನಗಳಿಂದ ಈ ಕೌಶಲಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಳ್ಳಬೇಕು. ಈ ಕೌಶಲಗಳ ಜೊತೆ ವೃತ್ತಿ ಸಂಬಂಧಿತ ಕೌಶಲಗಳಿರಬೇಕು (ಉದಾಹರಣೆ: ಸೇವಾ ಮನೋಭಾವ, ಜ್ಞಾಪಕ ಶಕ್ತಿ, ವ್ಯಾಪಾರೋದ್ಯಮ ಕೌಶಲ, ತಾಂತ್ರಿಕ ಕೌಶಲ, ವಿಶ್ಲೇಷಣಾತ್ಮಕ ಕೌಶಲ, ಆರ್ಥಿಕ ನಿರ್ವಹಣೆ, ಕಾನೂನು ಅರಿವು ಇತ್ಯಾದಿ ವೃತ್ತಿಗೆ ಸಂಬಂಧಿಸಿದಂತೆ). ಆಗಲೇ, ಅಭ್ಯರ್ಥಿಗಳ ವ್ಯಕ್ತಿತ್ವ ಉದ್ಯೋಗದ ಅವಶ್ಯಕತೆಗೆ ಹೊಂದಾಣಿಕೆಯಾಗಬಲ್ಲದು.

ವ್ಯಕ್ತಿತ್ವ ಮತ್ತು ವೃತ್ತಿಗೆ ಸಂಬಂಧಿಸಿದ ಕೌಶಲಗಳನ್ನು ಕಲಿಯಲು ಇಂದು ಭಿನ್ನವಾದ ಮತ್ತು ವಿಸ್ತಾರವಾದ ಅವಕಾಶಗಳಿವೆ. ವ್ಯಕ್ತಿತ್ವ ವೃದ್ಧಿಸುವ ಕೇಂದ್ರಗಳು, ಕೌಶಲ ತರಬೇತಿ ಕೇಂದ್ರಗಳು, ಕೌಶಲ ಆಯೋಗಗಳು, ಆನ್‌ಲೈನ್ ತರಗತಿಗಳು, ಕ್ರಮಶಿಕ್ಷಣಗಳು, ಅರ್ಹತಾ ಪರೀಕ್ಷಣಾ ಕೇಂದ್ರಗಳು, ಸಾಧಕರ ಯಶಸ್ಸಿನ ಕಥೆಗಳು, ವಿಡಿಯೊಗಳು, ಪುಸ್ತಕಗಳು ಇತ್ಯಾದಿಗಳನ್ನು ಉಪಯೋಗಿಸಿಕೊಂಡು ವ್ಯಕ್ತಿತ್ವದ ಪರಿಪೂರ್ಣತೆಯನ್ನು ಗಳಿಸಿ, ವೃತ್ತಿ ಜೀವನವನ್ನು ಯಶಸ್ವಿಯಾಗಿ ರೂಪಿಸಿಕೊಳ್ಳಬಹುದು.

ಹಾಗಾಗಿ, ನೀವು ಕಲಿತ ವಿದ್ಯೆಗೂ, ನಿಮ್ಮ ವ್ಯಕ್ತಿತ್ವಕ್ಕೂ ಹೊಂದುವಂತಹ, ನಿಮ್ಮ ಅಭಿರುಚಿಗೆ ಅನುಗುಣವಾದ ವೃತ್ತಿಯನ್ನು ಆರಿಸಿ. ಮುಖ್ಯವಾಗಿ ವೃತ್ತಿ ಜೀವನದಲ್ಲಿ ಯಶಸ್ವಿಯಾಗಬೇಕೆನ್ನುವ ಹಂಬಲದ ಜೊತೆಗೆ ಅದನ್ನು ಸಾಧಿಸಲು ಪರಿಶ್ರಮಪಡಬೇಕು.

(ಲೇಖಕ: ಮ್ಯಾನೇಜ್‌ಮೆಂಟ್ ಮತ್ತು ವೃತ್ತಿ ಸಲಹಾಗಾರರು)

ವಿದ್ಯಾರ್ಥಿ ವೇತನ ಕೈಪಿಡಿ

ಪಿಯಾಗ್ಗೊ 'ಶಿಕ್ಷಾಸೇ ಸಮೃದ್ಧಿ' 2020–21

ವಿವರ: 10 ಅಥವಾ 12ನೇ ತರಗತಿ ಮುಗಿಸಿದ ವಿದ್ಯಾರ್ಥಿಗಳು, ವಾರ್ಡ್ಸ್ ಆಫ್ ಡ್ರೈವರ್ಸ್ ಅಥವಾ ಮೂರು ಚಕ್ರದ ವಾಹನದ ಮಾಲೀಕರಿಂದ ಪಿಯಾಗ್ಗೊ ವೆಹಿಕಲ್ಸ್ ಪ್ರೈವೇಟ್ ಲಿ. ಅರ್ಜಿಯನ್ನು ಆಹ್ವಾನಿಸಿದೆ.

ಅರ್ಹತೆ: 10 ಅಥವಾ 12ನೇ ತರಗತಿಯನ್ನು ಶೇ 55ರಷ್ಟು, 11 ಅಥವಾ 12ನೇ ತರಗತಿಯಲ್ಲಿ ಶೇ 60ರಷ್ಟು ಅಂಕದೊಂದಿಗೆ ಪಾಸು ಮಾಡಿರಬೇಕು. ಕುಟುಂಬದ ವಾರ್ಷಿಕ ಆದಾಯವು 3 ಲಕ್ಷಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ಒಟ್ಟು ಶುಲ್ಕದ ಶೇ 80ರಷ್ಟು ಮರುಸಂದಾಯ ಅಥವಾ ವರ್ಷಕ್ಕೆ ₹ 20 ಸಾವಿರ

ಕೊನೆಯ ದಿನಾಂಕ: 31 ಮಾರ್ಚ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿ ಸಲ್ಲಿಕೆ

ಹೆಚ್ಚಿನ ಮಾಹಿತಿಗೆ: www.b4s.in/praja/PSD1

ಐಐಟಿ ದೆಹಲಿ ಎಸ್‌ಐಆರ್‌ಇ ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್ 2021

ವಿವರ: ಮೆಕ್ಯಾನಿಕಲ್ ಅಥವಾ ಕಂಪ್ಯೂಟರ್ ಸೈನ್ಸ್, ಎಂಜಿನಿಯರಿಂಗ್ ಅಥವಾ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಅಥವಾ ಇದರ ಸಮಾನಾಂತರ ಕೋರ್ಸ್‌ಗಳಲ್ಲಿ ಪಿಎಚ್‌ಡಿ ಮಾಡಿರುವವರಿಂದ ದೆಹಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ಭಾರತೀಯ ಪೌರರು ಮತ್ತು ಸಾಗರೋತ್ತರ ಭಾರತದ ನಾಗರಿಕರು ಅರ್ಜಿ ಸಲ್ಲಿಸಬಹುದಾಗಿದೆ. 32 ವರ್ಷ ಮೇಲ್ಪಟ್ಟ ಪುರುಷ ಹಾಗೂ 35 ವರ್ಷ ಮೇಲ್ಪಟ್ಟ ಮಹಿಳೆ ಅರ್ಜಿ ಸಲ್ಲಿಸಬಹುದಾಗಿದೆ.

ಆರ್ಥಿಕ ಸಹಾಯ: ಪ್ರತಿ ತಿಂಗಳು ₹ 60 ಸಾವಿರ ಮತ್ತು ಇತರೆ ಭತ್ಯೆಗಳು, **ಕೊನೇ ದಿನಾಂಕ:** 2 ಏಪ್ರಿಲ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿ ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/IIP6

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ತ್ರಿಕೋನಮಿತಿಯ ಪ್ರಸ್ತಾವನೆ

(ಮುಂದುವರಿದ ಭಾಗ)

ಗಣಿತ

ಎಸ್ಸೆಸ್ಸೆಲ್ಸಿ

ಉದಾಹರಣೆ: tanA = 4/3 ಆದರೆ ಕೋನ ಗೆ ಸಂಬಂಧಿಸಿದಂತೆ ಉಳಿದ ತ್ರಿಕೋನ ಮಿತಿ ಅನುಪಾತಗಳನ್ನು ಕಂಡುಹಿಡಿಯಿರಿ.



ಪರಿಹಾರ: $tonA = \frac{BC}{AB} = \frac{4}{3}$

ಎಂದು ತಿಳಿದಿದೆ.

BC = 4K ಆದರೆ AB = 3K ಮತ್ತು K ಒಂದು ಧನ ಸಂಖ್ಯೆ ಈಗ ಪೈಥಾಗೊರಸ್ ಪ್ರಮೇಯದಿಂದ

$$AC^2 = AB^2 + BC^2$$
$$AC^2 = (4K)^2 + (3K)^2$$
$$AC^2 = 25\,K^2$$
$$AC = 5K$$

ತ್ರಿಕೋನ ಮಿತಿಯ ಎಲ್ಲಾ ಅನುಪಾತಗಳನ್ನು ಅವುಗಳ ವ್ಯಾಖ್ಯಾನದಿಂದ ಬರೆಯಬಹುದು.

$Sin\ A = \frac{BC}{AC} = \frac{4K}{5K} = \frac{4}{5}$

$COSA = \frac{AB}{AC} = \frac{3K}{5K} = \frac{3}{5}$

$Cot\ A = \frac{1}{ton\ A} = \frac{3}{4}$

$Cosee\ A = \frac{1}{SIna\ A} = \frac{5}{4}$

$See\ A \frac{1}{COSA} = \frac{5}{3}$

ಉದಾಹರಣೆ: $\lfloor B$ ಮತ್ತು $\lfloor Q$ ಲಘುಕೋನಗಳಾಗಿದ್ದು

Sin B = Sin Q ಆಗಿದೆ

ಹಾಗಾದರೆ $\lfloor B = \lfloor Q$ ಎಂದು ಸಾಧಿಸಿ

ಪರಿಹಾರ: ΔABC ಮತ್ತು ΔPQR ಗಳನ್ನು ಇಲ್ಲಿ ಗಮನಿಸಿದ್ದರೆ $Sin\ B = Sin\ Q$ ಆಗಿರಲಿ



$Sin\ B = \frac{AC}{BC}$, $Sin\ Q = \frac{PR}{PQ}$ ಎಂದು ತಿಳಿದಿದೆ.

ಆಗ $\frac{AC}{BC} = \frac{PR}{PQ}$

$\frac{AC}{PR} = \frac{AB}{PQ} = K$ ಆಗಿರಲಿ

ಈಗ ಪೈಥಾಗೊರಸ್ ಪ್ರಮೇಯದಿಂದ

$BC = \sqrt{AB^2 - AC^2}$ ಮತ್ತು $QR = \sqrt{PQ^2 - PR^2}$

ಆದ್ದರಿಂದ

$$\frac{BC}{QR} = \frac{\sqrt{AB^2 - AC^2}}{\sqrt{PQ^2 - PR^2}} = \frac{\sqrt{K^2PQ^2 - K^2PR^2}}{\sqrt{PQ^2 - PR^2}} = \frac{K\sqrt{PQ^2 - PR^2}}{\sqrt{PQ^2 - PR^2}} = K$$

ಆದ್ದರಿಂದ $\frac{AC}{PR} = \frac{AB}{PQ} = \frac{BC}{QR}$

ಆಗ $\Delta ACB, \Delta PQR$ ಮತ್ತು $\lfloor B = \lfloor Q$

ಪ್ರಜಾವಾಣಿ ನೋಡಿಯೊ: ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ 'ಪೇರ್ ಆಫ್ ಲೀನಿಯರ್ ಇಕ್ವೇಷನ್ಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/3w9eOk0

ನಿರ್ಧಾರಕಗಳು ಮತ್ತು ಕೋಶಗಳ ಅನ್ವಯಕಗಳು

ದ್ವಿತೀಯ ಪಿಯುಸಿ

ಗಣಿತ

ಕೋಶಗಳು ಮತ್ತು ನಿರ್ಧಾರಕಗಳನ್ನು ಬಳಸಿಕೊಂಡು ಎರಡು ಅಥವಾ ಮೂರು ಚರ ಸಂಖ್ಯೆಗಳನ್ನು ಒಳಗೊಂಡ ಏಕ ರೇಖಾತ್ಮಕ ಸಮೀಕರಣಗಳನ್ನು ಪರೀಕ್ಷಿಸುವ ಮತ್ತು ಅವುಗಳ ಸ್ಥಿರತೆ ಮತ್ತು ಅಸ್ಥಿರತೆಯನ್ನು ತಿಳಿಯಬಹುದು.

ಸಮೀಕರಣಗಳಿಗೆ ಒಂದು ಅಥವಾ ಹೆಚ್ಚಿನ ಪರಿಹಾರಗಳಿದ್ದಲ್ಲಿ ಅವುಗಳನ್ನು ಸ್ಥಿರತೆ ಹೊಂದಿರುವ ಸಮೀಕರಣಗಳೆನ್ನುತ್ತೇವೆ. ಸಮೀಕರಣಗಳಿಗೆ ಪರಿಹಾರಗಳು ಇಲ್ಲದಿದ್ದಲ್ಲಿ ಅವುಗಳನ್ನು ಸ್ಥಿರತೆ ಇರುವ ಸಮೀಕರಣಗಳೆನ್ನುತ್ತೇವೆ.

ಪ್ರತಿಲೋಮ ಕೋಶದ ವಿಧಾನದಿಂದ ಸರಳ ಸಮೀಕರಣಗಳನ್ನು ಬಿಡಿಸುವುದು.

ಸರಳ ರೇಖಾತ್ಮಕ ಸಮೀಕರಣಗಳನ್ನು ಕೋಶಗಳ ಸಮೀಕರಣಗಳಲ್ಲಿ ವ್ಯಕ್ತಪಡಿಸಿ ಅವುಗಳನ್ನು ಬಿಡಿಸಲು ಕೋಶದ ಪ್ರತಿಲೋಮವನ್ನು ಉಪಯೋಗಿಸುತ್ತೇವೆ. ಸಮೀಕರಣಗಳು

$$a_1x + b_1y + c_1z = d_1$$
$$a_2x + b_2y + c_2z = d_2$$
$$a_3x + b_3y + c_3z = d_3$$

$$A = \begin{bmatrix} a_1 & b_1 & c_1 \\ a_2 & b_2 & c_2 \\ a_3 & b_3 & c_3 \end{bmatrix},$$

$x = \begin{bmatrix} x \\ y \\ z \end{bmatrix}$ ಮತ್ತು $B = \begin{bmatrix} d_1 \\ d_2 \\ d_3 \end{bmatrix}$

ಒಟ್ಟಾರೆ $AX = B$

$$\begin{bmatrix} a_1 & b_1 & c_1 \\ a_2 & b_2 & c_2 \\ a_3 & b_3 & c_3 \end{bmatrix} \begin{bmatrix} x \\ y \\ z \end{bmatrix} = \begin{bmatrix} d_1 \\ d_2 \\ d_3 \end{bmatrix}$$

A ಒಂದು ವೈಶೇಷಿತ ಕೋಶವಾದಾಗ A-1 ಇರುತ್ತದೆ.

$$AX = B$$
$$A^{-1}(AX) = A^{-1}B$$
$$(A^{-1}A)X = A^{-1}B$$
$$X = A^{-1}B$$

ಈ ವಿಧಾನದಿಂದ x,y,z ಗಳಿಗೆ ಪರಿಹಾರಗಳನ್ನು ಕಂಡುಹಿಡಿಯುತ್ತೇವೆ. ಈ ವಿಧಾನದಲ್ಲಿ A^{-1} ಬಳಸಿಕೊಳ್ಳುತ್ತೇವೆ. ಈ ವಿಧಾನವನ್ನು ಕೋಶ ಪದ್ಧತಿ ಎನ್ನುತ್ತೇವೆ.

A ಒಂದು ವೈಶೇಷಿತ ಕೋಶವಾಗಿದ್ದರೆ ಇಲ್ಲಿ $|A| = 0$ ಇಲ್ಲಿ (adjA)B ಇಲ್ಲಿ ಯನ್ನು ಕಂಡು ಹಿಡಿಯುತ್ತೇವೆ.

ಒಂದು ವೇಳೆ $(adjA)B \neq 0$ (0 ಶೂನ್ಯಕೋಶ)ವಾದಲ್ಲಿ ಸಮೀಕರಣಗಳಿಗೆ ಪರಿಹಾರ ದೊರೆಯುವುದಿಲ್ಲ. ಆಗ ಈ ಸಮೀಕರಣಗಳನ್ನು ಅಸ್ಥಿರತೆಯಿರುವ ಸಮೀಕರಣಗಳು ಎನ್ನುತ್ತೇವೆ.

ಒಂದು ವೇಳೆ $(adjA)B \neq 0$

ಆದಾಗ ಸಮೀಕರಣಗಳು ಸ್ಥಿರತೆ ಅಥವಾ ಅಸ್ಥಿರತೆ ಹೊಂದಿರುವ ಸಮೀಕರಣಗಳಾಗಿದ್ದು ಅಲ್ಲಿ ಉತ್ತರಗಳಿರಬಹುದು ಅಥವಾ ಪರಿಹಾರಗಳಲ್ಲದಿರಬಹುದು.

$$3x - 2y + 3z = 8$$
$$2x + y - z = 1$$
$$4x - 3y + 2z = 4$$

ಪರಿಹಾರ: ಮೇಲಿನ ಸಮೀಕರಣಗಳನ್ನು AX = B ಎಂದು ಬರೆದಾಗ

$$A = \begin{bmatrix} 3 & -2 & 3 \\ 2 & 1 & -1 \\ 4 & -3 & 2 \end{bmatrix}, X = \begin{bmatrix} X \\ Y \\ Z \end{bmatrix}$$

ಮತ್ತು $B = \begin{bmatrix} 8 \\ 1 \\ 4 \end{bmatrix}$ ಆಗುವುದು

$$[A] = 3(2-3) + 2$$
$$(4+4) + 3(-6-4)$$
$$= -17 \neq 0$$

A ಅದು ಅವೈಶೇಷಿತ ಕೋಶವಾಗಿದೆ ಹಾಗಾಗಿ ಅದರ ವಿಲೋಮವನ್ನು ಕಂಡು ಹಿಡಿಯಬಹುದು.

$A11 = -1 \quad A12 = -8 \quad A13 = -10$

$A21 = -5 \quad A22 = -6 \quad A23 = 1$

$A31 = -1 \quad A32 = 9 \quad A33 = 7$

$$A^{-1} = \frac{-1}{17}\begin{bmatrix} -1 & -5 & -1 \\ -8 & -6 & 9 \\ -10 & 1 & 7 \end{bmatrix}$$

$$X = A^{-1}B = \frac{-1}{17}\begin{bmatrix} -1 & -5 & -1 \\ -8 & -6 & 9 \\ -10 & 1 & 7 \end{bmatrix}\begin{bmatrix} 8 \\ 1 \\ 4 \end{bmatrix}$$

$$\begin{bmatrix} x \\ y \\ z \end{bmatrix} = \frac{-1}{17}\begin{bmatrix} -17 \\ -34 \\ -51 \end{bmatrix} = \begin{bmatrix} 1 \\ 2 \\ 3 \end{bmatrix}$$

ಆದ್ದರಿಂದ x = 1, y = 2 ಮತ್ತು z = 3

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ: ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಡ್ಯುಯೆಲ್ ನೇಚರ್ ಆಫ್ ರೇಡಿಯೇಷನ್ ಆ್ಯಂಡ್ ಮ್ಯಾಟರ್' ಇಂಗ್ಲಿಷ್ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/3szv386

ಕಾವೇರಿ ನೀರಿಗೆ ಸಂಬಂಧಿಸಿ ಕರ್ನಾಟಕ ಮತ್ತು ತಮಿಳುನಾಡು ನಡುವೆ ಮತ್ತೆ ವಿವಾದ ಸೃಷ್ಟಿಯಾಗುವ ಸಾಧ್ಯತೆ ದಟ್ಟವಾಗಿದೆ. ಕೇಂದ್ರ ಸರ್ಕಾರದ ಸಹಭಾಗಿತ್ವದ ಕಾವೇರಿ–ವೈಗೈ–ಗುಂಡಾರ್ ನದಿ ಜೋಡಣೆ ಯೋಜನೆಗೆ ತಮಿಳುನಾಡು ಚಾಲನೆ ಕೊಟ್ಟಿದೆ. ಕರ್ನಾಟಕದ ಮೇಕೆದಾಟು ಯೋಜನೆಗೆ ಆ ರಾಜ್ಯದ ಆಕ್ಷೇಪವಿದೆ. ಕಾವೇರಿ ನದಿಯ ಹೆಚ್ಚುವರಿ ನೀರಿಗಾಗಿ ಈ ಯೋಜನೆಗಳನ್ನು ಎಂದು ಎರಡೂ ರಾಜ್ಯಗಳು ಪ್ರತಿಪಾದಿಸುತ್ತಿವೆ. ಕಾವೇರಿಯಲ್ಲಿ ಹೆಚ್ಚುವರಿ ನೀರು ನಿಜಕ್ಕೂ ಇದೆಯೇ ಎಂಬುದರ ವಿಶ್ಲೇಷಣೆ ಇಲ್ಲಿದೆ

ಕಾವೇರಿ: ಎಲ್ಲಿದೆ ಹೆಚ್ಚುವರಿ ನೀರು?

ನೀರಿನ ಇಳುವರಿ ಬೇಕು ಮರು ಅಂದಾಜು

• ಡಾ.ಜಿ.ಎಸ್.ಶ್ರೀನಿವಾಸ ರೆಡ್ಡಿ

ಕರ್ನಾಟಕದ ಮೇಕೆದಾಟು ಮತ್ತು ತಮಿಳುನಾಡಿನ ಕಾವೇರಿ–ವೈಗೈ–ಗುಂಡಾರ್ ನದಿ ಜೋಡಣೆ ಯೋಜನೆಯು ಎರಡೂ ರಾಜ್ಯಗಳ ಮಧ್ಯೆ ಮತ್ತೊಮ್ಮೆ ವಿರಸಕ್ಕೆ ಕಾರಣವಾಗಿದೆ. ಎರಡೂ ರಾಜ್ಯಗಳು ತಮ್ಮ ಯೋಜನೆಗಳನ್ನು ಪುಷ್ಟೀಕರಿಸುತ್ತಾ ಮತ್ತೊಂದು ರಾಜ್ಯದ ಯೋಜನೆಯನ್ನು ಟೀಕಿಸುತ್ತಿವೆ. ಕಾವೇರಿ ಕಣಿವೆಯ ನಾಲ್ಕು ರಾಜ್ಯಗಳ ಮಧ್ಯೆ ನೀರು ಹಂಚಿಕೆಯಾದ ಬಳಿಕ ಹೆಚ್ಚುವರಿ ನೀರನ್ನು ಬಳಸಿ ಹೊಸ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ವಾದಿಸಲಾಗುತ್ತಿದೆ. ಆದರೆ, ಕಾವೇರಿಯಲ್ಲಿ ಹೆಚ್ಚುವರಿ ನೀರು ಲಭ್ಯವಿದೆಯೇ? ಇದ್ದರೆ ಎಷ್ಟು? ಅದರಿಂದ ಎರಡೂ ರಾಜ್ಯಗಳು ಯಾವೆಲ್ಲ ಯೋಜನೆ ಕೈಗೆತ್ತಿಕೊಳ್ಳಬೇಕು ಎಂಬುದರ ಕುರಿತು ವಾಸ್ತವಿಕ ನೆಲೆಗಟ್ಟಿನಲ್ಲಿ ಚಿಂತನೆ ನಡೆದಿದೆಯೇ? ಖಂಡಿತಾ ಇಲ್ಲ!

ಕಾವೇರಿ ಮತ್ತು ಅದರ ಉಪನದಿಗಳಲ್ಲಿ ನೀರಿನ ಇಳುವರಿ ಪ್ರಮಾಣವನ್ನು ಅಂದಾಜು ಮಾಡಿದ್ದು 1972ರಲ್ಲಿ. ಆ ಬಳಿಕ ಮಳೆಯ ವಿಧಾನದಲ್ಲಿ (ರೈನ್ ಪ್ಯಾಟರ್ನ್) ಆಗಿರುವ ಬದಲಾವಣೆ, ಅಚ್ಚುಕಟ್ಟು ಪ್ರದೇಶ ಸೇರಿ ಕಾವೇರಿ ಕಣಿವೆ ಪ್ರದೇಶದಲ್ಲಿನ ಭೂಬಳಕೆ ಮತ್ತು ನೀರಿನ ಇಳುವರಿ ಬಗ್ಗೆ ಸಮೀಕ್ಷೆ, ಅಧ್ಯಯನ ನಡೆದಿಲ್ಲ. ಹೀಗಾಗಿ ಮೊದಲಿಗೆ ಮರುಅಂದಾಜು ನಡೆಸಬೇಕು. ಆ ಬಳಿಕವೇ ಹೊಸ ಯೋಜನೆಗಳ ಬಗ್ಗೆ ಆಲೋಚಿಸುವುದು ಸೂಕ್ತ.

ನಾಲ್ಕು ರಾಜ್ಯಗಳಲ್ಲಿ ಬರುವ ಕಾವೇರಿ ಜಲಾನಯನ ಪ್ರದೇಶವು ಒಟ್ಟು 81,155 ಚ.ಕಿ.ಮೀ ವ್ಯಾಪ್ತಿ ಹೊಂದಿದ್ದು, 1972ರ ಅಂದಾಜಿನ ಪ್ರಕಾರ 740 ಟಿಎಂಸಿ ಅಡಿಗಳಷ್ಟು ನೀರು ಲಭ್ಯವಿದೆ. ಇದನ್ನು ಆಧರಿಸಿಯೇ ನಾಲ್ಕು ರಾಜ್ಯಗಳಿಗೆ ನೀರನ್ನು ಹಂಚಿಕೆ ಮಾಡಲಾಯಿತು. ಸುಮಾರು 83 ಟಿಎಂಸಿ ಅಡಿಗಳಷ್ಟು ನೀರು ಹೆಚ್ಚುವರಿ ಲಭ್ಯವಿದ್ದು, ಇವುಗಳ ಬಳಕೆಗೆ ಎರಡೂ ರಾಜ್ಯಗಳು ಯೋಜನೆಗಳನ್ನು ತಯಾರಿಸಿ ಅನುಷ್ಠಾನಗೊಳಿಸಲು ಪೈಪೋಟಿಯಲ್ಲಿವೆ. 10 ವರ್ಷಗಳಲ್ಲಿ 2 ಅಥವಾ 3 ವರ್ಷ ಮಾತ್ರ ಅಧಿಕ ನೀರಿನ ಹರಿವು ಇರುತ್ತದೆ. ಅದರ ಆಧಾರದಲ್ಲಿ ಬೃಹತ್ ಯೋಜನೆಗಳ ಅಗತ್ಯವಿದೆಯೇ?

ಹೆಚ್ಚುವರಿ ನೀರಿನ ಬಳಕೆಯಿಂದ ಕರ್ನಾಟಕ ಮತ್ತು ತಮಿಳುನಾಡಿಗೆ ಆಗುವ ಪ್ರಯೋಜನ ಅಥವಾ ದುಷ್ಪರಿಣಾಮಕ್ಕಿಂತ ಎರಡೂ ರಾಜ್ಯಗಳು ಬಳಸಲು ಬಯಸಿರುವ ಆ ಹೆಚ್ಚುವರಿ ಪ್ರಮಾಣದ ನೀರು ಲಭ್ಯವಿದೆಯೇ? ಇದ್ದರೆ ಎಷ್ಟು ವರ್ಷಗಳಿಗೊಮ್ಮೆ ಲಭ್ಯವಾಗಬಹುದು ಎಂಬುದು ಅತಿಮುಖ್ಯವಾದ ಪ್ರಶ್ನೆ. ಯಾವುದೇ ಜಲಾನಯನ ಪ್ರದೇಶದಲ್ಲಿ ಲಭ್ಯವಾಗುವ ನೀರಿನ ಪ್ರಮಾಣವು ಮುಖ್ಯವಾಗಿ ಎರಡು ಅಂಶಗಳನ್ನು ಅವಲಂಬಿಸಿದೆ. ಅವುಗಳೆಂದರೆ; ಮೊದಲನೆಯದು ಮಳೆ ಪ್ರಮಾಣ ಮತ್ತು ಅಲ್ಲಿನ ಭೂ ಬಳಕೆ ವಿಧಾನ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಕಳೆದ ವರ್ಷ 'ಕರ್ನಾಟಕದಲ್ಲಿ ಹವಾಮಾನ ಬದಲಾವಣೆಯ ಚಿತ್ರಣ' ಎಂಬ ಅಧ್ಯಯನ ವರದಿಯನ್ನು ಹೊರತಂದಿದೆ. ಕಳೆದ 30 ವರ್ಷಗಳಲ್ಲಿ (1990– 2018) ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿನ ಮಳೆ ಪ್ರಮಾಣ, ಮಳೆ ದಿನಗಳು, ಬರ, ನೆರೆ, ಉಷ್ಣಾಂಶ ಮತ್ತು ಆರ್‌ಎಚ್ ಸಾಂದ್ರತೆಯನ್ನು ಅದಕ್ಕೂ ಹಿಂದಿನ 30 ವರ್ಷಗಳಿಗೆ (1960–1990) ಹೋಲಿಸಲಾಗಿದೆ. ಇತ್ತೀಚಿನ ಅವಧಿಯಲ್ಲಾದ ಬದಲಾವಣೆಗಳನ್ನು ಅಧ್ಯಯನ ಮಾಡಲಾಗಿದೆ. ಈ ಅಧ್ಯಯನದ ಪ್ರಕಾರ, ರಾಜ್ಯದ ಕೆಲವೆಡೆ ಮಳೆಯು ಗಣನೀಯ ಪ್ರಮಾಣದಲ್ಲಿ ಏರಿಕೆ ಅಥವಾ ಇಳಿಕೆ ಆಗಿರುವುದು ಕಂಡು ಬಂದಿದೆ.

ಕಾವೇರಿ ಜಲಾನಯನದ ಒಟ್ಟು ವಿಸ್ತೀರ್ಣ ಪ್ರದೇಶದಲ್ಲಿ ಕಾವೇರಿ (ಕೊಡಗು) ಮತ್ತು ಕಬಿನಿ (ಕೇರಳದ ವೈನಾಡು) ಉಗಮ ಪ್ರದೇಶದ ವಿಸ್ತೀರ್ಣ ಕೇವಲ ಶೇ 5ರಷ್ಟು ಮಾತ್ರ ಇದೆ. ಆದರೆ, ಇಲ್ಲಿ ಉತ್ಪತ್ತಿ ಆಗುವ ನೀರಿನ ಪ್ರಮಾಣವು ಒಟ್ಟು ನೀರಿನ ಪ್ರಮಾಣದ ಶೇ 50ಕ್ಕೂ ಹೆಚ್ಚು ಎಂಬುದು ಗಮನಾರ್ಹ. 740 ಟಿಎಂಸಿ ಅಡಿಗಳ ಪೈಕಿ 350ರಿಂದ 400 ಟಿಎಂಸಿ ಅಡಿಗಳಷ್ಟು ನೀರು ಇಲ್ಲೇ ಲಭ್ಯವಾಗುತ್ತದೆ. ಜಾಗ ಕಡಿಮೆ ಆದರೂ ಇಳುವರಿ ಪ್ರಮಾಣ ಅತ್ಯಧಿಕ. ಅಧ್ಯಯನವೊಂದರ ಪ್ರಕಾರ, ಮಳೆಯ ಪ್ರಮಾಣ, ಮಳೆಯ ದಿನ ಮತ್ತು ಮಳೆ ಹಂಚಿಕೆಯಲ್ಲಿ ಇಳಿಕೆಯಾಗಿರುವುದು ಕಂಡು ಬಂದಿದೆ. ಇತ್ತೀಚಿನ ದಿನಗಳಲ್ಲಿ ಭೂಬಳಕೆಯಲ್ಲಿ ಆಗಿರುವ ಬದಲಾವಣೆ ಬಗ್ಗೆ ಭಾರತೀಯ ವಿಜ್ಞಾನ ಸಂಸ್ಥೆಯು ಪಶ್ಚಿಮಘಟ್ಟ ಪ್ರದೇಶದಲ್ಲಿ ಅಧ್ಯಯನ ನಡೆಸಿದ್ದು ಭೂಬಳಕೆ ಮತ್ತು ಮಳೆ ತರುವ ಅರಣ್ಯದಲ್ಲಿ ಸಾಕಷ್ಟು ಬದಲಾವಣೆ ಆಗಿರುವುದನ್ನು ದಾಖಲಿಸಿದೆ. ಈ ಬದಲಾವಣೆ ಇಳುವರಿ ಮೇಲೆ ಪರಿಣಾಮ ಬೀರುತ್ತದೆ.

ಕಾವೇರಿ–ವೈಗೈ–ಗುಂಡಾರ್ ಯೋಜನೆ ರಾಷ್ಟ್ರೀಯ ಮಟ್ಟದ ನದಿ ಜೋಡಣೆ ಯೋಜನೆಯ ಒಂದು ಭಾಗವಾಗಿದೆ. ಮಹಾನದಿ, ಗೋದಾವರಿ, ಕೃಷ್ಣಾ, ಕಾವೇರಿ ಜೋಡಣೆಯ ಮಹತ್ವದ ಯೋಜನೆಯನ್ನು ಕೇಂದ್ರ ಸರ್ಕಾರವು ಕೈಗೆತ್ತಿಕೊಂಡಿದೆ. ಮಹಾನದಿಯ ಹೆಚ್ಚುವರಿ ನೀರನ್ನು ಕೃಷ್ಣಾ, ಪೆನ್ನಾರ್, ಕಾವೇರಿ, ವೈಗೈ ಮತ್ತು ಗುಂಡಾರ್ ಜಲಾನಯನ ಪ್ರದೇಶಕ್ಕೆ ತಿರುಗಿಸುವ ಯೋಜನೆ ಹಮ್ಮಿಕೊಂಡಿದೆ. ಕಾವೇರಿಯಿಂದ 45 ಟಿಎಂಸಿ ಅಡಿ ಹೆಚ್ಚುವರಿ ನೀರನ್ನು ವೈಗೈ–ಗುಂಡಾರ್ ಜಲಾನಯನ ಪ್ರದೇಶಕ್ಕೆ ತಿರುಗಿಸುವ ಯೋಜನೆ ಇದು. 'ಅಂತರ್ ಜಲಾನಯನ ಪ್ರದೇಶಕ್ಕೆ ನೀರನ್ನು ತಿರುಗಿಸಲು ಸಾಧ್ಯವಿಲ್ಲ' ಎಂಬ ವಾದಕ್ಕೆ ನಮ್ಮವರು ಅಂಟಿಕೊಂಡು ಕೂತಿದ್ದಾರೆ. ಹೆಚ್ಚುವರಿ ನೀರಿನ ಲಭ್ಯತೆ ಇದೆಯೆ ಇಲ್ಲವೇ ಎಂಬ ಅಧ್ಯಯನದ ಅಗತ್ಯವನ್ನು ಯಾರೂ ಪ್ರಸ್ತಾಪಿಸುತ್ತಿಲ್ಲ. ಹೆಚ್ಚುವರಿ ನೀರೇ ಇಲ್ಲವಾದರೆ ಮಳೆ ಇಲ್ಲದ ವರ್ಷಗಳಲ್ಲಿ ಎಲ್ಲಿಂದ ಹರಿಸುತ್ತಾರೆ?

ಮೇಕೆದಾಟು (ಸಮತೋಲಿತ ಜಲಾಶಯ) 67 ಟಿಎಂಸಿ ಅಡಿ ಹೆಚ್ಚುವರಿ ನೀರು ಬಳಸಿಕೊಳ್ಳುವ ಯೋಜನೆ. ಇದರಿಂದ ರಾಜ್ಯಕ್ಕೆ ಎರಡು ರೀತಿಯ ಉಪಯೋಗಗಳಿವೆ. ಕುಡಿಯುವ ನೀರಿನ ಯೋಜನೆ ಮತ್ತು ವಿದ್ಯುತ್ ಉತ್ಪಾದನೆ ಕೈಗೊಳ್ಳಲು ಉದ್ದೇಶಿಸಲಾಗಿದೆ.

ವಿದ್ಯುತ್ ಉತ್ಪಾದನೆಗೆ ಬಳಕೆ ಮಾಡಿದ ನೀರು ತಮಿಳುನಾಡಿಗೆ ಹರಿದು ಹೋಗುತ್ತದೆ. ತಮಿಳುನಾಡಿಗೆ ಪ್ರತಿ ತಿಂಗಳು ಬಿಡಬೇಕಾದ ಪ್ರಮಾಣವನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಿದೆ. ಈಗ ಕುಡಿಯುವ ನೀರಿನ ಉದ್ದೇಶದ ಬಳಕೆಗೆ ಕೆಆರ್‌ಎಸ್ ಮತ್ತು ಕಬಿನಿ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದೆ. ಮುಂಬರುವ ದಿನಗಳಲ್ಲಿ ಎರಡು ಪಟ್ಟು ನೀರು ಬೇಕಾಗುತ್ತದೆ. ಮೇಕೆದಾಟು ಯೋಜನೆ ಮಾಡುವುದರಿಂದ ಆ ಸಮಸ್ಯೆ ಇತ್ಯರ್ಥವಾಗುತ್ತದೆ. ನೀರಿನ ಸಂಗ್ರಹ ಇರುವುದರಿಂದ ತಮಿಳುನಾಡಿಗೆ ನೀರು ಹರಿಸುವುದು ಸಮಸ್ಯೆ ಆಗುವುದಿಲ್ಲ.

ಲೇಖಕ: ನಿವೃತ್ತ ನಿರ್ದೇಶಕ, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ

ನಿರೂಪಣೆ: ಎಸ್. ರವಿಪ್ರಕಾಶ್

ಲಭ್ಯತೆ ನಿರ್ಧಾರದ ವಿಧಾನವೇ ತಪ್ಪು

• ಅರ್ಜುನಹಳ್ಳಿ ಪ್ರಸನ್ನ ಕುಮಾರ್



ಯಾವುದೇ ನದಿಯಲ್ಲಿನ ವಾರ್ಷಿಕ ಜಲ ಲಭ್ಯತೆ ಆ ಕಣಿವೆಯಲ್ಲಿ ಸುರಿಯುವ ಮಳೆಯ ತೀವ್ರತೆ, ಭೂಸಂರಚನೆ, ಸಸ್ಯಸಂಪತ್ತು, ಆವಿ, ಅಂತರ್ಜಲ ಮುಂತಾದವುಗಳನ್ನು ಅವಲಂಬಿಸಿರುತ್ತದೆ. ಮಳೆಯ ವಿನ್ಯಾಸವು ಪ್ರತಿ ವರ್ಷ ಒಂದೇ ತೆರನಾಗಿ ಇರುವುದಿಲ್ಲ. ಮಳೆಯ ವಿನ್ಯಾಸದಲ್ಲಿ ಮೂರು ವಿಧಗಳನ್ನು ಗುರುತಿಸಬಹುದು. ಅವೆಂದರೆ, ಸಮೃದ್ಧ, ಮಧ್ಯಮ ಮತ್ತು ಕನಿಷ್ಠ. ಹಾಗಾಗಿಯೇ ಯಾವುದೇ ನದಿಯಲ್ಲಿ ನೀರಿನ ಲಭ್ಯತೆಯನ್ನು ಸರಾಸರಿ ಅಥವಾ ಶೇಕಡವಾರು ವಿಧಾನದಲ್ಲಿ ನಿರ್ಧರಿಸುವುದು ಸರಿಯಾದ ಕ್ರಮ ಅಲ್ಲ. ನದಿಯಲ್ಲಿ ಎಷ್ಟು ನೀರು ಲಭ್ಯವಿದೆ ಎಂಬುದಕ್ಕೆ ವಾಸ್ತವಿಕ ಲಭ್ಯತೆಯೇ ಮಾನದಂಡ. ಸರಾಸರಿ ಅಥವಾ ಶೇಕಡಾವಾರು ವಿಧಾನವನ್ನು ಅನುಸರಿಸುವುದು ಮೂರ್ಖತನ ಎಂದು ಅಮೆರಿಕದ ಸುಪ್ರೀಂ ಕೋರ್ಟ್ ಕೂಡ ಒಮ್ಮೆ ಹೇಳಿತ್ತು.

ಆದರೆ, ನೀರು ಹಂಚಿಕೆಯನ್ನು 1901ರಿಂದ 1972ರ (72 ವರ್ಷ) ವರೆಗಿನ ಸರಾಸರಿ ಆಧರಿಸಿ ನಿರ್ಧರಿಸಬೇಕು ಎಂದು ಕರ್ನಾಟಕ ಮತ್ತು 1934ರಿಂದ 1972ರ (38 ವರ್ಷ) ವರೆಗಿನ ಸರಾಸರಿ ಆಧರಿಸಿ ನಿರ್ಧರಿಸಬೇಕು ಎಂದು ತಮಿಳುನಾಡು ಕಾವೇರಿ ಜಲ ವಿವಾದ ನ್ಯಾಯಮಂಡಳಿಯನ್ನು ಕೋರಿತ್ತು. ಕರ್ನಾಟಕದ ವಾದದ ಪ್ರಕಾರ ಕಾವೇರಿಯಲ್ಲಿ ವಾರ್ಷಿಕ 752 ಟಿಎಂಸಿ ಅಡಿ ಮತ್ತು ತಮಿಳುನಾಡು ವಾದದ ಪ್ರಕಾರ 740 ಟಿಎಂಸಿ ಅಡಿ ನೀರು ಲಭ್ಯ ಎಂಬ ನಿರ್ಧಾರಕ್ಕೆ ಬರಲಾಯಿತು. ವ್ಯತ್ಯಾಸವು 12 ಟಿಎಂಸಿ ಅಡಿ ಮಾತ್ರ. ಹಾಗಾಗಿ ನೀರಿನ ಲಭ್ಯತೆ 740 ಟಿಎಂಸಿ ಅಡಿ ಎಂದು ನ್ಯಾಯಮಂಡಳಿಯು ನಿರ್ಧರಿಸಿತು. ಕರ್ನಾಟಕ, ತಮಿಳುನಾಡು ಮತ್ತು ಕೇರಳವು ಇದಕ್ಕೆ ಒಪ್ಪಿಗೆಯನ್ನೂ ಕೊಟ್ಟವು. ನೀರಾವರಿ ಕಾರ್ಯದರ್ಶಿ ಸಿ.ಸಿ. ಪಟೇಲ್ ನೇತೃತ್ವದಲ್ಲಿ ಕೇಂದ್ರ ಸರ್ಕಾರವು 1972ರಲ್ಲಿ ರಚಿಸಿದ್ದ ಕಾವೇರಿ ಸತ್ಯ ಶೋಧನ ಸಮಿತಿ ಕೂಡ ಕಾವೇರಿಯಲ್ಲಿ 740 ಟಿಎಂಸಿ ಅಡಿಗಳಷ್ಟು ನೀರು ಇದೆ ಎಂದು ವರದಿ ನೀಡಿತ್ತು.

ಕಾವೇರಿ ನ್ಯಾಯಮಂಡಳಿಯು ನೇಮಿಸಿಕೊಂಡಿದ್ದ ತಾಂತ್ರಿಕ ಸಮಿತಿಯು ಈ ಪರಿಮಾಣಕ್ಕೆ ಸಹಮತ ಸೂಚಿಸಿ, ರಾಜ್ಯಗಳ ನೀರಿನ ಕೊಡುಗೆಯನ್ನು ನಿರ್ಧರಿಸಿತು. ಸಮಿತಿಯ ಅಂದಾಜಿನಂತೆ ಕರ್ನಾಟಕ ಜಲಾನಯನ ಪ್ರದೇಶದಿಂದ 400 ಟಿಎಂಸಿ ಅಡಿ, ತಮಿಳುನಾಡಿನಿಂದ 236 ಟಿಎಂಸಿ ಅಡಿ ಮತ್ತು ಕೇರಳದಿಂದ 104 ಟಿಎಂಸಿ ಅಡಿ ನೀರು ಕಾವೇರಿಗೆ ಹರಿದು ಬರುತ್ತದೆ ಎಂದು ನಿರ್ಧರಿಸಿದೆ.

ಒಟ್ಟು 740 ಟಿಎಂಸಿ ಅಡಿ ನೀರನ್ನು ರಾಜ್ಯಗಳ ನಡುವೆ ಹಂಚುವಾಗ 20 ಟಿಎಂಸಿ ಅಡಿ ನೀರನ್ನು ಕಾಪು ದಾಸ್ತಾನು ಎಂದು ಪರಿಗಣಿಸಿ, ಕರ್ನಾಟಕ ಮತ್ತು ತಮಿಳುನಾಡಿಗೆ ತಲಾ 10 ಟಿಎಂಸಿಯಂತೆ ಹಂಚಬೇಕು; ಸದರಿ ನೀರನ್ನು ಮುಂಗಾರು ಮಳೆ ವಿಳಂಬವಾದಾಗ ಅಥವಾ ಮಳೆ ಕಡಿಮೆಯಾದ ಸಮಯದಲ್ಲಿ ಕುಡಿಯುವ ನೀರಾಗಿ ಬಳಸಿಕೊಳ್ಳುವಂತೆ ನಿರ್ದೇಶಿಸಬೇಕು ಎಂದು ತಾಂತ್ರಿಕ ಸಮಿತಿಯು ನ್ಯಾಯಮಂಡಳಿಗೆ ಶಿಫಾರಸು ಮಾಡಿತು.

1972ರಲ್ಲಿ ರಚನೆಯಾದ ಸತ್ಯ ಶೋಧ ಸಮಿತಿಯ ಕಾಲದಿಂದಲೂ ಕಾವೇರಿಯಲ್ಲಿ 1,200 ಟಿಎಂಸಿ ಅಡಿ ನೀರು ಲಭ್ಯವಿದೆ ಎಂದು ಕಾವೇರಿ ಕೊಳ್ಳದ ರಾಜ್ಯಗಳು ವಾದಿಸುತ್ತಲೇ ಬಂದಿದ್ದವು. ಹಾಗಾಗಿಯೇ ಲಭ್ಯವಿರುವ 740 ಟಿಎಂಸಿ ಅಡಿ ನೀರನ್ನು ರಾಜ್ಯಗಳ ನಡುವೆ ಹಂಚುವುದು ನ್ಯಾಯಮಂಡಳಿಗೆ ದೊಡ್ಡ ಸವಾಲಾಗಿತ್ತು.

ರಾಜ್ಯಗಳಿಗೆ ಎಕರೆವಾರು ನಿರ್ಬಂಧ ಮತ್ತು ಬೆಳೆ ನಿರ್ಬಂಧ ವಿಧಿಸಬೇಕು ಎಂಬುದು ನ್ಯಾಯಮಂಡಳಿಯ ತಾಂತ್ರಿಕ ಸಮಿತಿಯ ಸಲಹೆಯಾಗಿತ್ತು. ಅದರಂತೆ, ಪ್ರತಿ ಬೆಳೆಗೆ ಕಾಲಮಿತಿ ಮತ್ತು ಬಳಸುವ ನೀರಿನ ಪ್ರಮಾಣ ಮಿತಿಯನ್ನು ನ್ಯಾಯಮಂಡಳಿಯು ನಿಗದಿ ಮಾಡಿತ್ತು. ಕೃಷಿಗೆ ವಿಧಿಸಿದ್ದ ಈ ನಿರ್ಬಂಧಗಳನ್ನು ನ್ಯಾಯಮಂಡಳಿಯು ಮತ್ತೊಮ್ಮೆ ಅವಲೋಕನಕ್ಕೆ ಒಳಪಡಿಸಿತು. ರಾಜ್ಯಗಳಿಗೆ ಕೃಷಿಗೆ ನೀರು ವಿತರಣೆಯಾದ ಬಳಿಕ 25.08 ಟಿಎಂಸಿ ಅಡಿ ಹೆಚ್ಚುವರಿಯಾಗಿ ಉಳಿದಿದೆ ಎಂಬುದು ಈ ಅವಲೋಕನದಲ್ಲಿ ತಿಳಿಯಿತು.

ಈ ಹೆಚ್ಚುವರಿ ನೀರು ಮತ್ತು ಕಾಪು ದಾಸ್ತಾನಾಗಿ ಇರಿಸಿದ ನೀರನ್ನು (25.08 ಟಿಎಂಸಿ + 20 ಟಿಎಂಸಿ = 45.08 ಟಿಎಂಸಿ) ಹೆಚ್ಚುವರಿ ನೀರು ಎಂದು ನ್ಯಾಯಮಂಡಳಿ ಪರಿಗಣಿಸಿತು. ಈ ಪ್ರಮಾಣದ ನೀರನ್ನು ಹಂಚದೇ ಬಿಟ್ಟರೆ ಅದು ಮತ್ತೊಂದು ವಿವಾದಕ್ಕೆ ಕಾರಣ ಆಗಬಹುದು ಎಂದು ನ್ಯಾಯಮಂಡಳಿಯು ಭಾವಿಸಿತು. ಈ ನೀರನ್ನೂ ರಾಜ್ಯಗಳ ನಡುವೆ ಹಂಚಿಕೆ ಮಾಡಿತು. ಈ ನೀರನ್ನು ಆಯಾ ರಾಜ್ಯಗಳು ಆದ್ಯತೆಯ ಮೇರೆಗೆ ಯಾವುದೇ ಉದ್ದೇಶಕ್ಕೆ ಬಳಸಬಹುದು ಎಂದೂ ನ್ಯಾಯಮಂಡಳಿ ಹೇಳಿತು. ಹೆಚ್ಚುವರಿ ನೀರಿನ ಹಂಚಿಕೆ ಹೀಗಿದೆ: ಕರ್ನಾಟಕಕ್ಕೆ 17.64, ತಮಿಳುನಾಡಿಗೆ 26.71, ಕೇರಳಕ್ಕೆ 1.51 ಮತ್ತು ಪುದುಚೇರಿಗೆ 0.22 ಟಿಎಂಸಿ ಅಡಿ.

ಕರ್ನಾಟಕವು ತಮಿಳುನಾಡಿಗೆ ಹರಿಸಬೇಕಿರುವ ನೀರಿನಲ್ಲಿ 14.75 ಟಿಎಂಸಿ ಅಡಿ ನೀರನ್ನು ಸುಪ್ರೀಂ ಕೋರ್ಟ್ ಕಡಿತಗೊಳಿಸಿದೆ. ಉಳಿದಂತೆ ಕಾವೇರಿ ಜಲ ವಿವಾದ ನ್ಯಾಯಮಂಡಳಿಯ ಎಲ್ಲ ಶಿಫಾರಸುಗಳನ್ನೂ ಎತ್ತಿ ಹಿಡಿದಿದೆ. ಈ ಲೆಕ್ಕದಲ್ಲಿ ನೋಡಿದರೆ ಕಾವೇರಿ ನದಿಯಲ್ಲಿ ಹೆಚ್ಚುವರಿ ನೀರು ಎಂಬುದೇ ಇಲ್ಲ. ಇರುವ ಎಲ್ಲ ನೀರೂ ಹಂಚಿಕೆ ಆಗಿಬಿಟ್ಟಿದೆ.

ಲೇಖಕ: ಜಲತಜ್ಞ

ಮೇಕೆದಾಟು ಮುತ್ತಿಗೆಗೆ ಮುಂದಾದ ತಮಿಳುನಾಡು ರೈತರು

ಕನಕಪುರ: ಮೇಕೆದಾಟು ಜಲಾಶಯ ನಿರ್ಮಾಣ ವಿರೋಧಿಸಿ ಪ್ರತಿಭಟಿಸಲು ಬರುತ್ತಿದ್ದ ತಮಿಳುನಾಡು ರೈತ ಸಂಘಟನೆಗಳ ಸದಸ್ಯರನ್ನು ರಾಜ್ಯದ ಪೊಲೀಸರು ಭಾನುವಾರ ಕನಕಪುರ ಗಡಿಯಲ್ಲಿಯೇ ತಡೆದರು.

ಕುಡಿಯುವ ನೀರು ಮತ್ತು ವಿದ್ಯುತ್ ಉತ್ಪಾದನೆ ಉದ್ದೇಶಕ್ಕಾಗಿ ಜಲಾಶಯ ನಿರ್ಮಾಣಕ್ಕೆ ಕರ್ನಾಟಕ ಮುಂದಾಗಿದೆ. ಇದನ್ನು ವಿರೋಧಿಸಿ ಅಣೆಕಟ್ಟೆ ನಿರ್ಮಾಣ ಸ್ಥಳದಲ್ಲಿ ಪ್ರತಿಭಟನೆ ನಡೆಸಿ, ಮುತ್ತಿಗೆ ಹಾಕಲು ಮುಖಂಡರು ಕರೆ ಕೊಟ್ಟಿದ್ದರು.

ಈ ಮಾಹಿತಿ ತಿಳಿದ ಪೊಲೀಸರು ಬೆಳಿಗ್ಗೆಯಿಂದಲೇ ತಮಿಳುನಾಡಿನ ಒಬ್ಬ ಹೋರಾಟಗಾರನೂ ರಾಜ್ಯದ ಗಡಿ ಪ್ರವೇಶಿದಂತೆ ತಡೆದರು. ತಮಿಳುನಾಡು ಗಡಿ ಭಾಗದ ಕನಕಪುರ ತಾಲ್ಲೂಕಿನ ವಿವಿಧ 9 ಕಡೆ ನಾಕಾಬಂದಿ ಹಾಕಲಾಗಿತ್ತು. ಇದರಿಂದಾಗಿ ಮೇಕೆದಾಟಿಗೆ ಬಂದ ಪ್ರವಾಸಿಗರೂ ತಪಾಸಣೆಗೆ ಒಳಗಾಗಿ ತೊಂದರೆ ಅನುಭವಿಸಿದರು.

'ಸತ್ಯಮಂಗಲ ಮಾರ್ಗವಾಗಿ ಕರ್ನಾಟಕಕ್ಕೆ ಬರಲು ಪ್ರಯತ್ನಿಸಿದ ತಮಿಳುನಾಡು ರೈತರನ್ನು ಸತ್ಯಮಂಗಲದಲ್ಲಿ ಅಲ್ಲಿನ ಪೊಲೀಸರು ಭಾನುವಾರ ಬೆಳಿಗ್ಗೆ ಬಂಧಿಸಿ ಸಂಜೆ ಬಿಡುಗಡೆಗೊಳಿಸಿದ್ದಾರೆ. ಒಬ್ಬ ಪ್ರತಿಭಟನಕಾರನೂ ಕರ್ನಾಟಕಕ್ಕೆ ಬಂದಿಲ್ಲ. ತಾಲ್ಲೂಕಿನಾದ್ಯಂತ ಬಿಗಿಭದ್ರತೆ ಕೈಗೊಳ್ಳಲಾಗಿದೆ' ಎಂದು ಕನಕಪುರ ಸರ್ಕಲ್ ಇನ್‌ಸ್ಪೆಕ್ಟರ್ ಟಿ.ಟಿ. ಕೃಷ್ಣ ತಿಳಿಸಿದರು.

ಚನ್ನಪಟ್ಟಣ ಡಿವೈಎಸ್ಪಿ ನೇತೃತ್ವದಲ್ಲಿ 5 ಇನ್ ಸ್ಪೆಕ್ಟರ್, 12 ಎಸ್ ಐ, 25 ಎಎಸ್ ಐ ಹಾಗೂ 106 ಕಾನ್‌ಸ್ಟೆಬಲ್‌ಗಳನ್ನು ಭದ್ರತೆಗೆ ನಿಯೋಜಿಸಲಾಗಿದೆ.

ಪ್ರತಿಭಟನೆಯ ಭಾಗವಾಗಿ ರಸ್ತೆ ತಡೆಯನ್ನೂ ನಡೆಸಲಾಗಿದೆ

ಎಎಫ್‌ಪಿ ಚಿತ್ರ

ಬಾಂಗ್ಲಾ: ಮೋದಿ ವಿರುದ್ಧ ನಿಲ್ಲದ ಪ್ರತಿಭಟನೆ

ನಾರಾಯಣಗಂಜ್ (ಬಾಂಗ್ಲಾದೇಶ) (ಎಪಿ/ಎಎಫ್‌ಪಿ): ಪ್ರಧಾನಿ ನರೇಂದ್ರ ಮೋದಿ ಅವರು ಬಾಂಗ್ಲಾದೇಶಕ್ಕೆ ಭೇಟಿ ನೀಡುವುದನ್ನು ವಿರೋಧಿಸಿ ಇಲ್ಲಿ ಆರಂಭವಾಗಿದ್ದ ಪ್ರತಿಭಟನೆ ಮೂರನೇ ದಿನವೂ ಮುಂದುವರಿದೆ. ಢಾಕಾ ಹೊರವಲಯದ ನಾರಾಯಣಗಂಜ್‌ನಲ್ಲಿ ಭಾನುವಾರ ನಡೆದ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿದೆ. ಪೊಲೀಸರ ಜತೆ ನಡೆದ ಘರ್ಷಣೆಯಲ್ಲಿ ಒಬ್ಬ ಯುವಕ ಮೃತಪಟ್ಟಿದ್ದಾನೆ. ಹಲವರು ಗಾಯಗೊಂಡಿದ್ದಾರೆ.

ಪ್ರತಿಭಟನಕಾರರ ಮೇಲೆ ಗುಂಡು ಹಾರಿಸಿರುವುದಕ್ಕೆ ಹಲವು ಮಾನವ ಹಕ್ಕು ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿವೆ.

ಮೋದಿ ಅವರು ಭೇಟಿ ನೀಡುವುದನ್ನು ವಿರೋಧಿಸಿ ಇಲ್ಲಿನ, ಹಿಫಾಜತ್ ಇ ಇಸ್ಲಾಮಿ ಸಂಘಟನೆಯು ಪ್ರತಿಭಟನೆ ನಡೆಸುತ್ತಿದೆ. ಢಾಕಾದಲ್ಲಿ ಶುಕ್ರವಾರ ನಡೆದ ಪ್ರತಿಭಟನೆಯ ವೇಳೆ ಹಿಂಸಾಚಾರ ನಡೆದಿತ್ತು. ಹಿಂಸಾಚಾರವನ್ನು ನಿಯಂತ್ರಿಸಲು ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ನಾಲ್ವರು ಮೃತಪಟ್ಟಿದ್ದರು. ಶನಿವಾರದ ಪ್ರತಿಭಟನೆ ವೇಳೆ ಆರು ಜನರು ಮೃತಪಟ್ಟಿದ್ದರು. ಈಗ ಮೋದಿ ಅವರು ವಾಪಸಾದ ನಂತರವೂ, ಇಲ್ಲಿ ಪ್ರತಿಭಟನೆ ಮುಂದುವರಿದಿದೆ.

'ಮೋದಿ ಅವರು ತಮ್ಮ ದೇಶದಲ್ಲಿ ಕೋಮುಭಾವನೆ ಹುಟ್ಟುಹಾಕುತ್ತಿದ್ದಾರೆ. ಮುಸ್ಲಿಮರ ವಿರುದ್ಧ ಹಿಂದೂಗಳನ್ನು ಎತ್ತಿಕಟ್ಟುತ್ತಿದ್ದಾರೆ. ಜನರನ್ನು ಧರ್ಮದ ಹೆಸರಿನಲ್ಲಿ ವಿಭಜನೆ ಮಾಡುವವರು ನಮ್ಮ ದೇಶಕ್ಕೆ ಬರಬಾರದು' ಎಂದು ಸಂಘಟನೆ ಹೇಳಿದೆ. ನಾರಾಯಣಗಂಜ್‌ನಲ್ಲಿ ಭಾನುವಾರ, ಸಂಘಟನೆಯ 3,000ಕ್ಕೂ ಹೆಚ್ಚು ಸದಸ್ಯರು ಪ್ರತಿಭಟನೆ ನಡೆಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ಬಾಂಗ್ಲಾದೇಶ ಹಾಗೂ ಭಾರತದಲ್ಲಿ ಏಕಕಾಲಕ್ಕೆ ಎರಡು ಚಿತ್ರಗಳು ವೈರಲ್ ಆಗಿವೆ. ಕಪ್ಪು ಬಿಳುಪು ಚಿತ್ರದಲ್ಲಿರುವ ಮಹಿಳೆಯರೇ 50 ವರ್ಷಗಳ ಬಳಿಕ ಮತ್ತೊಂದು ಚಿತ್ರದಲ್ಲಿ ಜತೆಯಾಗಿ ಕಾಣಿಸಿಕೊಂಡಿದ್ದಾರೆ. ಈ ಮಹಿಳೆಯರು ಬಾಂಗ್ಲಾ ವಿಮೋಜನೆ ಹೋರಾಟದಲ್ಲಿ ಭಾಗಿಯಾಗಿದ್ದರು ಎಂದು ಹಲವರು ಟ್ವೀಟ್ ಮಾಡಿದ್ದಾರೆ. ಇವರು ಹಿಂದೂ ಧರ್ಮದಿಂದ ಇಸ್ಲಾಂಗೆ ಮತಾಂತರ ಆಗಿದ್ದಾರೆ ಎಂದು ಹಲವರು ಉಲ್ಲೇಖಿಸಿದ್ದಾರೆ.

ವೈರಲ್ ಫೋಟೊ ಬಗ್ಗೆ ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ತಂಡವು ಪರಿಶೀಲನೆ ನಡೆಸಿದೆ. ಇವರು ಸ್ವಾತಂತ್ರ್ಯ ಹೋರಾಟಗಾರರಲ್ಲ. ಇವರು ಹುಟ್ಟಿರುವುದೇ ಇಸ್ಲಾಂ ಧರ್ಮೀಯರಾಗಿ ಎಂದು ಬಾಂಗ್ಲಾದೇಶದ ಪತ್ರಕರ್ತರೊಬ್ಬರು ಸ್ಪಷ್ಟಪಡಿಸಿದ್ದಾರೆ. ಹಳ್ಳಿಗಳ ಭೇಟಿಗೆ ತೆರಳಿದ್ದಾಗ ಈ ಚಿತ್ರವನ್ನು ಸೆರೆಹಿಡಿಯಲಾಗಿತ್ತು ಎಂದು ಬಾಂಗ್ಲಾದೇಶದ ಅಫ್ರಿನಾ ಎಂಬುವರು ಟ್ವೀಟ್ ಮಾಡಿದ್ದಾರೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ತಿರುಗಿಬಂದ ಬಾಣ

ಮಹೋಷಧಕುಮಾರ ಅಮರಾದೇವಿಯನ್ನು ಮದುವೆಯಾಗಿ ಅರಮನೆಗೆ ಕರೆತಂದ ಮೇಲೆ ಉಳಿದ ಪಂಡಿತರಿಗೆ ಬಹಳ ಸಂಕಟವಾಯಿತು. ಮೊದಲೇ ಅಸಾಮಾನ್ಯ ಪಂಡಿತನಾಗಿದ್ದ ಮಹೋಷಧಕುಮಾರ ಮತ್ತಷ್ಟು ಬುದ್ಧಿವಂತಳಾದ ಹೆಂಡತಿಯನ್ನು ಕರೆತಂದಿದ್ದಾನೆ. ಅವರಿಬ್ಬರ ಬಗ್ಗೆ ರಾಜನಿಗೆ ತುಂಬ ಒಳ್ಳೆಯ ಅಭಿಪ್ರಾಯವಿದೆ. ಅವರ ನಡುವೆ ಒಡಕು ಉಂಟುಮಾಡುವ ತನಕ ತಮಗೆ ಸುಖವಿಲ್ಲವೆಂದುಕೊಂಡರು. ಅದನ್ನು ಹೇಗೆ ಮಾಡುವುದು? ಇಂಥ ಮನಸ್ಸುಗಳನ್ನು ಒಡೆಯುವ ಕೆಲಸದಲ್ಲಿ ಸೇನಕ ಪಂಡಿತನಿಗಿಂತ ಚತುರರು ಯಾರೂ ಇಲ್ಲ, ನೀವೇ ಇದಕ್ಕೆ ಪರಿಹಾರ ನೀಡಿ ಎಂದು ಉಳಿದ ಪಂಡಿತರು ಸೇನಕನನ್ನು ಕೇಳಿದರು. ಆತ ಹೇಳಿದ, 'ಸರಿ, ನನ್ನ ಬಳಿ ಒಂದು ಉಪಾಯವಿದೆ. ನಾನು ಹೋಗಿ ರಾಜನ ಚೂಡಾಮಣಿಯನ್ನು ಕದ್ದು ತರುತ್ತೇನೆ. ಪಕ್ಕುಸ ನೀನು ಸ್ವರ್ಣಮಾಲೆಯನ್ನು ತಾ, ಕಾವಿಂದ ನೀನು ರಾಜನ ವಿಶೇಷವಾದ ಕಂಬಳಿಯನ್ನು ತೆಗೆದುಕೊಂಡು ಬಾ, ದೇವಿಂದ ನೀನು ಸ್ವರ್ಣಪಾದುಕೆಗಳನ್ನು ಕದ್ದು ತಾ. ನಾನು ಮುಂದೆ ವ್ಯವಸ್ಥೆ ಮಾಡುತ್ತೇನೆ'. ಅವರು ಅಂತೆಯೇ ಮಾಡಿದರು.

ಅವುಗಳನ್ನು ಯಾರಿಗೂ ತಿಳಿಯದಂತೆ ಮಹೋಷಧಕುಮಾರನ ಮನೆಗೆ ತಲುಪಿಸುವ ಯೋಜನೆಯಾಯಿತು. ಸೇನಕ ಚೂಡಾಮಣಿಯನ್ನು ಮಜ್ಜಿಗೆಯ ಗಡಿಗೆಯಲ್ಲಿ ಹಾಕಿ ದಾಸಿಗೆ ಕೊಟ್ಟು ಹೇಳಿದ, 'ಈ ಗಡಿಗೆಯನ್ನು ಯಾರಿಗೂ ಕೊಡದೆ ಮಹೋಷಧಕುಮಾರನ ಮನೆಯಲ್ಲಿ ಮಾತ್ರ ಯಾರಿಗಾದರೂ ಕೊಟ್ಟು ಬಾ'. ಆಕೆ ಗಡಿಗೆಯನ್ನು ಹೊತ್ತುಕೊಂಡು 'ಮಜ್ಜಿಗೆ ಬೇಕೇ?' ಎಂದು ಕೇಳುತ್ತಾ ಕುಮಾರನ ಮನೆಯ ಮುಂದೆಯೇ ಸುತ್ತಾಡುತ್ತಿದ್ದಳು. ಅಮರಾದೇವಿ ಆಕೆಯನ್ನು ನೋಡಿ, ಈಕೆ ಮಜ್ಜಿಗೆಯನ್ನು ಬೇರೆ ಯಾರ ಮನೆಯ ಮುಂದೆ ಒಯ್ಯದೇ ಕೇವಲ ನಮ್ಮ ಮನೆಯ ಮುಂದೆ ಓಡಾಡುತ್ತಿದ್ದಾಳೆ ಎಂದುಕೊಂಡು ತಾನೇ ಆ ದಾಸಿಯಿಂದ ಗಡಿಗೆಯನ್ನು ಪಡೆದಳು.

'ನೀನು ಯಾರ ದಾಸಿ?' ಎಂದು ಕೇಳಿದಳು. ಆಕೆ, 'ನಾನು ಸೇನಕ ಪಂಡಿತನ ದಾಸಿ' ಎಂದಳು. ಅಮರಾದೇವಿ ಆಕೆಯ ಮತ್ತು ಅವಳ ತಂದೆ-ತಾಯಿಯರ ಹೆಸರು ಕೇಳಿ ಕಳುಹಿಸಿದಳು. ನಂತರ ಗಡಿಗೆಯಲ್ಲಿ ಕೈ ಹಾಕಿ ಚೂಡಾಮಣಿಯನ್ನು ಕಂಡು, ತೆಗೆದಿಟ್ಟುಕೊಂಡಳು. ಸೇನಕಪಂಡಿತನ, ಇಂತಹ ದಾಸಿ ಈ ಉಡುಗೊರೆಯನ್ನು ಕೊಟ್ಟಳು ಎಂದು ಬರೆದಿಟ್ಟುಕೊಂಡಳು. ಪಕ್ಕುಸ ಮಲ್ಲಿಗೆ ಹೂವಿನ ಬುಟ್ಟಿಯಲ್ಲಿ ಸ್ವರ್ಣಮಾಲೆ ಕಳುಹಿಸಿದ, ಕಾವಿಂದ ವೀಳ್ಯದೆಲೆಯ ಬುಟ್ಟಿಯಲ್ಲಿ ಕಂಬಳಿ ಕಳುಹಿಸಿದ, ದೇವಿಂದ ಜಮೆಗೋಧಿ ಹುಲ್ಲಿನೊಳಗೆ ಸ್ವರ್ಣಪಾದುಕೆ ಕಳುಹಿಸಿದ. ಆಕೆ ಅವುಗಳನ್ನೆಲ್ಲ ಸಾಕ್ಷಿಸಮೇತ ತೆಗೆದಿಟ್ಟುಕೊಂಡಳು.

ಮರುದಿನ ಅಮಾತ್ಯರು ರಾಜನಿಗೆ ಆಭರಣಗಳನ್ನು ಹಾಕಿಕೊಳ್ಳುವಂತೆ ಕೇಳಿದಾಗ ಅವು ಯಾವುವೂ ದೊರೆಯಲಿಲ್ಲ. ಅವುಗಳನ್ನು ಯಾರು ಕಳ್ಳತನ ಮಾಡಿರಬೇಕು ಎಂದು ಚಿಂತಿಸುವಾಗ ಸೇನಕ, 'ಸ್ವಾಮೀ, ಅವೆಲ್ಲ ಮಹೋಷಧಕುಮಾರನ ಮನೆಯಲ್ಲಿ ಇವೆಯಂತೆ. ಅವನೇ ಅವುಗಳನ್ನು ಧರಿಸಿ ರಾಜನಂತೆ ಮೆರೆಯುತ್ತಾನಂತೆ' ಎಂದು ಕಿವಿಯೂದಿದ. ರಾಜ ಯೋಚನೆ ಮಾಡದೆ ಕುಮಾರನನ್ನು ಬಂಧಿಸಲು ಆಜ್ಞೆ ಮಾಡಿದ. ದೂತರಿಂದ ವಿಷಯ ತಿಳಿದ ಕುಮಾರ ಅದರಿಂದ ಪಾರಾಗಲು ವೇಷ ಮರೆಸಿಕೊಂಡು ಹೋಗಿ ದೂರದ ನಗರಕ್ಕೆ ಬಂದು ಕುಂಬಾರನ ಕೆಲಸ ಮಾಡತೊಡಗಿದ. ಅಮರಾದೇವಿ ದಾಸಿಯ ಜೊತೆಗೆ ರಾಜನ ಮುಂದೆ ಬಂದು. ಈ ನಾಲ್ಕೂ ಪಂಡಿತರು ಕಳುಹಿಸಿಕೊಟ್ಟ ವಸ್ತುಗಳನ್ನು ತೋರಿಸಿ, 'ಪ್ರಭು, ಮಹೋಷಧಪಂಡಿತ ಕಳ್ಳನಲ್ಲ. ಈ ನಾಲ್ವರು ಪಂಡಿತರು ಕಳ್ಳರು' ಎಂದು ತಿಳಿಸಿದಳು. ರಾಜನಿಗೆ ಪಶ್ಚಾತ್ತಾಪವಾಯಿತು. ಆದರೆ ಮಹೋಷಧಕುಮಾರನನ್ನು ಕರೆತರುವುದು ಹೇಗೆ? ಆ ಜವಾಬ್ದಾರಿಯನ್ನು ಆತ ಆ ನಾಲ್ಕು ಜನ ಪಂಡಿತರಿಗೇ ವಹಿಸಿ, ಅವರು ಕುಮಾರನನ್ನು ಕರೆತರದಿದ್ದರೆ ಭಯಂಕರ ಶಿಕ್ಷೆ ಕೊಡುವುದಾಗಿ ಹೆದರಿಸಿದ. ❖

ದಿನ ಭವಿಷ್ಯ

ಸೋಮವಾರ 29 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ಪ್ರತಿಪದೆ ಗಂ. 41-4 (ರಾ. 10-50) ಸೋಮವಾರ ನಿತ್ಯ ನಕ್ಷತ್ರ ಹಸ್ತ ಗಂ. 25-30 (ಹ. 4-37) ಧ್ರುವ ನಾಮ ಯೋಗ ಗಂ 33-4 ಬಾಲವ ಕರಣ ಗಂ. 13-36 ವಿಷ ಗಂ. 44-18 ಅಮೃತ ಗಂ. 10-54 ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-24 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 3 6

ಮೇಷ: ಮಕ್ಕಳ ಪ್ರತಿಭೆ ಬೆಳಕಿಗೆ ಬಂದು ಅಪಾರ ಸಂತೋಷ ತರಲಿದೆ. ಸತ್ಕಾರ ನಿರ್ವಹಣೆಯಲ್ಲಿ ಧಾರ್ಮಿಕ ಮುಖಂಡರು ಮುಖ್ಯ ಪಾತ್ರ ವಹಿಸಲಿದ್ದಾರೆ. ವೈವಾಹಿಕ ವ್ಯವಹಾರಗಳನ್ನು ಮುಂದೂಡಲಿದ್ದೀರಿ.

ವೃಷಭ: ಶೈಕ್ಷಣಿಕ ವಲಯದಲ್ಲಿ ವಿದ್ಯಾರ್ಥಿಗಳ ಅಪಾರ ಸಾಧನೆ ಗಣನೀಯವಾಗಿ ಹೆಚ್ಚಲಿದೆ. ಸಮಾಜಸೇವೆಯಲ್ಲಿ ಭಾಗಿ. ಹಿರಿಯರಿಂದ ಪ್ರಶಂಸೆ. ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಿರಿ. ಆರೋಗ್ಯದಲ್ಲಿ ಸುಧಾರಣೆ.

ಮಿಥುನ: ಅನಿವಾರ್ಯ ಕಾರಣದಿಂದ ತಿರುಗಾಟ. ಷೇರುಪೇಟೆ, ಹೂಡಿಕೆಗಳಲ್ಲಿ ಉತ್ತಮ ಲಾಭ. ರೇಷ್ಮೆ ನೇಕಾರರಿಗೆ ಉತ್ತಮ ಆದಾಯ. ಹೊಸ ವಸ್ತ್ರ ವಿನ್ಯಾಸಕಾರರು, ಕಲಾವಿದರುಗಳಿಗೆ ಅವಕಾಶಗಳು ಹೆಚ್ಚಲಿದೆ.

ಕರ್ಕಾಟಕ: ಸತ್ಕಾರ್ಯಗಳನ್ನು ಸರಾಗವಾಗಿ ನೆರವೇರಿಸಲಿದ್ದೀರಿ. ವ್ಯವಹಾರದಲ್ಲಿ ಸಾಧಾರಣ ಲಾಭ. ಉದ್ದೇಶಿತ ಕಾರ್ಯಗಳಿಗೆ ಸಕಾಲದಲ್ಲಿ ಬರಬೇಕಾದ ಹಣ ಬರುವುದರಿಂದ ಅನುಕೂಲ.

ಸಿಂಹ: ಬರವಣಿಗೆಯಿಂದ ಉತ್ತಮ ಆದಾಯ. ಕಠಿಣವೆನಿಸಿದ ಕಾರ್ಯಗಳು ಸಹ ಸುಗಮವಾಗಿ ನೆರವೇರುವುದರಿಂದಾಗಿ ನೆಮ್ಮದಿ ಮೂಡಲಿದೆ. ಮನೆಯಲ್ಲಿ ಹಬ್ಬದ ವಾತಾವರಣ. ಧಾರ್ಮಿಕ ಕಾರ್ಯದಲ್ಲಿ ಮಗ್ನರಾಗುವಿರಿ.

ಕನ್ಯಾ: ಅಧಿಕ ಓಡಾಟದ ಸಾಧ್ಯತೆ. ಸುದ್ದಿ ಮಾಧ್ಯಮದಲ್ಲಿ ದುಡಿಯುವವರಿಗೆ ಬಿಡುವಿಲ್ಲದ ಕಾರ್ಯದೊಂದಿಗೆ ಯಶಸ್ಸು ದೊರಕಲಿದೆ. ಎಂಜಿನೀಯರುಗಳಿಗೆ ಧನಲಾಭದೊಂದಿಗೆ ಉನ್ನತ ಸ್ಥಾನದಲ್ಲಿರುವವರಿಂದ ಪ್ರಶಂಸೆ.

ತುಲಾ: ಹಣಕಾಸು ವ್ಯವಹಾರ ನಡೆಸುವವರು ಯೋಜನೆ ವಿಸ್ತರಣೆ ಮಾಡಲು ಉತ್ತಮ ದಿನ. ಸ್ಥಾನದಲ್ಲಿ ಬದಲಾವಣೆ. ಸಂಪರ್ಕ, ಸಂವಹನ ಕ್ಷೇತ್ರಗಳಲ್ಲಿ ದುಡಿಯುತ್ತಿರುವವರಿಗೆ ಗೌರವಾದರ ದೊರಕಲಿವೆ. ಹಣ ವ್ಯಯ.

ವೃಶ್ಚಿಕ: ಕೋರ್ಟ್ ಕಚೇರಿಗಳಲ್ಲಿನ ಕೆಲಸಗಳಲ್ಲಿ ಯಶಸ್ಸು. ಅಪೇಕ್ಷಿತರಿಗೆ ಸಂತಾನ ಪ್ರಾಪ್ತಿ. ಕೈಗಾರಿಕಾ ಕ್ಷೇತ್ರದಲ್ಲಿ ಉತ್ತಮ ಲಾಭ. ಮಂಗಳ ಕಾರ್ಯಗಳು ಜರುಗುವವು. ಆರೋಗ್ಯದಲ್ಲಿ ಸುಧಾರಣೆ.

ಧನು: ಕಬ್ಬಿಣ, ಸಿಮೆಂಟ್ ಮುಂತಾದ ಕಟ್ಟೋಣ ಸಾಮಗ್ರಿಗಳ ವ್ಯಾಪಾರಸ್ಥರಿಗೆ ಒಳ್ಳೆಯ ಆದಾಯ. ಕುಟುಂಬದಲ್ಲಿ ಮಂಗಳ ಕಾರ್ಯಗಳು ಜರುಗುವವು. ಕೆಲಸಕಾರ್ಯಗಳು ನಿರ್ವಿಘ್ನದಾಯಕವಾಗಿ ಸಾಗುವವು.

ಮಕರ: ನಿಮ್ಮ ಬಯಕೆಗಳು ಈಡೇರುವ ದಿನವಾಗಲಿದೆ. ಹಣಕಾಸಿನ ಅನುಕೂಲತೆಗಳು ಕೂಡಿಬರಲಿವೆ. ವಿದೇಶ ಪ್ರಯಾಣ ಮಾಡುವ ಸಾಧ್ಯತೆ. ವಿವಾಹಾಪೇಕ್ಷಿತರಿಗೆ ಅನುರೂಪ ಸಂಗಾತಿಯು ದೊರಕಿ ನಿಶ್ಚಯವಾಗಲಿದೆ.

ಕುಂಭ: ವ್ಯಾಪಾರಿಗಳಿಗೆ ಉತ್ತಮ ಲಾಭ. ಕೃಷಿಕರಿಗೆ ಉತ್ತಮ ಆದಾಯ. ಸರಕಾರಿ ನೌಕರರಿಗೆ ಇತರೆ ಮೂಲಗಳಿಂದ ಅಧಿಕ ಆದಾಯ. ಆದಾಯಕ್ಕಿಂತ ವೆಚ್ಚ ಅಧಿಕವಾಗುವ ಸಾಧ್ಯತೆ.

ಮೀನ: ಐಶ್ವರ್ಯ ವೃದ್ಧಿಸುವುದು. ಅವಿವಾಹಿತರಿಗೆ ವಿವಾಹ ಯೋಗ. ಅಪೇಕ್ಷಿತರಿಗೆ ಸಂತಾನ ಪ್ರಾಪ್ತಿ. ವೈದ್ಯಕೀಯ ವೆಚ್ಚ ಭರಿಸಬೇಕಾದೀತು. ಆರೋಗ್ಯದಲ್ಲಿ ಉತ್ತಮ ಸುಧಾರಣೆ ಕಾಣಲಿದ್ದೀರಿ.

ನಿಮ್ಮ ಜನ್ಮದಿನ 29-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಮೇಲಾಧಿಕಾರಿಗಳೊಂದಿಗೆ ಕೆಲಸದ ವಿಚಾರದಲ್ಲಿ ದೀರ್ಘ ಚರ್ಚೆಯಲ್ಲಿ ತೊಡಗುವಿರಿ. ಸೊಸೈಟಿ ಅಥವಾ ಸಹಕಾರ ಸಂಘ ಸಂಸ್ಥೆಗಳಲ್ಲಿ ಉನ್ನತ ಸ್ಥಾನ ಲಭ್. ನಿಮ್ಮ ಕೆಲಸದ ವೈಖರಿ ಸಹವರ್ತಿಗಳ ಗಮನ ಸೆಳೆಯಲಿದೆ. ಸ್ನೇಹಿತರೊಂದಿಗೆ ಪಾಲುದಾರಿಕೆಯಿಂದ ಹೆಚ್ಚಿನ ಲಾಭ ದೊರಕಲಿದೆ.

ಪದಬಂಧ 4551 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮುತ್ತುಗದ ಮರದ ಹತ್ತಿರ ನೀಡಿದ ಚುಂಬನ! (2)
2.ಕಾಯ ಮುಂದಿರಿಸಿ ಮಾಡಿರುವ ಕೆಲಸ (3)
4.ಕಣದಲ್ಲಿರುವ ಹತೋಟಿ (4)
6.ವೀರಶೈವರ ಸ್ಮಶಾನ (4)
8.ಠರಾವು ಮಂಡಿಸಿದಾಗ ಭೂತ ಕಾಣಿಸಿತೇ? (2)
9.ಇವನು ತಿಳಿದವನು (2)
10.ಮಂಜ ನಡುವೆ ತೂರಿಕೊಂಡರೆ ಇದು ಸೂಕ್ತ! (4)
12.ಮರದೊಳಗೆ ಸುತ್ತುತ್ತಿರುವ ದುಂಬಿ (4)
14.ಲೋಹದ ಅಥವಾ ಮರದ ಹಾಳೆ (3)
15.ಖನಿಜಗಳ ನೆಲೆ (2)

ಮೇಲಿಂದ ಕೆಳಕ್ಕೆ

1.ದುಮುಗುಟ್ಟುತ್ತಿರುವ ಅಜ್ಜ (3)
2.ಕಾಯಿಯ ಹೂರಣ ತಂದಿರುವ ಉದ್ದೇಶ (3)
3.ಕರುವನ್ನು ಮಾರುವಾತನ ಷರತ್ತು (3)
5.ಕಾವು ಬಡಿದರೂ ತೋರಿಸಿದ ಡೌಲು (3)
7.ಸುಮ್ಮನಿರಿ! ಇದು ಬಂಗಾರ ! (3)
8.ರಾಯರಿಂದ ಬಂದಿರುವ ನಿರೂಪ (3)
9.ಪಕ ಪಕ ನಕ್ಕಾಗ ಬಂದ ನೆನಪು! (3)
11.ಸಹನೀಯವೆನಿಸಿದ್ದಕ್ಕೇ ಇಷ್ಟು ಹತ್ತಿರ! (3)
12.ಮೆಲ್ಲಗೆ ಕಿತ್ತು ಮುಡಿದ ಸುವಾಸಿತ ಹೂ (3)
13.ಮಣಿ ಧರಿಸಿದ ಚಲುವೆ (3)

1		■	2		3	■	■	■
	■	■		■		■	■	■
4	5			■	6			7
■		■	■	■	■	■	■	
8		■	■	■	■	■	9	
	■	■	■	■	■	■		■
10			11	■	12			13
■	■	■		■		■	■	
■	■	■	14			■	15	

4550ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಚಕ್ಷುಃಪ್ರೀತಿ 3.ಲವಾಜಮೆ 5.ವಿಧುರ 6.ಕುರವಿ 7.ದನುಜ 9.ದಮನ 11.ಲಷ್ಕರು 12.ಅಪಾತ್ರ 13.ಅಂಗಾರಕ 15.ವಿನಿಯೋಗ

ಮೇಲಿಂದ ಕೆಳಕ್ಕೆ: 1.ಚಮ್ಮಾರ 2.ತಿಲ 4.ವಾಕ್ಪೋವಿದ 5.ವಿಷಾದ 8.ಜಲಚರ 10.ನಕ್ಷತ್ರ 12.ಅಪಾಂಗ 14.ಕವಿ

ಸುಡೊಕು 4937

	8			7			4	
		4	6		8			9
7				1			5	
						6	7	
6		1	7		2			4
								1
				6		5		
	3	6	2		5			7
8		5		4			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4936 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

‘ಕೃಷಿ ಕ್ಷೇತ್ರಕ್ಕೆ ಆಧುನಿಕತೆಯ ಅಗತ್ಯವಿದೆ’

ನವದೆಹಲಿ (ಪಿಟಿಐ): ಕೃಷಿ ಕ್ಷೇತ್ರಕ್ಕೆ ಆಧುನಿಕತೆಯ ಅಗತ್ಯವಿದೆ ಎಂದು ಒತ್ತಿ ಹೇಳಿದ ಪ್ರಧಾನಿ ನರೇಂದ್ರ ಮೋದಿ, ಈಗಾಗಲೇ ಸಾಕಷ್ಟು ಸಮಯವೂ ಕಳೆದುಹೋಗಿದೆ ಎಂದಿದ್ದಾರೆ.

‘ಮನ್ ಕಿ ಬಾತ್’ ಕಾರ್ಯಕ್ರಮದ 75ನೇ ಸಂಚಿಕೆಯಲ್ಲಿ ಭಾನುವಾರ ಮಾತನಾಡಿದ ಅವರು, ಕೃಷಿ ಕ್ಷೇತ್ರದಲ್ಲಿ ಆಧುನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕಿದೆ. ಜೀವನದ ಹೊಸತನದ ಪ್ರತಿ ಹಂತದಲ್ಲೂ ಆಧುನೀಕರಣ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು.

‘ಕೃಷಿ ಕ್ಷೇತ್ರದಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು, ರೈತರ ಆದಾಯವನ್ನು ವೃದ್ಧಿಸಲು, ಸಾಂಪ್ರದಾಯಿಕ ಕೃಷಿ ಪದ್ಧತಿಗಳ ಜೊತೆಗೆ ಹೊಸ ಪರ್ಯಾಯಗಳು, ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುವುದು ಅಷ್ಟೇ ಮುಖ್ಯ’ ಎಂದು ಹೇಳಿದರು.



ಪ್ರಧಾನಿ ಮೋದಿ

ಶ್ವೇತ ಕ್ರಾಂತಿಯ ಸಂದರ್ಭದಲ್ಲಿ ದೇಶವು ಇದಕ್ಕೆ ಸಾಕ್ಷಿಯಾಗಿದೆ ಮತ್ತು ಜೇನು ಸಾಕಣೆ ಕೂಡ ಒಂದು ಪರ್ಯಾಯವಾಗಿದೆ ಎಂದರು.

ಕೋವಿಡ್–19ರ ಪ್ರಸರಣವನ್ನು ತಗ್ಗಿಸಲು ಕಳೆದ ವರ್ಷದ ಮಾರ್ಚ್‌ನಲ್ಲಿ ದೇಶದ ಜನರು ಜನತಾ ಕರ್ಫ್ಯೂ ಬಗ್ಗೆ ಕೇಳಿದ್ದನ್ನು ಪ್ರಧಾನಿ ಈ ವೇಳೆ ಸ್ಮರಿಸಿದರು.

‘ಕಳೆದ ವರ್ಷ ನಮ್ಮ ಬಳಿ ಏನೂ ಇರಲಿಲ್ಲ, ಜಾಗತಿಕವಾಗಿ ಲಸಿಕೆ ಯಾವಾಗ ಬರುತ್ತದೆಯೊ ಎಂಬ ಪ್ರಶ್ನೆ ಕಾಡುತ್ತಿತ್ತು. ಆದರೆ ಈಗ ಭಾರತವೇ ವಿಶ್ವದ ಅತಿದೊಡ್ಡ ಲಸಿಕಾ ಅಭಿಯಾನ ನಡೆಸುತ್ತಿರುವುದು ಹೆಮ್ಮೆಯ ಸಂಗತಿ’ ಎಂದರು.

ಭಾರತದ 'ನಾರಿ ಶಕ್ತಿ' ಕ್ರೀಡಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಿದೆ. ಕ್ರಿಕೆಟ್ ಆಟಗಾರ್ತಿ ಮಿಥಾಲಿ ರಾಜ್ ಮತ್ತು ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಅವರ ಇತ್ತೀಚಿನ ಕ್ರೀಡಾ ಸಾಹಸಗಳನ್ನು ಶ್ಲಾಘಿಸಿದರು.

ಮನ್ ಕಿ ಬಾತ್ 75 ಸಂಚಿಕೆಯನ್ನು ಪೂರ್ಣಗೊಳಿಸುವಾಗ ಪ್ರಧಾನಿ ಅವರು, 2014ರಲ್ಲಿ ಆರಂಭವಾದ ಈ ಪ್ರಯಾಣ ನಿನ್ನೆಯಷ್ಟೇ ಆರಂಭವಾದಂತೆ ಭಾಸವಾಗುತ್ತಿದೆ. ಎಲ್ಲ ಕೇಳುಗರಿಗೆ ಧನ್ಯವಾದ ಎಂದು ಹೇಳಿದರು.

ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಮೀಪಿಸುತ್ತಿರುವ ಸಂದರ್ಭದಲ್ಲಿಯೇ ಮನ್ ಕಿ ಬಾತ್ 75ರ ಸಂಚಿಕೆ ಮುಗಿದಿದೆ. ನಮ್ಮ ಮಹಾನ್ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗವು ನಾಗರಿಕನಾಗಿ ನಮ್ಮ ಕರ್ತವ್ಯಗಳ ಬಗ್ಗೆ ಯೋಚಿಸಲು ಪ್ರೇರೇಪಿಸಬೇಕು ಎಂದು ಸಲಹೆ ನೀಡಿದರು.

ಭಾರತ–ಅಮೆರಿಕ ನೌಕಾ ಸಮರಾಭ್ಯಾಸ ಆರಂಭ

ನವದೆಹಲಿ (ಪಿಟಿಐ): ಅಮೆರಿಕ ಹಾಗೂ ಭಾರತದ ನೌಕಾಪಡೆಗಳು ಹಿಂದೂ ಮಹಾಸಾಗರದ ಪೂರ್ವಭಾಗದಲ್ಲಿ ಎರಡು ದಿನಗಳ ಜಂಟಿ ನೌಕಾ ಸಮರಾಭ್ಯಾಸಕ್ಕೆ ಭಾನುವಾರ ಚಾಲನೆ ನೀಡಿದವು.

ರಕ್ಷಣಾ ಕ್ಷೇತ್ರದಲ್ಲಿ ಉಭಯ ದೇಶಗಳ ನಡುವಿನ ಸಹಕಾರಕ್ಕೆ ಈ ಜಂಟಿ ನೌಕಾಭ್ಯಾಸ ಸಾಕ್ಷಿ ಎಂದು ಭಾರತೀಯ ನೌಕಾಪಡೆ ಅಧಿಕಾರಿಗಳು ಹೇಳಿದ್ದಾರೆ. ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರು ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ ಬೆನ್ನಲ್ಲೇ ಈ ಸಮರಾಭ್ಯಾಸ ಆರಂಭಗೊಂಡಿರುವುದು ಗಮನಾರ್ಹ.

ಭಾರತೀಯ ನೌಕಾಪಡೆಯ ಯುದ್ಧನೌಕೆ ‘ಶಿವಾಲಿಕ್’, ಸಾಗರ ಗಡಿಯಲ್ಲಿ ಕಣ್ಗಾವಲಿಡುವ ಯುದ್ಧವಿಮಾನ ‘ಪಿ8ಐ’ ಪಾಲ್ಗೊಂಡಿವೆ.

ಅಮೆರಿಕ ನೌಕಾಪಡೆಯ ‘ಯುಎಸ್‌ಎಸ್ ಥಿಯೋಡರ್ ರೂಸ್‌ವೆಲ್ಟ್’ ಯುದ್ಧನೌಕೆ ಈ ಜಂಟಿ ಅಭ್ಯಾಸದಲ್ಲಿ ಪಾಲ್ಗೊಂಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಯುಎಸ್‌ಎಸ್ ಥಿಯೋಡರ್ ರೂಸ್‌ವೆಲ್ಟ್’ ಒಂದು ಬೃಹತ್ ನೌಕೆಯಾಗಿದ್ದು, ಯುದ್ಧವಿಮಾನಗಳು, ಶತ್ರು ಪಾಳೆಯದ ಮೇಲೆ ವಿಧ್ವಂಸಕ ದಾಳಿ ನಡೆಯುವ ಶಸ್ತ್ರಾಸ್ತ್ರಗಳು, ಕಾವಲು ಹಡಗುಗಳನ್ನು ಒಳಗೊಂಡಿರುತ್ತದೆ.

‘ಇದೇ ಮೊದಲ ಬಾರಿಗೆ ಭಾರತೀಯ ವಾಯುಪಡೆಯ ಯುದ್ಧವಿಮಾನಗಳು ಈ ಜಂಟಿ ಸಮರಾಭ್ಯಾಸದಲ್ಲಿ ಪಾಲ್ಗೊಂಡಿವೆ. ಗಗನದಲ್ಲಿಯೇ ಶತ್ರು ರಾಷ್ಟ್ರಗಳ ಯುದ್ಧವಿಮಾನಗಳಿಗೆ ಪ್ರತಿರೋಧ ಒಡ್ಡುವ ಕಾರ್ಯತಂತ್ರವನ್ನು ಕರಗತ ಮಾಡಿಕೊಳ್ಳಲು ಅವಕಾಶ ದೊರೆತಿದೆ’ ಎಂದು ನೌಕಾಪಡೆಯ ವಕ್ತಾರ ತಿಳಿಸಿದರು.

1ನೇ ವರ್ಷದ ಪುಣ್ಯಸ್ಮರಣೆ

ಹೆಚ್. ಎಂ. ಸುಮಿತ್ರಮ್ಮ
ಅಸ್ತಂಗತ : 29-03-2020
ನಿಮ್ಮ ಆತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತಿರುವ
ದುಃಖತಪ್ತರಾದ: ಮಕ್ಕಳು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು, ಬಂಧುಗಳು ಹಾಗೂ ಸ್ನೇಹಿತರು.

26ನೇ ವರ್ಷದ ಪುಣ್ಯತಿಥಿ

ಶ್ರೀಮತಿ ಎಂ.ಸರೋಜಮ್ಮ
(ದಿವಂಗತ ಶ್ರೀ ಎನ್. ಸೋಮಣ್ಣ ಮಾಂಬಳ್ಳಿ ಇವರ ಪತ್ನಿ)
ನಾವು ಪ್ರತಿದಿನ ಮೌನವಾಗಿ ನಿಮ್ಮನ್ನು ನೆನಪಿಸಿಕೊಳ್ಳುತ್ತೇವೆ. ನೀವು ತೋರಿಸಿಕೊಟ್ಟ ಆದರ್ಶಗಳನ್ನು ಪಾಲಿಸಲು ನಮ್ಮನ್ನು ನಾವು ಸಮರ್ಪಿಸಿಕೊಳ್ಳುತ್ತೇವೆ.
ಸದಾ ನಿಮ್ಮ ನೆನಪಿನಲ್ಲಿರುವ
ಕುಟುಂಬ ವರ್ಗದವರು

ನಿಧನ



ಶ್ರೀ H. L. ಗುರುವಾರೆಡ್ಡಿ
ಹರಳೂರು. ಇವರು ದಿನಾಂಕ 28-03-2021 ರಂದು ದೈವಾಧೀನರಾದರು. ಅಂತ್ಯಕ್ರಿಯೆಯನ್ನು 29-03-2021 ರಂದು ಬೆಳಿಗ್ಗೆ 10:00 ಗಂಟೆಗೆ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
ಫೋನ್: 8553835599

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಪ್ರತಿ ತಿಂಗಳು ₹100 ಕೋಟಿ ಸಂಗ್ರಹಿಸಿ ಕೊಡಬೇಕೆಂಬ ಹೇಳಿಕೆ ಆರೋಪ

‘ನಿವೃತ್ತ ನ್ಯಾಯಮೂರ್ತಿಯಿಂದ ತನಿಖೆ’

ನಾಗಪುರ (ಪಿಟಿಐ): ತಮ್ಮ ವಿರುದ್ಧ ಮುಂಬೈ ಮಾಜಿ ಪೊಲೀಸ್ ಕಮಿಷನರ್ ಮಾಡಿರುವ ಆರೋಪದ ಕುರಿತು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯಿಂದ ತನಿಖೆ ನಡೆಯಲಿದೆ ಎಂದು ಮಹಾರಾಷ್ಟ್ರ ಗೃಹ ಸಚಿವ ಅನಿಲ್ ದೇಶಮುಖ್ ಭಾನುವಾರ ಹೇಳಿದ್ದಾರೆ.

ಅನಿಲ್ ದೇಶಮುಖ್

ತನಿಖೆಯ ಬಳಿಕ ಸತ್ಯ ಏನು ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ ಎಂದು ಅವರು ನಾಗಪುರ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ನನ್ನ ಮೇಲೆ ಬಂದಿರುವ ಆರೋಪಗಳ ಬಗ್ಗೆ ವಿಚಾರಣೆ ನಡೆಸುವಂತೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರನ್ನು ಕೋರಿದ್ದೆ. ಇದೀಗ ಮುಖ್ಯಮಂತ್ರಿ ಅವರು ಈ ಕುರಿತು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಒಬ್ಬರಿಂದ ತನಿಖೆ ನಡೆಸಲು ನಿರ್ಧರಿಸಿದ್ದಾರೆ. ತನಿಖೆಯಿಂದ ಸತ್ಯಾಂಶ ಹೊರಬರುತ್ತದೆ’ ಎಂದು ದೇಶಮುಖ್ ಹೇಳಿದರು.

ಪೊಲೀಸ್ ಅಧಿಕಾರಿಗಳು ನಗರದ ಬಾರ್ ಮತ್ತು ರೆಸ್ಟೊರೆಂಟ್‌ಗಳಿಂದ ಪ್ರತಿ ತಿಂಗಳು ₹100 ಕೋಟಿ ಸಂಗ್ರಹಿಸಿ ಕೊಡಬೇಕು ಎಂದು ಗೃಹ ಸಚಿವ ಅನಿಲ್ ದೇಶಮುಖ್ ಸೂಚಿಸಿದ್ದಾರೆ ಎಂದು ಆರೋಪಿಸಿ ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಮ್ ವೀರ್ ಸಿಂಗ್ ಅವರು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಮಾರ್ಚ್ 20ರಂದು ಪತ್ರ ಬರೆದಿದ್ದರು. ಇದು ಮಹಾರಾಷ್ಟ್ರ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಿತ್ತು.

ಈ ಎಲ್ಲ ಆರೋಪಗಳನ್ನು ದೇಶಮುಖ್ ಅವರು ತಳ್ಳಿಹಾಕಿದ್ದರು.

ಉದ್ಯಮಿ ಮುಕೇಶ್ ಅಂಬಾನಿ ಮನೆಯ ಸಮೀಪ ಸ್ಫೋಟಕ ತುಂಬಿದ್ದ ಕಾರು ಪತ್ತೆಯಾದ ಬಳಿಕ ಮಹಾರಾಷ್ಟ್ರ ಸರ್ಕಾರ ಮಾರ್ಚ್ 17ರಂದು ಸಿಂಗ್ ಅವರನ್ನು ಗೃಹ ರಕ್ಷಕ ಇಲಾಖೆಗೆ ವರ್ಗಾಯಿಸಿತ್ತು.

ಸ್ಫೋಟಕವಿದ್ದ ವಾಹನ ಪತ್ತೆ ಪ್ರಕರಣ: ಮೀಠಿ ನದಿಯಲ್ಲಿ ಡಿವಿಆರ್ ಪತ್ತೆ

ಮುಂಬೈ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ನಿವಾಸದ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಪ್ರಕರಣದ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ), ಇಲ್ಲಿನ ಮೀಠಿ ನದಿಯಲ್ಲಿ ಡಿಜಿಟಲ್ ವಿಡಿಯೊ ರೆಕಾರ್ಡರ್ (ಡಿವಿಆರ್), ಸಿಪಿಯು, ಲ್ಯಾಪ್‌ಟಾಪ್ ಹಾಗೂ ಎರಡು ನಂಬರ್ ಪ್ಲೇಟ್‌ಗಳನ್ನು ಭಾನುವಾರ ಪತ್ತೆ ಹಚ್ಚಿ, ವಶಕ್ಕೆ ತೆಗೆದುಕೊಂಡಿತು.

ಈ ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಲಾಗಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ನದಿ ಬಳಿ ಕರೆದುಕೊಂಡು ಹೋದ ಎನ್‌ಐಎ ಅಧಿಕಾರಿಗಳು, ವಾಜೆ ನೀಡಿದ ಮಾಹಿತಿಯಂತೆ ನದಿಯಲ್ಲಿ ಶೋಧ ಕಾರ್ಯ ಕೈಗೊಂಡರು.

ಮುಳುಗು ತಜ್ಞರ ನೆರವಿನಿಂದ ರೂಟರ್, ಕಾರ್ಟ್ರಿಡ್ಜ್‌ಗಳು ಹಾಗೂ ಇತರ ವಸ್ತುಗಳನ್ನು ಸಹ ನದಿಯಲ್ಲಿ ಪತ್ತೆ ಮಾಡಿ, ವಶಪಡಿಸಿಕೊಳ್ಳಲಾಯಿತು ಎಂದು ಎನ್‌ಐಎ ಅಧಿಕಾರಿಯೊಬ್ಬರು ತಿಳಿಸಿದರು.

ವಾಜೆ ವಾಸವಿದ್ದ ಮನೆಯಿಂದ ಈ ಡಿವಿಆರ್ ಅನ್ನು ತೆಗೆದುಹಾಕಲಾಗಿತ್ತು ಎಂದು ಹೇಳಲಾಗಿದೆ. ಡಿವಿಆರ್ ಸೇರಿದಂತೆ ಈಗ ವಶಪಡಿಸಿಕೊಳ್ಳಲಾಗಿರುವ ವಸ್ತುಗಳನ್ನು ಮೀಠಿ ನದಿಯಲ್ಲಿ ಎಸೆಯಲಾಗಿತ್ತು ಎಂದು ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ರಿಯಾಜುದ್ದೀನ್ ಕಾಜಿ ವಿಚಾರಣೆ ವೇಳೆ ಎನ್‌ಐಎಗೆ ತಿಳಿಸಿದ್ದರು ಎನ್ನಲಾಗಿದೆ.

ವಾಜೆ ಸೂಚನೆ ಮೇರೆಗೆ ಡಿವಿಆರ್‌ಅನ್ನು ಕಾಜಿ ತೆಗೆದುಕೊಂಡು ಹೋಗಿದ್ದರು ಎಂದೂ ಆರೋಪಿಸಲಾಗಿದೆ.

ಕೃಷಿ ಕಾಯ್ದೆ ಪ್ರತಿ ಸುಟ್ಟು ‘ಹೋಳಿ’ ಆಚರಣೆ

ನವದೆಹಲಿ (ಪಿಟಿಐ): ದೆಹಲಿ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು, ನೂತನ ಕೃಷಿ ಕಾಯ್ದೆಗಳ ಪ್ರತಿಗಳನ್ನು ಸುಟ್ಟು ಹಾಕುವ ಮೂಲಕ ಭಾನುವಾರ ‘ಹೋಳಿಕಾ ದಹನ’ ಆಚರಿಸಿದರು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ.

ಏ. 5ರಂದು ‘ಎಫ್‌ಸಿಐ ಬಚಾವೊ ದಿವಸ್’ ಹಮ್ಮಿಕೊಳ್ಳಲಾಗುವುದು. ದೇಶದಾದ್ಯಂತ ಇರುವ ಎಫ್‌ಸಿಐ ಕಚೇರಿಗಳಿಗೆ ಅಂದು ಬೆಳಿಗ್ಗೆ 11ರಿಂದ ಸಂಜೆ 5 ರವರೆಗೆ ಮುತ್ತಿಗೆ ಹಾಕಲಾಗುವುದು ಎಂದೂ ಮೋರ್ಚಾ ಪ್ರಕಟಣೆಯಲ್ಲಿ ತಿಳಿಸಿದೆ.

‘ನೂತನ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕು. ಬೆಂಬಲ ಬೆಲೆಗೆ ಕಾನೂನಾತ್ಮಕ ರಕ್ಷಣೆ ನೀಡಬೇಕು ಎಂಬ ಬೇಡಿಕೆಗಳು ಈಡೇರುವವರೆಗೆ ಪ್ರತಿಭಟನೆಯನ್ನು ಮುಂದುವರಿಸಲಾಗುವುದು ಎಂದು ರೈತರು ಹೋಳಿ ಆಚರಣೆ ವೇಳೆ ಪುನರುಚ್ಚರಿಸಿದರು’ ಎಂದೂ ತಿಳಿಸಿದೆ.

ದೆಹಲಿಯ ಗಡಿಯಲ್ಲಿ ಪ್ರತಿಭಟಿಸುತ್ತಿರುವ ರೈತರು ಕೃಷಿ ಕಾಯ್ದೆಗಳ ಪ್ರತಿಗಳನ್ನು ಸುಡುವ ಮೂಲಕ ಭಾನುವಾರ ಹೋಳಿ ಆಚರಿಸಿದರು –ರಾಯಿಟರ್ಸ್ ಚಿತ್ರ

ಚರ್ಚ್‌ನಲ್ಲಿ ಆತ್ಮಾಹುತಿ ದಾಳಿ: 14 ಮಂದಿಗೆ ಗಾಯ

ಜಕಾರ್ತಾ (ಎಪಿ): ‘ಇಂಡೋನೇಷ್ಯಾದ ಸುಲಾವೆಸಿ ದ್ವೀಪದ ರೋಮನ್ ಕ್ಯಾಥೊಲಿಕ್ ಚರ್ಚ್‌ನಲ್ಲಿ ಗರಿಗಳ ಭಾನುವಾರ (ಪಾಮ್ ಸಂಡೆ) ಆಚರಣೆಯಲ್ಲಿ ನೂರಾರು ಜನ ಭಾಗಿಯಾಗಿದ್ದಾಗಲೇ ಆತ್ಮಾಹುತಿ ಬಾಂಬ್ ಸ್ಫೋಟಿಸಿದ್ದು, ಕನಿಷ್ಠ 14 ಮಂದಿಗೆ ಗಾಯವಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸುಲಾವೆಸಿ ಪ್ರಾಂತ್ಯದ ರಾಜಧಾನಿ ಮಕಸ್ಸರ್‌ನಲ್ಲಿರುವ ಸೇಕ್ರೆಡ್ ಹಾರ್ಟ್ ಆಫ್ ಜೀಸಸ್ ಕೆಥಡ್ರಲ್‌ನ ಹೊರಭಾಗದಲ್ಲಿ ಮೋಟರ್ ಬೈಕ್‌ನಲ್ಲಿ ಬಂದ ವ್ಯಕ್ತಿಯೊಬ್ಬ ತನ್ನನ್ನು ತಾನು ಸ್ಫೋಟಿಸಿಕೊಂಡ ಎಂದು ಪೊಲೀಸರು ಮಾಹಿತಿ ನೀಡಿದರು.

‘ಬೈಕ್‌ನಲ್ಲಿ ಇಬ್ಬರು ಶಂಕಿತರು ಬಂದಿರಬೇಕು. ಚರ್ಚ್ ಒಳಗೆ ನುಗ್ಗುವುದು ಅವರ ಗುರಿಯಾಗಿರಬೇಕು’ ಎಂದು ಚರ್ಚ್‌ನ ಧರ್ಮಗುರು ವಿಲ್‌ಮಸ್ ತುಲಕ್ ಅವರು ಹೇಳಿದರು.

ಕೊಲೆ ಪ್ರಕರಣ: ಶಾಸಕಿ ಪತಿ ಬಂಧನಕ್ಕೆ 'ಸುಪ್ರೀಂ' ಗಡುವು

ನವದೆಹಲಿ (ಪಿಟಿಐ): ಕಾಂಗ್ರೆಸ್ ಮುಖಂಡರೊಬ್ಬರ ಕೊಲೆ ಪ್ರಕರಣದ ಆರೋಪಿಯೂ ಆಗಿರುವ ಬಿಎಸ್‌ಪಿ ಶಾಸಕಿ ಪತಿಯನ್ನು ಏ. 5ರ ಒಳಗಾಗಿ ಬಂಧಿಸಿ. ತಪ್ಪಿದಲ್ಲಿ ಕಠಿಣ ಕ್ರಮ ಎದುರಿಸಿ ಎಂದು ಮಧ್ಯಪ್ರದೇಶ ಡಿಜಿಪಿಗೆ ಸುಪ್ರೀಂಕೋರ್ಟ್ ಎಚ್ಚರಿಕೆ ನೀಡಿದೆ.

ಶಾಸಕಿ ರಮಾಬಾಯಿ ಸಿಂಗ್ ಅವರ ಪತಿ ಗೋವಿಂದ್ ಸಿಂಗ್ ಅವರು, ಕಾಂಗ್ರೆಸ್ ಮುಖಂಡ ದೇವೇಂದ್ರ ಚೌರಾಸಿಯಾ ಕೊಲೆ ಪ್ರಕರಣದ ಆರೋಪಿ.

ಗೋವಿಂದ್ ಸಿಂಗ್ ಅವರಿಗೆ ಯಾವಾಗ ಮತ್ತು ಯಾವ ಕಾರಣಕ್ಕೆ ಭದ್ರತೆಯನ್ನು ಒದಗಿಸಲಾಗಿದೆ ಎಂಬ ಬಗ್ಗೆ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎಂ.ಆರ್. ಶಾ ಅವರಿರುವ ನ್ಯಾಯಪೀಠ ನಿರ್ದೇಶನ ನೀಡಿತು.

ಬಿಜೆಪಿ ಶಾಸಕನನ್ನು ಥಳಿಸಿದ ಪ್ರತಿಭಟನಕಾರರು

ಚಂಡೀಗಢ (ಪಿಟಿಐ): ಪಂಜಾಬ್‌ನಲ್ಲಿ ಬಿಜೆಪಿ ಶಾಸಕ ಅರುಣ್ ನಾರಂಗ್ ಅವರ ಮೇಲೆ ಹಲ್ಲೆ ನಡೆಸಿರುವ ರೈತ ಪ್ರತಿಭಟನಕಾರರ ಗುಂಪು, ಬಟ್ಟೆಯನ್ನು ಹರಿದು ಹಾಕಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಕ್ತಸರದ ಮಾಲೌಟ್‌ನಲ್ಲಿ ಶನಿವಾರ ಈ ಘಟನೆ ನಡೆದಿದೆ. ಕೇಂದ್ರದ ವಿವಾದಿತ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಕಳೆದ ಕೆಲವು ತಿಂಗಳುಗಳಿಂದ ತೀವ್ರ ಪ್ರತಿಭಟನೆ ನಡೆಸುತ್ತಿರುವ ರೈತರು, ಬಿಜೆಪಿ ನಾಯಕರ ಕಾರ್ಯಕ್ರಮಕ್ಕೆ ಅಡ್ಡಿಗೊಳಿಸುತ್ತಿದ್ದಾರೆ.

ಅಬೋಹರ್‌ನ ಬಿಜೆಪಿ ಶಾಸಕ ಅರುಣ್ ನಾರಂಗ್, ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಲು ಸ್ಥಳೀಯ ನಾಯಕರೊಂದಿಗೆ ತಲುಪಿದಾಗ ಅವರನ್ನು ಸುತ್ತುವರೆದ ರೈತ ಪ್ರತಿಭಟನಕಾರರ ಗುಂಪು ವಾಹನದ ಮೇಲೆ ಕಪ್ಪು ಮಸಿಯನ್ನು ಎರಚಿದ್ದಾರೆ.

ಬಿಜೆಪಿ ಶಾಸಕರ ಬಟ್ಟೆಯನ್ನು ಹರಿಯುತ್ತಿರುವ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ಕಾಣಿಸಿಕೊಂಡಿವೆ.

ಬಿಜೆಪಿ ಶಾಸಕರ ಕೊಲೆ ಯತ್ನ, ಹಲ್ಲೆ, ಕ್ರಿಮಿನಲ್ ಬೆದರಿಕೆ, ಗಲಭೆ ಮತ್ತು ಸಾರ್ವಜನಿಕ ಕರ್ತವ್ಯ ಎಸಗುವುದಕ್ಕೆ ತಡೆಯೊಡ್ಡಿದ್ದು ಸೇರಿದಂತೆ ಅನೇಕ ಆರೋಪಗಳ ಮೇಲೆ ಪಂಜಾಬ್‌ನ ಮುಕ್ತರ್ ಪೊಲೀಸರು, ಶನಿವಾರ ರಾತ್ರಿ ಏಳು ಮಂದಿ ಮತ್ತು 200-250 ಅಪರಿಚಿತರ ಮೇಲೆ ಪ್ರಕರಣ ದಾಖಲಿಸಿದ್ದಾರೆ.

ವರದಿ ಕೇಳಿದ ರಾಜ್ಯಪಾಲ: ಹಲ್ಲೆಯನ್ನು ಖಂಡಿಸಿರುವ ಪಂಜಾಬ್ ರಾಜ್ಯಪಾಲ ವಿ.ಪಿ. ಸಿಂಗ್ ಬದ್ನೋರ್ ಅವರು ಈ ಸಂಬಂಧ ಕಾಂಗ್ರೆಸ್ ನೇತೃತ್ವದ ಪಂಜಾಬ್ ಸರ್ಕಾರದಿಂದ ವರದಿ ಕೋರಿದ್ದಾರೆ.

ಗೃಹಸಚಿವರೂ ಆಗಿರುವ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರನ್ನು ಕರೆಸಿ ಮಾತನಾಡಿದ ರಾಜ್ಯಪಾಲರು ಘಟನೆಯ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಕೋವಿಡ್: ಮೆಕ್ಸಿಕೊದಲ್ಲಿ ಮೃತರ ಸಂಖ್ಯೆ 3.21 ಲಕ್ಷ!

ಮೆಕ್ಸಿಕೊ ಸಿಟಿ (ಎಪಿ): ‘ದೇಶದಲ್ಲಿ ಕೋವಿಡ್‌ನಿಂದಾಗಿ ಒಟ್ಟು 3.21 ಲಕ್ಷ ಮಂದಿ ಮೃತಪಟ್ಟಿದ್ದಾರೆ ಎಂದು ಮೆಕ್ಸಿಕೊ ಸರ್ಕಾರ ಶನಿವಾರ ಒಪ್ಪಿಕೊಂಡಿದೆ. ಇದು ಅಧಿಕೃತ–ಪರೀಕ್ಷೆಯು ದೃಢೀಕರಿಸಿದ ಸಾವಿಗಿಂತ ಶೇಕಡ 60 ರಷ್ಟು ಹೆಚ್ಚಿದೆ’ ಎಂದು ಸರ್ಕಾರ ತಿಳಿಸಿದೆ.

‘2,01,429 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ ಎಂದು ಅಧಿಕೃತ ಪರೀಕ್ಷೆದೃಢೀಕರಿಸಿದೆ.ಆದರೆಮೆಕ್ಸಿಕೊದ ಆಸ್ಪತ್ರೆಗಳು ಸೋಂಕಿತರಿಂದ ತುಂಬಿ ಹೋಗಿವೆ’ ಎಂದು ಸರ್ಕಾರ ಹೇಳಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 23 ಸಾವಿರಕ್ಕೆ ಏರಿಕೆ

24 ಗಂಟೆ: 3 ಸಾವಿರ ದಾಟಿದ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಮತ್ತಷ್ಟು ಏರಿಕೆಯಾಗಿವೆ. ಬೆಂಗಳೂರಿನಲ್ಲಿ 2,004 ಸೇರಿ ಭಾನುವಾರ 3,082 ಮಂದಿಗೆ ಸೋಂಕು ದೃಢಪಟ್ಟಿದೆ. ಐದು ತಿಂಗಳಿನಿಂದೀಚೆಗೆ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಕಳೆದ ಅಕ್ಟೋಬರ್ ತಿಂಗಳ ಮೊದಲ ವಾರ ಎರಡು ದಿನಗಳು ಹೊಸ ಪ್ರಕರಣಗಳ ಸಂಖ್ಯೆ 3 ಸಾವಿರದ ಗಡಿ ದಾಟಿತ್ತು. ಬಳಿಕ ಇಳಿಮುಖ ಕಂಡಿತ್ತು. ಕೆಲ ದಿನಗಳಿಂದ ಅಧಿಕ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗುತ್ತಿದ್ದು, ಕೇವಲ 4 ದಿನಗಳಲ್ಲಿ 11,057 ಪ್ರಕರಣಗಳು ಖಚಿತಪಟ್ಟಿವೆ. ಈವರೆಗೆ ಸೋಂಕಿತರಾದವರ ಸಂಖ್ಯೆ 9.87 ಲಕ್ಷ ದಾಟಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, ನಾಲ್ಕು ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಮೂರಂಕಿ ದಾಟಿದೆ.

ಕಲಬುರ್ಗಿ (159), ಉಡುಪಿ (115), ಮೈಸೂರು (114), ದಕ್ಷಿಣ ಕನ್ನಡ (68), ಹಾಸನ (65), ಬೀದರ್ (63), ಧಾರವಾಡ (60) ಜಿಲ್ಲೆಯಲ್ಲಿ ಹೊಸ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾಗಿವೆ.

ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆಯೂ ಮತ್ತೆ ಏರಿಕೆ ಕಂಡಿದ್ದು, ಬೆಂಗಳೂರಿನಲ್ಲಿ 7, ಮೈಸೂರಿನಲ್ಲಿ ಇಬ್ಬರು, ಉಡುಪಿ, ತುಮಕೂರು ಹಾಗೂ ಕಲಬುರ್ಗಿಯಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮೃತರ ಸಂಖ್ಯೆ 12,504ಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 23,037ಕ್ಕೆ ತಲುಪಿದೆ. 204 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಸೋಂಕಿತರಲ್ಲಿ 1,285 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.51 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.06 ಲಕ್ಷ ಮಂದಿಗೆ ಪರೀಕ್ಷೆ ನಡೆಸಲಾಗಿದೆ. ಈವರೆಗೆ 33.83 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 5.51 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದಿದ್ದು, ಇವರಲ್ಲಿ 3.36 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ 16.87 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 45 ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 5.04 ಲಕ್ಷ ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.



ಕುತೂಹಲ ಕೆರಳಿಸಿದ ಶರದ್ ಪವಾರ್– ಅಮಿತ್ ಶಾ ಭೇಟಿ

ಒಂದನೇ ಪುಟದಿಂದ

ಮಹಾರಾಷ್ಟ್ರದ ಶಿವಸೇನಾ ನೇತೃತ್ವದ ಮಹಾವಿಕಾಸ್ ಅಘಾಡಿ ಸರ್ಕಾರದಲ್ಲಿ ಎನ್‌ಸಿಪಿ ಮತ್ತು ಕಾಂಗ್ರೆಸ್ ಇವೆ.

ಆಕಸ್ಮಿಕ ಗೃಹ ಸಚಿವ: ಮಹಾರಾಷ್ಟ್ರದ ಗೃಹ ಸಚಿವ ಅನಿಲ್ ದೇಶಮುಖ್ ಅವರು ಆಕಸ್ಮಿಕವಾಗಿ ಆ ಹುದ್ದೆ ಪಡೆದವರು. ಎನ್‌ಸಿಪಿ ಮುಖಂಡರಾದ ಜಯಂತ್ ಪಾಟೀಲ್ ಮತ್ತು ದಿಲೀಪ್ ವಾಲ್ಸೆ ಪಾಟೀಲ್ ಅವರು ಈ ಹುದ್ದೆ ನಿರಾಕರಿಸಿದರು. ಹಾಗಾಗಿ, ಪವಾರ್ ಅವರು ಈ ಹುದ್ದೆಯನ್ನು ದೇಶಮುಖ್‌ಗೆ ನೀಡಿದರು ಎಂದು ಶಿವಸೇನಾ ಸಂಸದ ಸಂಜಯ್ ರಾವುತ್ ಹೇಳಿದ್ದಾರೆ.

ತಿಂಗಳಿಗೆ ₹100 ಕೋಟಿ ಸಂಗ್ರಹಿಸುವ ಹೊಣೆಯನ್ನು ದೇಶಮುಖ್ ಅವರು ಪೊಲೀಸ್ ಅಧಿಕಾರಿ ಸಚಿನ್ ವಾಜೆಗೆ ವಹಿಸಿದ್ದರು ಎಂದು ಮುಂಬೈನ ಮಾಜಿ ಪೊಲೀಸ್ ಆಯುಕ್ತ ಪರಮ್‌ವೀರ್ ಸಿಂಗ್ ಇತ್ತೀಚೆಗೆ ಆರೋಪಿಸಿದ್ದರು.

‘ಸಚಿನ್ ವಾಜೆಯಂತಹ ಕಿರಿಯ ಅಧಿಕಾರಿಯು ಮುಂಬೈ ಪೊಲೀಸ್ ಕಮಿಷನರ್ ಕಚೇರಿಯಿಂದಲೇ ಸುಲಿಗೆ ದಂಧೆ ನಡೆಸುತ್ತಿದ್ದರು ಎಂಬುದು ಗೃಹ ಸಚಿವರಿಗೆ ಏಕೆ ಗೊತ್ತಾಗಲಿಲ್ಲ’ ಎಂದು ಶಿವಸೇನಾದ ಮುಖವಾಣಿ ‘ಸಾಮ್ನಾ’ದ ತಮ್ಮ ಅಂಕಣದಲ್ಲಿ ರಾವುತ್ ಪ್ರಶ್ನಿಸಿದ್ದಾರೆ.

‘ದೇಶಮುಖ್ ಅವರು ಕೆಲವು ಪೊಲೀಸ್ ಅಧಿಕಾರಿಗಳ ಜತೆಗೆ ಅನಗತ್ಯ ಕಿರಿಕಿರಿ ಮಾಡಿಕೊಂಡಿದ್ದಾರೆ. ಶಂಕಾಸ್ಪದ ಅಧಿಕಾರಿಗಳೇ ಸುತ್ತಲು ಇದ್ದರೆ ಗೃಹ ಸಚಿವರು ಸರಿಯಾಗಿ ಕೆಲಸ ಮಾಡುವುದು ಸಾಧ್ಯವಿಲ್ಲ’ ಎಂದೂ ಅಂಕಣದಲ್ಲಿ ಹೇಳಲಾಗಿದೆ.

‘ಗೃಹ ಸಚಿವ ಹುದ್ದೆಯಲ್ಲಿ ಇರುವವರು ಕಡಿಮೆ ಮಾತಾಡಬೇಕು. ಕ್ಯಾಮೆರಾ ಮುಂದೆ ಬರುವುದು ಮತ್ತು ತನಿಖೆಗೆ ಆದೇಶಿಸುವುದು ಅವರ ಕೆಲಸ ಅಲ್ಲ. ಸೆಲ್ಯೂಟ್ ಸ್ವೀಕರಿಸುವುದು ಮಾತ್ರ ಗೃಹ ಸಚಿವರ ಕೆಲಸ ಅಲ್ಲ. ಅವರು ಬಲವಾದ ನಾಯಕತ್ವ ಒದಗಿಸಬೇಕು. ಬಲವಾದ ನಾಯಕತ್ವಕ್ಕೆ ಪ್ರಾಮಾಣಿಕತೆ ಬೇಕು ಎಂಬುದನ್ನು ಮರೆಯಲು ಸಾಧ್ಯವೇ’ ಎಂದೂ ರಾವುತ್ ಪ್ರಶ್ನಿಸಿದ್ದಾರೆ.

ಮಹಾರಾಷ್ಟ್ರ: ಲಾಕ್‌ಡೌನ್ ಸಾಧ್ಯತೆ

ಮುಂಬೈ (ಪಿಟಿಐ): ರಾಜ್ಯ ಕೋವಿಡ್–19 ಕಾರ್ಯಪಡೆಯ ಶಿಫಾರಸಿನ ಅನ್ವಯ ಆರ್ಥಿಕತೆಯ ಮೇಲೆ ಕನಿಷ್ಠ ಪರಿಣಾಮ ಬೀರುವಂತಹ ಲಾಕ್‌ಡೌನ್ ಅನುಷ್ಠಾನಕ್ಕೆ ಯೋಜನೆಯನ್ನು ಸಿದ್ಧಪಡಿಸುವಂತೆ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಭಾನುವಾರ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಮುಖ್ಯಮಂತ್ರಿ ಅವರು, ಆರೋಗ್ಯ ಸಚಿವ ರಾಜೇಶ್ ಟೋಪೆ ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಕೋವಿಡ್ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಮೀಸಲಿಟ್ಟಿರುವ ಹಾಸಿಗೆ, ಕೃತಕ ಆಮ್ಲಜನಕ ವ್ಯವಸ್ಥೆ, ಔಷಧಿ ಮತ್ತು ಇತರ ಮೂಲ ಸೌಕರ್ಯಗಳ ಕುರಿತು ಸಭೆಯಲ್ಲಿ ಮುಖ್ಯಮಂತ್ರಿ ಪರಿಶೀಲನೆ ನಡೆಸಿದರು.

ಲಾಕ್‌ಡೌನ್ ಘೋಷಿಸಿದ ನಂತರ ಜನರಲ್ಲಿ ಯಾವುದೇ ರೀತಿಯ ಗೊಂದಲಗಳು ಉಂಟಾಗಬಾರದು. ಈ ಸಂಬಂಧ, ಅಧಿಕಾರಿಗಳು ವಿವರವಾದ ಯೋಜನೆ ಸಿದ್ಧಪಡಿಸುವಂತೆ ಮುಖ್ಯಮಂತ್ರಿ ತಿಳಿಸಿದ್ದಾರೆ.

‘ಮುಂದಿನ 24 ಗಂಟೆಗಳಲ್ಲಿ ರಾಜ್ಯದಲ್ಲಿ 40 ಸಾವಿರ ಹೊಸ ಸೋಂಕು ಪ್ರಕರಣಗಳು ವರದಿಯಾಗುವ ಸಾಧ್ಯತೆಯಿದೆ’ ಎಂದು ಕೋವಿಡ್ ಕಾರ್ಯಪಡೆ ಕಳವಳ ವ್ಯಕ್ತಪಡಿಸಿದೆ.

‘2020ರ ಸೆಪ್ಟೆಂಬರ್ ತಿಂಗಳಿನಲ್ಲಿ ಒಂದೇ ದಿನದಲ್ಲಿ 24,619 ಸೋಂಕು ಪ್ರಕರಣ ವರದಿಯಾಗಿತ್ತು. ಈ ವರ್ಷ ಮಾರ್ಚ್ 27ರಂದು ರಾಜ್ಯದಲ್ಲಿ 35,726 ಹೊಸ ಪ್ರಕರಣ ವರದಿಯಾಗಿದೆ. ಮುಂದಿನ 24 ಗಂಟೆಗಳಲ್ಲಿ ಈ ಸಂಖ್ಯೆ 40,000ಕ್ಕೆ ತಲುಪಬಹುದು’ ಎಂದು ಕಾರ್ಯಪಡೆ ಸದಸ್ಯರು ತಿಳಿಸಿದ್ದಾರೆ.

ಹೊಸ ಸೋಂಕು ಪ್ರಕರಣಗಳ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಕಠಿಣವಾದ ಲಾಕ್‌ಡೌನ್ ಜಾರಿಗೆ ತರುವಂತೆ ಕಾರ್ಯಪಡೆ ಇದೇ ವೇಳೆ ಶಿಫಾರಸು ಮಾಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

★ಕೆಲಸಆದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷಿತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

★॥(ಉಚಿತ ಭವಿಷ್ಯ)॥★ ದುರ್ಗಾಅಂಜನಂ ಜ್ಯೋತಿಷ್ಯಾಲಯ ಸಂತಾನಭಾಗ್ಯ, ದಾಂಪತ್ಯ,ಪ್ರೀತಿಯಲ್ಲಿ ಮೋಸ, (ಸ್ತ್ರೀ ಪುರುಷ ವಶೀಕರಣ) ಸಮಸ್ಯೆ ಏನೇಯಿರಲಿ ಕ್ಷಣಮಾತ್ರದಲ್ಲಿ ಪರಿಹಾರ. 8197357241

ವಶೀಕರಣ ಮಾಂತ್ರಿಕರು, ಪಂಚವಟಿರುದ್ರಾ ದೇವಿಯ ಪವಾಡ ಶಕ್ತಿಗಳಿಂದ ಸ್ತ್ರೀ, ಪುರುಷ ವಶೀಕರಣ, ಶತ್ರುನಾಶ, ಸಾಲಬಾಧೆ, ವ್ಯವಹಾರ, ದಾಂಪತ್ಯ. ಕೇವಲ 1 ಗಂಟೆಯಲ್ಲಿ ಪರಿಹಾರ. 9148244231

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ಉದ್ಯೋಗಾವಕಾಶ

General

ಕಂಪನಿಗಳಿಗೆ ಬೇಕಾಗಿದ್ದಾರೆ. VIDEOCON, ಟಯೋಟ, TVS ಬ್ರಿಟಾನಿಯಾಗಳಿಗೆ SSLC, ITI ನವರು, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 9611715755

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9916016092

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಕೆಲಸದ ಅನುಭವ ಬೇಕಾಗಿಲ್ಲ SSLC ಮೇಲ್ಪಟ್ಟ ಯಾವುದೆ Degree Pass/Fail ಆದಂತಹ ಯುವಕ/ಯುವತಿಯರಿಗೆ ನೇರನೇಮಕಾತಿ ಉಚಿತ ವಸತಿಯೊಂದಿಗೆ 20000-30000/. ಗ್ರಾಮೀಣ ಅಭ್ಯರ್ಥಿಗಳಿಗೆ ಆದ್ಯತೆ ಸ್ನೇಹ: 7483145274, 8550858973

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಮೂಲಕ ಗಳಿಸಿ 15,000-25,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9972387417, 9844978728

Wanted

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಕೆಲಸಕ್ಕೆ ಬೇಕಾಗಿದ್ದಾರೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ + OT 15,800-86,000 8884054160, 9739544856 .

ಫೀಲ್ಡ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಕೆಲಸ ಬೆಂಗಳೂರಿನಲ್ಲಿ. ಎಸ್.ಎಸ್.ಎಲ್.ಸಿ ಆದವರು ಊಟ ವಸತಿ ಸೌಲಭ್ಯವಿದೆ. 9513668615, 8073250084

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 16.04.2021,18.05.2021 23ದಿನಗಳು ಈಶಾನ್ಯ ಭಾರತದ ರಾಜ್ಯಗಳ(ಸೆವೆನ್‌ಸಿಸ್ಟರ್ಸ) ಪ್ರವಾಸ.16.04.2021, 08.05.2021,18.05.2021 12ದಿನಗಳು ಗೌಹಾತಿ,ಕಾಜಿರಂಗ, ಶಿಲ್ಲಾಂಗ್,ಬೊಂಡಿಲಾ,ತವಾಂಗ್, ಚಿರಾಪುಂಜಿ.,26.04.2021, 30.05.2021 12ದಿನಗಳು ದೀಮಾಪುರಿ,ಕೊಹಿಮಾ, ಇಂಪಾಲ್,ಐಜಾಲ್, ಉನಕೋಟಿ,ಅಗರ್ತಲಾ, ಮಾತಬರಿ.,08.05.2021 8ದಿನಗಳು ಗ್ಯಾಂಗ್‌ಟಕ್, ಡಾರ್ಜಲಿಂಗ್,ಮಿರಿಕ್,ನಾಂಚಿ, ಲಾಚುಂಗ್,.05.06.2021 10ದಿನಗಳು ದೆಹಲಿ, ಸಿಮ್ಲಾ, ಕುಲುಮನಾಲಿ, 5ದೇವಿಯರು, ವೈಷ್ಣೋದೇವಿ,ಅಮೃತಸರ್, ವಾಘಗಡಿ,ಕುರುಕ್ಷೇತ್ರ. 9743351212/ 9902050065/ 9206979202

02.05.2021, 14.05.2021, 04.06.2021,04.07.2021 ರಿಂದ 14/20/27 ದಿನಗಳ ಕಾಶಿ,ಗಯಾ, ಪೂರಿಜಗನ್ನಾಥ್, ಪ್ರಯಾಗ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯುಮುನೋತ್ರಿ, ವೈಷ್ಣೋದೇವಿ, ದೆಹಲಿ/14 ದಿನಗಳ ಮುಕ್ತಿನಾಥ್, ನೇಪಾಳ, ಪೊಖ್ರಾ,ಜನಕಪುರಿ, ನೈಮಿಶಾರಣ್ಯ, ಘೋರಕ್-ಪುರ್. 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

19-4-2021 ಮಧ್ಯ ಪ್ರದೇಶ, ಗುಜರಾತ್, ರಾಜಸ್ತಾನ 17 ದಿನಗಳ ಪ್ರವಾಸ NGS Package Tours, Bangalore +91 7975488469

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನಿಶ್ಚಿಂತೆಯ ನಿವೃತ್ತಿಗೆ ಹಣ ಉಳಿಸಿ

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಮನೆ ಕಟ್ಟಬೇಕು, ಮಕ್ಕಳ ಓದಿಗೆ ಹಣ ಕೂಡಿಡಬೇಕು, ಮದುವೆ ಖರ್ಚಿಗೆ ಈಗಲೇ ತಯಾರಿ ಮಾಡಿಕೊಳ್ಳಬೇಕು, ಮಗಳಿಗೊಂದು ಹೊಸ ಕಾರು ತಗೋಬೇಕು... ಹೀಗೆ ಜೀವನಪೂರ್ತಿ ಪ್ರೀತಿ ಪಾತ್ರರ ಏಳ್ಗೆಗೆ ಯೋಜನೆ ರೂಪಿಸುವ ಮನೆಯ ಹಿರಿಯರು ತಮ್ಮ ನಿವೃತ್ತಿ ಬದುಕಿಗಾಗಿ ಹಣ ಉಳಿಸುವುದನ್ನು ಕಡೆಗಣಿಸುತ್ತಾರೆ. ನಿವೃತ್ತಿ ಯೋಜನೆ ಯಾವಾಗ ಆರಂಭಿಸಬೇಕು, ನಿವೃತ್ತಿಗೆ ಎಷ್ಟು ಹಣ ಬೇಕು ಎನ್ನುವುದರ ಅಂದಾಜು ಕೂಡ ಅವರಿಗಿರುವುದಿಲ್ಲ. ನೆಮ್ಮದಿಯ ನಿವೃತ್ತಿಗಾಗಿ ಪ್ರತಿಯೊಬ್ಬರೂ ಹೇಗೆ ತಯಾರಾಗಬೇಕು ಎನ್ನುವ ಮಾಹಿತಿ ಇಲ್ಲಿದೆ.

ಇರುವೆ–ಮಿಡತೆಯ ಕಥೆ ಮತ್ತು ಹಣಕಾಸು ಪಾಠ: ಇರುವೆ ಮತ್ತು ಮಿಡತೆಯ ಕಥೆಯನ್ನು ನೀವು ಕೇಳಿರಬಹುದು. ಈ ದೃಷ್ಟಾಂತದಲ್ಲಿ ಹಣಕಾಸು ನಿರ್ವಹಣೆಯ ಪಾಠವೊಂದಿದೆ. ವಸಂತ ಕಾಲದಲ್ಲಿ ಸ್ವಲ್ಪವೂ ಸಮಯ ವ್ಯರ್ಥ ಮಾಡದೆ ಇರುವೆಯು ಹಗಲಿರುಳು ಬೆವರು ಸುರಿಸಿ ಚಳಿಗಾಲಕ್ಕೆಂದು ಆಹಾರವನ್ನು ಸಂಗ್ರಹಿಸುತ್ತಿದ್ದರೆ ಇತ್ತ ಮಿಡತೆಯು ನಾಳೆಯ ಚಿಂತೆ ಕಿಂಚಿತ್ತೂ ಇಲ್ಲದೆ ಸಮಯ ವ್ಯರ್ಥ ಮಾಡುತ್ತಿರುತ್ತದೆ. ಅಷ್ಟರಲ್ಲಿ ಚಳಿಗಾಲ ಶುರುವಾಗುತ್ತದೆ. ಮಿಡತೆ ನೋಡುತ್ತದೆ, ಅದರ ಕಣಜ ಖಾಲಿ!

ಮಿಡತೆ ಇರುವೆಯ ಬಳಿಗೆ ಹೋಗಿ ಆಹಾರ ಬೇಡುತ್ತದೆ. 'ಇಡೀ ವಸಂತ ಕಾಲ ಏನು ಮಾಡಿದೆ ಗೆಳೆಯಾ' ಎಂದು ಇರುವೆ ಕೇಳುತ್ತದೆ. 'ಮನಸಾರೆ ಹಾಡಿದೆ, ಕುಣಿದೆ, ಸಂತೋಷಪಟ್ಟೆ' ಎಂದು ಮಿಡತೆ ಹೇಳುತ್ತದೆ. 'ಹೋಗ್ಹೋಗು, ಅದನ್ನೇ ಮುಂದುವರಿಸು' ಎಂದು ಇರುವೆ ಪ್ರತಿಕ್ರಿಯಿಸುತ್ತದೆ. ಕಷ್ಟಪಟ್ಟು ಉಳಿತಾಯ ಮಾಡಿದ ಇರುವೆ ಚಳಿಗಾಲದಲ್ಲಿ ನೆಮ್ಮದಿಯ ಜೀವನ ನಡೆಸುತ್ತದೆ. ಮೋಜು–ಮಸ್ತಿ ಮಾಡಿದ ಮಿಡತೆ ಆಹಾರ ಸಿಗದೆ ಚಳಿಗೆ ಮರಗಟ್ಟಿ ಸಾಯುತ್ತದೆ. ಭವಿಷ್ಯದ ಖರ್ಚುಗಳಿಗೆ ನಾವು ಈಗಲೇ ಉಳಿತಾಯ ಮಾಡಬೇಕು ಎನ್ನುವ ಪಾಠವನ್ನು ಈ ದೃಷ್ಟಾಂತ ಹೇಳುತ್ತದೆ.

ನಿವೃತ್ತಿಗೆ ಯಾವಾಗ ಯೋಜನೆ ರೂಪಿಸಬೇಕು?: ಕೆಲಸದಿಂದ ನಿವೃತ್ತಿಯಾಗುವುದು 60 ವರ್ಷ ವಯಸ್ಸಿಗೆ. 40–45 ವರ್ಷದ ವೇಳೆಗೆ ನಿವೃತ್ತಿ ಯೋಜನೆ ರೂಪಿಸಿದರೆ ಸಾಕು ಎಂಬ ಲೆಕ್ಕಾಚಾರ ಬಹುತೇಕರಲ್ಲಿದೆ. ಆದರೆ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ, ನಿವೃತ್ತಿಗಾಗಿ ಉಳಿತಾಯ ಮಾಡಲು ಶುರು ಮಾಡಬೇಕು. ಮೊದಲ ವೇತನ ಸಿಕ್ಕ ದಿನದಿಂದಲೇ ನಿವೃತ್ತಿ ಯೋಜನೆಗೆ ಹೂಡಿಕೆ ಆರಂಭಿಸಿದರೆ ಒಳಿತು. ಬೇಗ ಹೂಡಿಕೆ ಮಾಡಿದರೆ ಬಡ್ಡಿಯ ಮೇಲೆ ಬಡ್ಡಿ ಬೆಳೆದು (ಪವರ್ ಆಫ್ ಕಾಂಪೌಂಡಿಂಗ್) ಅದರ ಲಾಭ ನಿಮಗೆ ದಕ್ಕುತ್ತದೆ.

ನಿಮಗಿದು ಗೊತ್ತಿರಲಿ: ಭಾರತೀಯರ ಸರಾಸರಿ ಜೀವಿತಾವಧಿ ಸುಮಾರು 70 ವರ್ಷಗಳಷ್ಟಿರುವ ಕಾರಣ ನಿವೃತ್ತಿ ಯೋಜನೆ ಅತ್ಯಗತ್ಯ. ನಿರ್ದಿಷ್ಟ ಮೊತ್ತವನ್ನು ಪ್ರತಿ ತಿಂಗಳು ವ್ಯವಸ್ಥಿತವಾಗಿ ಹೂಡಿಕೆ ಮಾಡಿದರೆ ನೆಮ್ಮದಿಯ ನಿವೃತ್ತಿಯ ಜೀವನ ಸಾಧ್ಯ. ನಿವೃತ್ತಿ ಉದ್ದೇಶಕ್ಕೆ ಮಾಡುವ ಹೂಡಿಕೆಯನ್ನು ಮಕ್ಕಳ ಶಿಕ್ಷಣ, ಮದುವೆಯಂತಹ ಅನ್ಯ ಉದ್ದೇಶಕ್ಕೆ ಬಳಸಬಾರದು. ಹಣದುಬ್ಬರವನ್ನು ಮೀರಿ ನಿಲ್ಲುವ ಹೂಡಿಕೆಗಳಲ್ಲಿ ನಿವೃತ್ತಿಗಾಗಿ ಉಳಿತಾಯ ಮಾಡಬೇಕು.

ಮೇಲಿನ ಪಟ್ಟಿಯಲ್ಲಿ ಹೇಳಿದಂತೆ ವ್ಯಕ್ತಿಯ ಈಗಿನ ವಯಸ್ಸು 28 ವರ್ಷ. ಮಾಸಿಕವಾಗಿ ಸದ್ಯ ₹ 30 ಸಾವಿರ ಖರ್ಚು ಮಾಡುತ್ತಿದ್ದಾರೆ ಮತ್ತು ಅವರು 50ನೇ ವಯಸ್ಸಿಗೆ ನಿವೃತ್ತಿಯಾಗಲು ನಿರ್ಧರಿಸಿದ್ದಾರೆ. ನಿವೃತ್ತಿಗೆ ಇನ್ನು 22 ವರ್ಷ ಬಾಕಿ ಉಳಿದಿದೆ. ಈ ವ್ಯಕ್ತಿ ಅಂದಾಜು 75 ವರ್ಷ ಬದುಕುತ್ತಾರೆ ಎಂದು ತಿಳಿಯೋಣ. ನಿವೃತ್ತಿಯ ನಂತರದಲ್ಲೂ ಅವರ ಖರ್ಚುಗಳು ಈಗಿರುವಷ್ಟೇ, ಅಂದರೆ ಶೇ 100ರಷ್ಟು, ಇರುತ್ತವೆ ಎಂದು ಲೆಕ್ಕಚಾರ ಮಾಡೋಣ.

ಇದೇ ಅಂದಾಜಿನಲ್ಲಿ ಹೋದರೆ ನಿವೃತ್ತಿಯ ನಂತರದಲ್ಲಿ ಇವರ ತಿಂಗಳ ಖರ್ಚಿಗೆ ₹ 1,32,912 ಬೇಕಾಗುತ್ತದೆ. ಅದರಂತೆ ನಿವೃತ್ತಿ ನಂತರದ 25 ವರ್ಷಗಳ ಜೀವಿತಾವಧಿಗೆ ₹ 3,14,10,218 ಬೇಕಾಗುತ್ತದೆ. ಈ ಲೆಕ್ಕಾಚಾರ ಹೇಗೆ ಬಂತು ಎಂದು ನೀವು ಕೇಳಬಹುದು. ಶೇ 7ರ ಹಣದುಬ್ಬರವನ್ನು ಇದಕ್ಕೆ ಸೇರಿಸಲಾಗಿದೆ. ಹಣದ ಸದ್ಯದ ಮೌಲ್ಯ ಮತ್ತು ಭವಿಷ್ಯದ ಮೌಲ್ಯವನ್ನು ಗಣನೆಗೆ ತೆಗೆದುಕೊಂಡಾಗ ಮೇಲಿನ ಅಂದಾಜು ಬರುತ್ತದೆ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ನಿವೃತ್ತಿ ಯೋಜನೆಗೆ ಎಷ್ಟು ಹಣ ಬೇಕು?

ಈಗಿನ ವಯಸ್ಸು	28 ವರ್ಷಗಳು
ಮಾಸಿಕ ಖರ್ಚು	₹ 30,000
ನಿವೃತ್ತಿ ವಯಸ್ಸು	50 ವರ್ಷ
ನಿವೃತ್ತಿಯಾಗಲು ಬಾಕಿ ಇರುವ ಸಮಯ	22 ವರ್ಷ
ಅಂದಾಜು ಜೀವಿತಾವಧಿ	75 ವರ್ಷ
ನಿವೃತ್ತಿಯ ನಂತರದ ಶೇಕಡಾವಾರು ವೆಚ್ಚ	ಶೇ 100
ಹಣದುಬ್ಬರ ದರ	ಶೇ 7
ನಿವೃತ್ತಿಯ ನಂತರದಲ್ಲಿ ಮಾಸಿಕ ವೆಚ್ಚಗಳ ಮೌಲ್ಯ	₹ 1,32,912
ನಿವೃತ್ತಿ ನಂತರದಲ್ಲಿ ವ್ಯಕ್ತಿಯ ಜೀವಿತಾವಧಿ	25 ವರ್ಷ
ಹೂಡಿಕೆ ಮೇಲಿನ ಗಳಿಕೆ	ಶೇ 9
ನಿವೃತ್ತಿ ಜೀವನಕ್ಕಾಗಿ ಮಾಡಬೇಕಿರುವ ಹೂಡಿಕೆ	₹ 3,14,10,218

(30ಗಳಿಗೆ ಈಗ ₹ 30 ಸಾವಿರ ಖರ್ಚು ಮಾಡುತ್ತಿದ್ದರೆ, ನಿವೃತ್ತಿ ಜೀವನಕ್ಕೆ ಬೇಕು 3 ಕೋಟಿ 14 ಲಕ್ಷ)

ಷೇರುಪೇಟೆಯಲ್ಲಿ ಅನಿಶ್ಚಿತತೆಯ ಓಟ

ಷೇರುಪೇಟೆ ಒತ್ತಡಕ್ಕೆ ಸಿಲುಕಿದ್ದು ಸತತ ಎರಡನೆಯ ವಾರ ಸೂಚ್ಯಂಕಗಳು ಕುಸಿತ ಕಂಡಿವೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಹಿಂಜರಿಕೆ, ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳದಿಂದ ಆರ್ಥಿಕ ಚೇತರಿಕೆಯಲ್ಲಿ ವಿಳಂಬ ಸಾಧ್ಯತೆ ಸೇರಿ ಹಲವು ಕಾರಣಗಳಿಂದಾಗಿ ಸೂಚ್ಯಂಕಗಳು ಕುಸಿದಿವೆ. 49,008 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ಶೇ 1.70ರಷ್ಟು ಕುಸಿದಿದ್ದರೆ, ನಿಫ್ಟಿ 14,507 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿ ಶೇ 1.6ರಷ್ಟು ಇಳಿಕೆ ದಾಖಲಿಸಿದೆ.

ವಲಯವಾರು ಪ್ರಗತಿ ನೋಡಿದಾಗ, ನಿಫ್ಟಿ ಫಾರ್ಮಾ ಮತ್ತು ಲೋಹ ವಲಯ ಹೊರತುಪಡಿಸಿ ಉಳಿದ ವಲಯಗಳು ಕುಸಿತ ದಾಖಲಿಸಿವೆ. ಮಾಧ್ಯಮ ವಲಯ ಶೇ 6.6ರಷ್ಟು, ವಾಹನ ವಲಯ ಶೇ 4ರಷ್ಟು, ನಿಫ್ಟಿ ಎನರ್ಜಿ ಶೇ 4ರಷ್ಟು, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 3.3ರಷ್ಟು, ನಿಫ್ಟಿ ಬ್ಯಾಂಕ್ ಶೇ 2.5ರಷ್ಟು ತಗ್ಗಿವೆ. ಫಾರ್ಮಾ ವಲಯ ಶೇ 2ರಷ್ಟು ಗಳಿಕೆ ಕಂಡಿದೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಟಾಟಾ ಸ್ಟೀಲ್ ಶೇ 4.5ರಷ್ಟು, ಶ್ರೀ ಸಿಮೆಂಟ್ಸ್ ಶೇ 4ರಷ್ಟು, ಏಷ್ಯನ್ ಪೇಂಟ್ಸ್ ಶೇ 4ರಷ್ಟು ಮತ್ತು ಸಿಪ್ಲಾ ಶೇ 3.5 ರಷ್ಟು ಗಳಿಸಿಕೊಂಡಿವೆ. ಐಒಸಿ ಶೇ 8ರಷ್ಟು, ಒಎನ್‌ಜಿಸಿ ಶೇ 8ರಷ್ಟು, ಯುಪಿಎಲ್ ಶೇ 7ರಷ್ಟು ಮತ್ತು ಪವರ್ ಗ್ರಿಡ್ ಶೇ 6.5ರಷ್ಟು ತಗ್ಗಿವೆ.

ಮುನ್ನೋಟ: ಈ ವರ್ಷದ ಜನವರಿಯಲ್ಲಿ 13,600 ಅಂಶಗಳಲ್ಲಿ ಇದ್ದ ನಿಫ್ಟಿ ಬಜೆಟ್ ಬಳಿಕ 15,431 ಅಂಶಗಳಿಗೆ ಏರಿಕೆಯಾಗಿ ಶೇ 13ರಷ್ಟು ಜಿಗಿತ ಕಂಡಿತ್ತು. ಆದರೆ ಈಗ ಶೇ 6ರಷ್ಟು ಕುಸಿತ ಕಂಡಿದೆ. ಮಾರುಕಟ್ಟೆಯ ಏರಿಳಿತ ಸದ್ಯ ಎಣಿಕೆಗೆ ಸಿಗದ ಸ್ಥಿತಿಯಲ್ಲಿದೆ. ಡಾಲರ್ ಮೌಲ್ಯ ಹೆಚ್ಚಾದರೆ ಅಭಿವೃದ್ಧಿಶೀಲ ರಾಷ್ಟ್ರಗಳ ಮಾರುಕಟ್ಟೆಗೆ ಹೊಡೆತ ಬೀಳಲಿದೆ. ಇದರ ಜತೆಗೆ ಬಾಂಡ್ ಬೆಲೆ ಏರಿಳಿತವೂ ಸೂಚ್ಯಂಕಗಳ ಗತಿ ನಿರ್ಧರಿಸಲಿದೆ. ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳು ಹೂಡಿಕೆದಾರರನ್ನು ಅತಂತ್ರ ಸ್ಥಿತಿಯಲ್ಲಿಟ್ಟಿವೆ.

ಏಪ್ರಿಲ್ 1 ರಿಂದ ಹಣಕಾಸು ವರ್ಷ ಆರಂಭಗೊಳುವುದರಿಂದ ಅದಕ್ಕೆ ಮಾರುಕಟ್ಟೆ ಹೇಗೆ ಪ್ರತಿಕ್ರಿಯಿಸಲಿದೆ ಎನ್ನುವುದನ್ನು ಅರಿಯಲು ಹೂಡಿಕೆದಾರರು ಕಾತರರಾಗಿದ್ದಾರೆ. ಮಾರ್ಚ್ 29ರಂದು ಹೋಳಿ ಮತ್ತು ಏಪ್ರಿಲ್ 2ರಂದು ಗುಡ್ ಫ್ರೈಡೇ ಪ್ರಯುಕ್ತ ಮಾರುಕಟ್ಟೆಗೆ ರಜೆ ಇರಲಿದೆ.

ಉದ್ಯಮ ವಲಯಕ್ಕೆ ಮತ್ತೆ ಕೋವಿಡ್ ಸವಾಲು

● ವಿಜಯ್ ಜೋಷಿ

ಮುಖ್ಯಾಂಶಗಳು

- ಪ್ರವಾಸ, ಆತಿಥ್ಯ, ಮನರಂಜನೆ ಉದ್ಯಮಕ್ಕೆ ಸಂಕಷ್ಟ?
- ಸದ್ಯಕ್ಕೆ ಸಮಸ್ಯೆ ಇಲ್ಲವಾದರೂ, ಮುಂದೆ ಅಪಾಯ ಸಾಧ್ಯತೆ

ಕೊರೊನಾ ಎರಡನೇ ಅಲೆ ಶುರುವಾದರೆ ಎರಡರಿಂದ ಮೂರು ತಿಂಗಳ ಅವಧಿಗೆ ಆರ್ಥಿಕ ಬೆಳವಣಿಗೆ ಸ್ಥಗಿತವಾಗುವ ಅಪಾಯ ಇದೆ

ಪೆರಿಕಲ್ ಎಂ. ಸುಂದರ್,
ಎಫ್‌ಕೆಸಿಸಿಐ ಅಧ್ಯಕ್ಷ

ಬೆಂಗಳೂರು: ಕೋವಿಡ್–19 ಪ್ರಕರಣಗಳ ಸಂಖ್ಯೆಯು ಮತ್ತೆ ಹೆಚ್ಚಳವಾಗುತ್ತಿರುವುದು ಆರ್ಥಿಕ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಗ್ರಾಹಕರು ಮಾರುಕಟ್ಟೆಗೆ ಬಂದು ವಸ್ತುಗಳ ಖರೀದಿಯಲ್ಲಿ ತೊಡಗುವ ಪ್ರಮಾಣ ತುಸು ತಗ್ಗಿದೆ. ಕೋವಿಡ್ ಎರಡನೆಯ ಅಲೆಯು ಆರ್ಥಿಕ ಬೆಳವಣಿಗೆಯನ್ನು ಕನಿಷ್ಠ ಎರಡು ತಿಂಗಳ ಅವಧಿಗೆ ಸ್ಥಗಿತದ ಸ್ಥಿತಿಗೆ ಒಯ್ಯಬಹುದು ಎಂಬ ಆತಂಕವನ್ನು ಉದ್ಯಮ ವಲಯ ವ್ಯಕ್ತಪಡಿಸಿದೆ.

ಕೋವಿಡ್ ಪ್ರಕರಣಗಳು ಕಡಿಮೆ ಸಂಖ್ಯೆಯಲ್ಲಿ ವರದಿಯಾಗುತ್ತಿದ್ದಾಗ ಚೇತರಿಕೆಯ ಕಡೆ ಮುಖ ಮಾಡಿದ್ದ ಪ್ರವಾಸೋದ್ಯಮದ ಮೇಲೆ ಈಗಿನ ಸಂದರ್ಭವು ಕೆಟ್ಟ ಪರಿಣಾಮ ಉಂಟು ಮಾಡಲಿದೆ ಎಂದು ಉದ್ಯಮಿಗಳು ಹೇಳಿದ್ದಾರೆ.

'ಮತ್ತೆ ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳು ತಯಾರಿಕಾ ವಲಯದ ಮೇಲೆ ಹೆಚ್ಚಿನ ಪರಿಣಾಮವನ್ನು ಇದುವರೆಗೆ ಬೀರಿಲ್ಲ. ಆದರೆ, ಜವಳಿ ಹಾಗೂ ಗಾರ್ಮೆಂಟ್ಸ್ ಉದ್ಯಮಗಳ ಮೇಲೆ ತುಸು ದುಷ್ಪರಿಣಾಮ ಉಂಟಾಗಿದೆ. ಎರಡನೆಯ ಅಲೆಯು ಪ್ರವಾಸೋದ್ಯಮಕ್ಕೆ ಹೆಚ್ಚಿನ ಅಪಾಯ ತಂದೊಡ್ಡುವ ಭೀತಿ ಇದೆ' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಪೆರಿಕಲ್ ಎಂ. ಸುಂದರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋವಿಡ್‌ನ ಎರಡನೆಯ ಅಲೆಯು ಪ್ರವಾಸ, ಆತಿಥ್ಯ, ಮನರಂಜನೆ ಉದ್ದಿಮೆಗಳ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುವುದು ಖಂಡಿತ' ಎಂದು ಎಫ್‌ಕೆಸಿಸಿಐನ ಮಾಜಿ ಅಧ್ಯಕ್ಷ, ಉದ್ಯಮಿ ಡಿ. ಮುರಳೀಧರ ಹೇಳಿದರು. 'ಈ ವಲಯದ ಉದ್ದಿಮೆಗಳು ಈಗಾಗಲೇ ನಷ್ಟ ಅನುಭವಿಸಿವೆ. ಮುಂದೆ ಎದುರಾಗಬಹುದಾದ ನಷ್ಟವು ಭಾರಿ ಪ್ರಮಾಣದಲ್ಲಿ ಇರಲಿದೆ' ಎಂಬ ಅಭಿಪ್ರಾಯ ಅವರದು.

ಆತಿಥ್ಯ ಉದ್ಯಮದ ಸೇವೆಗಳನ್ನು ಪಡೆಯಲು ಬರುವ ಗ್ರಾಹಕರ ಸಂಖ್ಯೆ ಒಂದು ವಾರದಿಂದ ಕಡಿಮೆ ಆಗುತ್ತಿರುವುದನ್ನು ತಾವು ಖುದ್ದಾಗಿ ಗಮನಿಸಿರುವುದಾಗಿ ಮುರಳೀಧರ ತಿಳಿಸಿದರು.

'ಜನ ಮಾರುಕಟ್ಟೆಗೆ ಬರುವುದು ಕಡಿಮೆ ಆಗಿದೆ' ಎಂದು ಉದ್ಯಮಿ ಪಿ.ಎಚ್. ರಾಜಪುರೋಹಿತ್ ಹೇಳಿದರು.

ಸೆಪ್ಟೆಂಬರ್–ಅಕ್ಟೋಬರ್ ನಂತರ ಆರ್ಥಿಕ ಚಟುವಟಿಕೆಗಳು ಸುಧಾರಣೆಯ ಹಾದಿಯಲ್ಲಿವೆ. ಈಗ ಹೆಚ್ಚುತ್ತಿರುವ ಪ್ರಕರಣಗಳ ಪರಿಣಾಮವು ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಉತ್ಪನ್ನಗಳ (ಎಫ್‌ಎಂಸಿಜಿ) ಖರೀದಿದಾರರ ವರ್ತನೆಯಲ್ಲಿ ಬದಲಾವಣೆ ತಂದಿಲ್ಲ. ಬೆಂಗಳೂರಿಗೆ ತಾಗಿಕೊಂಡು ಇರುವ ಜಿಲ್ಲೆಗಳಲ್ಲಿ ಕೋವಿಡ್–19 ಪ್ರಕರಣಗಳು ತೀವ್ರವಾಗಿ ಹೆಚ್ಚಳ ಆದರೆ, ಬೆಂಗಳೂರಿನಲ್ಲಿ ಬೇಡಿಕೆ ತಗ್ಗುತ್ತದೆ. ಅದು ಸಣ್ಣ ಕೈಗಾರಿಕೆಗಳ ಮೇಲೆ ದುಷ್ಪರಿಣಾಮ ಉಂಟುಮಾಡುತ್ತದೆ ಎಂದು ಎಫ್‌ಕೆಸಿಸಿಐ ತೆರಿಗೆ ಸಮಿತಿ ಅಧ್ಯಕ್ಷ ಬಿ.ಟಿ. ಮನೋಹರ್ ವಿವರಿಸಿದರು.

'ಪೆಟ್ರೋಲ್, ಡೀಸೆಲ್ ಮಾರಾಟದಿಂದ ಬರುವ ತೆರಿಗೆ ಕಡಿಮೆ ಆಗಿಲ್ಲ. ಅಂದರೆ ಜನರ ಸಂಚಾರ ಕಡಿಮೆಯಾಗಿಲ್ಲ. ಎಫ್‌ಎಂಸಿಜಿ ಬಳಕೆ ಕಡಿಮೆ ಆಗಿಲ್ಲ. ನೌಕರ ವರ್ಗಕ್ಕೆ ಸಂಬಳ ಕಾಲಕಾಲಕ್ಕೆ ಪಾವತಿ ಆಗುತ್ತಿದೆ. ಹೀಗಾಗಿ, ತಕ್ಷಣಕ್ಕೆ ಸಮಸ್ಯೆ ಇಲ್ಲ. ಆದರೆ, ಪ್ರಕರಣಗಳು ಹೆಚ್ಚಾಗುತ್ತಿರುವುದನ್ನು ಕಂಡರೆ ತೊಂದರೆ ಎದುರಾಗುವ ಸಾಧ್ಯತೆ ಇರುವುದು ಖಂಡಿತ ಅನಿಸುತ್ತದೆ' ಎಂದು ಮನೋಹರ್ ಹೇಳಿದರು.

ರಘುನಾಥ ನೇಮಕ

ಸಿ. ರಘುನಾಥ

ಬೆಂಗಳೂರು: ದಿ. ಬೆಂಗಳೂರು ಸಿಟಿ ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕ ಸಿ. ರಘುನಾಥ ಅವರನ್ನು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರನ್ನಾಗಿ ಐದು ವರ್ಷಗಳ ಅವಧಿಗೆ ನೇಮಿಸಲಾಗಿದೆ ಎಂದು ಮಹಾಮಂಡಳಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹395
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹400

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹245-378
ದ್ವಿತಳಿ (ಬಿ.ವಿ)	₹253-471

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಐಪಿಒ: ₹ 31,277 ಕೋಟಿ ಬಂಡವಾಳ ಸಂಗ್ರಹ

ಐಪಿಒ ಮೂಲಕ ಬಂಡವಾಳ ಸಂಗ್ರಹ

₹31,277 ಕೋಟಿ 2020–21ರಲ್ಲಿ

₹20,352 ಕೋಟಿ 2019–20ರಲ್ಲಿ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಕಂಪನಿಗಳು ತಮ್ಮ ಷೇರುಗಳನ್ನು ಸಾರ್ವಜನಿಕ ಖರೀದಿಗೆ ಮುಕ್ತಗೊಳಿಸುವ (ಐಪಿಒ) ಮೂಲಕ ₹ 31,277 ಕೋಟಿ ಬಂಡವಾಳ ಸಂಗ್ರಹಿಸಿದ್ದು, ಕಳೆದ ಮೂರು ವರ್ಷಗಳಲ್ಲಿ ಐಪಿಒ ಮೂಲಕ ಸಂಗ್ರಹವಾಗಿರುವ ಗರಿಷ್ಠ ಬಂಡವಾಳ ಇದಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ನಗದು ಲಭ್ಯತೆ ಹೆಚ್ಚಿರುವುದು ಹಾಗೂ ದೇಶಿ ಷೇರುಪೇಟೆಗಳ ಸಕಾರಾತ್ಮಕ ಚಲನೆಯ ಕಾರಣಗಳಿಂದಾಗಿ ಈ ಪ್ರಮಾಣದಲ್ಲಿ ಬಂಡವಾಳ ಸಂಗ್ರಹ ಸಾಧ್ಯವಾಗಿದೆ. 2021–22ರಲ್ಲಿ ಇನ್ನೂ ಹೆಚ್ಚಿನ ಐಪಿಒಗಳು ಬರಲಿವೆ ಎಂದು ತಜ್ಞರು ಹೇಳಿದ್ದಾರೆ.

28 ಕಂಪನಿಗಳು ಐಪಿಒಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಒಪ್ಪಿಗೆ ಪಡೆದಿದ್ದು, ₹ 28,710 ಕೋಟಿ ಸಂಗ್ರಹಿಸಲು ಮುಂದಾಗಿವೆ ಎಂದು ಐಐಎಫ್‌ಎಲ್ ಸೆಕ್ಯುರಿಟೀಸ್‌ನ ಸಿಇಒ ಸಂದೀಪ್ ಭಾರದ್ವಾಜ್ ಹೇಳಿದ್ದಾರೆ.

ಎಲ್‌ಐಸಿ, ಎಚ್‌ಡಿಬಿ ಫೈನಾನ್ಶಿಯಲ್ ಸರ್ವಿಸಸ್, ಎನ್‌ಸಿಡಿಇಎಕ್ಸ್, ಇಎಸ್‌ಎಎಫ್ ಸ್ಮಾಲ್ ಫೈನಾನ್ಸ್‌ನ ಐಪಿಒ 2021–22ರಲ್ಲಿ ನಡೆಯಲಿವೆ ಎಂದು ಸೆಂಟ್ರಮ್ ಕ್ಯಾಪಿಟಲ್‌ನ ಇನ್‌ವೆಸ್ಟ್‌ಮೆಂಟ್ ಬ್ಯಾಂಕಿಂಗ್‌ನ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ನಾಯ್ಕ್ ತಿಳಿಸಿದ್ದಾರೆ.

ನಿಶ್ಚಿತ ಠೇವಣಿಯ (ಎಫ್.ಡಿ.) ಬಡ್ಡಿದರಗಳು ಕಡಿಮೆಯಾಗುತ್ತಿವೆ. ಈ ಕಾರಣದಿಂದಾಗಿಯೂ ಹೂಡಿಕೆದಾರರು ಎಫ್‌ಡಿಗೆ ಬದಲಾಗಿ ಷೇರುಗಳ ಖರೀದಿಗೆ ಹಣ ತೊಡಗಿಸುತ್ತಿದ್ದಾರೆ ಎಂದು ಇನ್‌ವೆಸ್ಟ್19 ಕಂಪನಿಯ ಸ್ಥಾಪಕ ಕೌಶಲೇಂದ್ರ ಸಿಂಗ್ ಸೆಂಗರ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬದರಿನಾಥ್‌ಗೆ ಕೋವಿಡ್–19

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಎಸ್. ಬದರಿನಾಥ್ ಅವರಿಗೆ ಕೋವಿಡ್–19 ಇರುವುದು ಖಚಿತವಾಗಿದೆ. ಈ ವಿಷಯವನ್ನು ಬುಧವಾರ ಅವರು ಹೇಳಿಕೊಂಡಿದ್ದು, ಸದ್ಯ ಮನೆಯಲ್ಲಿ ಪ್ರತ್ಯೇಕವಾಸದಲ್ಲಿದ್ದಾರೆ.

ಇದರೊಂದಿಗೆ ರಸ್ತೆ ಸುರಕ್ಷತಾ ವಿಶ್ವ ಟಿ20 ಸರಣಿಯಲ್ಲಿ ಆಡಿದ ಭಾರತದ ಮೂರನೇ ಆಟಗಾರನಿಗೆ ಕೋವಿಡ್ ತಗಲಿದಂತಾಗಿದೆ.

ರಾಯಪುರದಲ್ಲಿ ನಡೆದ ಟೂರ್ನಿಯಲ್ಲಿ ಇಂಡಿಯಾ ಲೆಜೆಂಡ್ಸ್ ಪರ ಆಡಿದ್ದ ಸಚಿನ್ ತೆಂಡೂಲ್ಕರ್ ಹಾಗೂ ಯೂಸುಫ್ ಪಠಾಣ್ ಅವರಿಗೂ ಕೋವಿಡ್ ಇರುವುದು ಶನಿವಾರ ದೃಢಪಟ್ಟಿತ್ತು.

ಸಾಲಮುಕ್ತ ಕಂಪನಿಯಾಗುವತ್ತ ಕಿರ್ಲೋಸ್ಕರ್ ಬ್ರದರ್ಸ್

ನವದೆಹಲಿ (ಪಿಟಿಐ): ಪಂಪ್‌ಸೆಟ್ ತಯಾರಿಕಾ ವಲಯದ ಪ್ರಮುಖ ಕಂಪನಿ ಕಿರ್ಲೋಸ್ಕರ್ ಬ್ರದರ್ಸ್ ಲಿ., ಸಾಲಮುಕ್ತವಾಗುವ ಸ್ಥಿತಿಯಲ್ಲಿದ್ದು, ದೇಶಿ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಳವಣಿಗೆಯ ಪಯಣ ಮುಂದುವರಿಸಲಿದೆ ಎಂದು ಕಂಪನಿಯ ನಿರ್ದೇಶಕ ಅಲೋಕ್ ಕಿರ್ಲೋಸ್ಕರ್ ತಿಳಿಸಿದ್ದಾರೆ.

'ಈ ವರ್ಷದ ಮಾರ್ಚ್ ಅಂತ್ಯದ ವೇಳೆಗೆ ನಾವು ಬಹುತೇಕ ಸಾಲಮುಕ್ತ ಕಂಪನಿಯಾಗಲಿದ್ದೇವೆ' ಎಂದು ಅವರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. 2019–20ನೇ ಹಣಕಾಸು ವರ್ಷದಲ್ಲಿ ಕಂಪನಿಯ ವರಮಾನ ₹ 2,097 ಕೋಟಿಗಳಷ್ಟಿತ್ತು.

ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳ

ಬಡ್ಡಿ ದರ ಯಥಾಸ್ಥಿತಿ ಸಾಧ್ಯತೆ

ಮುಂಬೈ (ಪಿಟಿಐ): ದೇಶದಲ್ಲಿ ಕೋವಿಡ್–19 ಪ್ರಕರಣಗಳು ಮತ್ತೆ ಹೆಚ್ಚಳ ಆಗುತ್ತಿರುವ ಕಾರಣದಿಂದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಡ್ಡಿ ದರಗಳಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

2021–22ನೇ ಹಣಕಾಸು ವರ್ಷದ ಮೊದಲ ದ್ವೈಮಾಸಿಕ ಸಭೆಯ ನಿರ್ಧಾರಗಳು ಏಪ್ರಿಲ್ 7ರಂದು ಪ್ರಕಟವಾಗಲಿವೆ. ಹಣದುಬ್ಬರದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದ ಆರ್‌ಬಿಐ, ಹಿಂದಿನ ಸಭೆಯಲ್ಲಿ ಬಡ್ಡಿ ದರಗಳಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿತ್ತು.

ತಜ್ಞರ ಪ್ರಕಾರ, ಆರ್‌ಬಿಐ ಹೊಂದಾಣಿಕೆಯ ನಿಲುವನ್ನು ಮುಂದುವರಿಸಲಿದೆ. ಹಣದುಬ್ಬರವನ್ನು ನಿಯಂತ್ರಿಸುವ ಗುರಿ ಇಟ್ಟುಕೊಂಡು ಬೆಳವಣಿಗೆಗೆ ವೇಗ ನೀಡಲು ಇನ್ನೂ ಹೆಚ್ಚಿನ ಸಮಯ ತೆಗೆದುಕೊಳ್ಳಲಿದೆ.

ಕೋವಿಡ್–19 ಹರಡುವುದನ್ನು ತಡೆಯಲು ಹಲವು ರಾಜ್ಯಗಳು ಇತ್ತೀಚೆಗೆ ವಿಧಿಸಿರುವ ನಿರ್ಬಂಧಗಳು ಕೈಗಾರಿಕೆಗಳ ಉತ್ಪಾದನೆಯಲ್ಲಿ ಆಗುತ್ತಿರುವ ಚೇತರಿಕೆಗೆ ಅಡ್ಡಿಯಾಗಲಿವೆ ಎಂದು ಡನ್ ಆ್ಯಂಡ್ ಬ್ರಡ್‌ಸ್ಟ್ರೀಟ್ ವರದಿ ಹೇಳಿದೆ.

ಗ್ರಾಹಕ ಹಣದುಬ್ಬರವು ಏರಿಳಿತ ಕಾಣುತ್ತಿದ್ದು, ಇನ್ನೂ ಸ್ಥಿರವಾಗಿಲ್ಲ. ಹೀಗಾಗಿ ಬಡ್ಡಿದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವ ಆಯ್ಕೆಯನ್ನು ಆರ್‌ಬಿಐ ಪರಿಗಣಿಸಬಹುದು ಎಂದು ಅನಾರ್ಕ್ ಪ್ರಾಪರ್ಟಿ ಕನ್ಸಲ್ಟಂಟ್ಸ್‌ನ ಅಧ್ಯಕ್ಷ ಅನುಜ್ ಪುರಿ ಅವರು ಹೇಳಿದ್ದಾರೆ.

ಸದ್ಯ ರೆಪೊ ದರವು ಶೇಕಡ 4ರಷ್ಟಿದ್ದು, ರಿವರ್ಸ್ ರೆಪೊ ದರವು ಶೇ 3.35ರಷ್ಟಿದೆ. ಈ ಹಿಂದೆ 2020ರ ಮೇ 22ರಂದು ಆರ್‌ಬಿಐ ರೆಪೊ ದರವನ್ನು ಶೇ 4ಕ್ಕೆ ಇಳಿಕೆ ಮಾಡಿತ್ತು. ಆ ಬಳಿಕ ಯಾವುದೇ ಬದಲಾವಣೆ ಮಾಡಿಲ್ಲ.

ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್: ಭಾರತಕ್ಕೆ ಅಗ್ರ ಸ್ಥಾನ; 15 ಒಲಿಂಪಿಕ್ ಕೋಟಾ ಲಭ್ಯ

ಪುರುಷ, ಮಹಿಳೆಯರ 'ಟ್ರ್ಯಾಪ್'ನಲ್ಲಿ ಚಿನ್ನ

ರಾಜೇಶ್ವರಿ ಕುಮಾರಿ (ಎಡ), ಮನೀಷಾ ಕೀರ್ (ಮಧ್ಯ) ಮತ್ತು ಶ್ರೇಯಸಿ ಸಿಂಗ್ –ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ಭಾರತದ ಶಾಟ್‌ಗನ್ ಶೂಟರ್‌ಗಳಾದ ಪೃಥ್ವಿರಾಜ್ ತೊಂಡೈಮನ್, ಲಕ್ಷ್ಯ ಶೆರಾನ್ ಮತ್ತು ಕೈನನ್ ಚೆನಾಯ್ ಅವರು ಭಾನುವಾರ ಮುಕ್ತಾಯಗೊಂಡ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನ ಪುರುಷರ ಟ್ರ್ಯಾಪ್ ತಂಡ ವಿಭಾಗದಲ್ಲಿ ಚಿನ್ನ ಗೆದ್ದರು. ಮಹಿಳೆಯರ ಟ್ರ್ಯಾಪ್ ವಿಭಾಗದಲ್ಲೂ ಚಿನ್ನದ ಪದಕ ಭಾರತದ ಪಾಲಾಯಿತು.

ವಿಶ್ವಕಪ್‌ನಲ್ಲಿ ಭಾರತ ಒಟ್ಟು 30 ಪದಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಸ್ಥಾನ ಗಳಿಸಿತು. 15 ಚಿನ್ನ ಮತ್ತು ಒಂಬತ್ತು ಬೆಳ್ಳಿ ಪದಕಗಳು ಭಾರತದ ಪಾಲಾದವು.

ಪುರುಷರ ವಿಭಾಗದ ಫೈನಲ್‌ನಲ್ಲಿ ಕಜಕಸ್ತಾನವನ್ನು ಭಾರತ ಮಣಿಸಿತು. ಆರಂಭದಲ್ಲಿ ಕಜಕಸ್ತಾನ 2–0ಯಿಂದ ಮುನ್ನಡೆದಿತ್ತು. ಚೇತರಿಸಿಕೊಂಡ ಭಾರತ 4–4ರ ಸಮಬಲ ಸಾಧಿಸುವಲ್ಲಿ ಯಶಸ್ವಿಯಾಯಿತು. ನಿರ್ಣಾಯಕ ಸುತ್ತಿನಲ್ಲಿ ಅಮೋಘ ಸಾಧನೆ ಮಾಡಿದ ಭಾರತ 6–4ರಲ್ಲಿ ಜಯ ಸಾಧಿಸಿತು.

ಕಜಕಸ್ತಾನದ ವಿಕ್ಟರ್ ಖಸಿನೊವ್, ಮ್ಯಾಕ್ಸಿಮ್ ಕೊಲೊಮೊಯೆಟ್ಸ್ ಮತ್ತು ಆ್ಯಂಡ್ರೆ ಮೊಗಿಲೆವ್‌ಸ್ಕಿ ಕತಾರ್‌ನ ಮೊಹಮ್ಮದ್ ಅಲ್ ರುಮೈಯಿ, ಸಯೀದ್ ಅಬುಶರೀಬ್ ಮತ್ತು ನಾಸರ್ ಅಲಿ ಅಲ್ ಹೆಮೈದಿ ಅವರನ್ನು 6–4ರಲ್ಲಿ ಮಣಿಸಿ ಕಂಚಿನ ಪದಕ ಗೆದ್ದುಕೊಂಡರು. ಗುರುವಾರ ನಡೆದ ಅರ್ಹತಾ ಸುತ್ತಿನ ಸ್ಪರ್ಧೆಯಲ್ಲಿ ಭಾರತ 494 ಸ್ಕೋರ್ ಗಳಿಸಿತ್ತು. ಕಜಕಸ್ತಾನ 489 ಸ್ಕೋರ್ ಮಾಡಿತ್ತು.

ಮಹಿಳಾ ವಿಭಾಗದಲ್ಲಿ ಶ್ರೇಯಸಿ ಸಿಂಗ್, ರಾಜೇಶ್ವರಿ ಕುಮಾರಿ ಮತ್ತು ಮನೀಷಾ ಕೀರ್ ಕಜಕಸ್ತಾನದ ಸರ್ಸೆಂಕುಲ್ ರಿಸ್ಬೆಕೊವಾ, ಐಜಾನ್ ಡೊಸ್ಮನ್‌ಬೆಟೋವ ಮತ್ತು ಮರಿಯಾ ಮಿಟ್ರಿಯೆಂಕೊ ಅವರನ್ನು 6–0ಯಿಂದ ಮಣಿಸಿ ಚಿನ್ನದ ಪದಕ ಗೆದ್ದುಕೊಂಡರು.

ಶ್ರೇಯಸಿ, ರಾಜೇಶ್ವರಿ ಮತ್ತು ಮನೀಷಾ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಾಂಪಿಯನ್ ಆಗಿದ್ದರು. ಶ್ರೇಯಸಿ ಮತ್ತು ಮನೀಷಾ ಫೈನಲ್‌ನಲ್ಲಿ ಅತ್ಯಮೋಘ ಸಾಮರ್ಥ್ಯ ತೋರಿದರು. ಒಂದೆರಡು ಬಾರಿ ಮಾತ್ರ ವಿಚಲಿತರಾಗಿದ್ದ ಅವರು ಉಳಿದಂತೆ ಎದುರಾಳಿಗಳನ್ನು ದಂಗುಬಡಿಸಿದರು. ಭಾರತ ಒಟ್ಟಾರೆ 321 ಸ್ಕೋರ್ ಗಳಿಸಿತ್ತು.

ರ‍್ಯಾಪಿಡ್ ಫೈರ್ ಪಿಸ್ತೂಲ್‌ನಲ್ಲಿ ಬೆಳ್ಳಿ: ಪುರುಷರ 25 ಮೀಟರ್ಸ್ ರ‍್ಯಾಪಿಡ್ ಫೈರ್ ಪಿಸ್ತೂಲ್ ತಂಡ ವಿಭಾಗದಲ್ಲಿ ಭಾರತ ಬೆಳ್ಳಿ ಪದಕಕ್ಕೆ ಸಮಾಧಾನಪಟ್ಟುಕೊಂಡಿತು. ವಿಜಯವೀರ್ ಸಿಧು, ಗುರುಪ್ರೀತ್ ಸಿಂಗ್ ಮತ್ತು ಆದರ್ಶ್ ಸಿಂಗ್ ಫೈನಲ್‌ನಲ್ಲಿ ಅಮೆರಿಕದ ಕೇತ್ ಸ್ಯಾಂಡರ್ಸನ್, ಜ್ಯಾಕ್ ಹೊಬ್ಸನ್ ಮತ್ತು ಹೆನ್ರಿ ಟರ್ನರ್ ವಿರುದ್ಧ 2-10 ರಲ್ಲಿ ಸೋತರು. ಅರ್ಹತಾ ಸುತ್ತಿನ ಎರಡನೇ ಸ್ಪರ್ಧೆಯಲ್ಲಿ ಭಾರತದ ಶೂಟರ್‌ಗಳು 552 ಸ್ಕೋರ್ ಸಂಪಾದಿಸಿ ಎರಡನೇ ಸ್ಥಾನ ಗಳಿಸಿದ್ದರು. 571 ಸ್ಕೋರ್‌ಗಳೊಂದಿಗೆ ಅಮೆರಿಕ ಎರಡನೇ ಸ್ಥಾನ ಗಳಿಸಿತ್ತು.

ಒಲಿಂಪಿಕ್ಸ್‌ಗೆ ತಂಡಗಳ ಆಯ್ಕೆ 3ರಂದು

ಟೋಕಿಯೊ ಒಲಿಂಪಿಕ್ಸ್‌ಗೆ ಭಾರತ ತಂಡಗಳ ಆಯ್ಕೆ ಏಪ್ರಿಲ್ ಮೂರರಂದು ನಡೆಯಲಿದೆ ಎಂದು ಶೂಟಿಂಗ್ ಫೆಡರೇಷನ್ ಅಧ್ಯಕ್ಷ ರಣಿಂದರ್ ಸಿಂಗ್ ತಿಳಿಸಿದ್ದಾರೆ. ಕೋವಿಡ್–19ರ ಆತಂಕ ಇರುವುದರಿಂದ ಪ್ರತಿ ವಿಭಾಗದಲ್ಲೂ ಇಬ್ಬರು ಕಾಯ್ದಿರಿಸಿದ ಶೂಟರ್‌ಗಳನ್ನು ಆಯ್ಕೆ ಮಾಡಲಾಗುವುದು ಎಂದು ಅವರು ವಿವರಿಸಿದ್ದಾರೆ.

ವಿಶ್ವಕಪ್‌ನಲ್ಲಿ 15 ಒಲಿಂಪಿಕ್ ಕೋಟಾಗಳನ್ನು ಗಳಿಸಲಾಗಿದೆಯಾದರೂ ಫೆಡರೇಷನ್‌ನ ಆಯ್ಕೆ ನೀತಿ ಪ್ರಕಾರ ಎಲ್ಲ ಟೂರ್ನಿಗಳು ಮತ್ತು ಆಯ್ಕೆ ಟ್ರಯಲ್ಸ್‌ಗಳಲ್ಲಿ ಗಳಿಸಿದ ಸ್ಕೋರ್‌ಗಳ ಆಧಾರದಲ್ಲಿ ಅಂತಿಮ ಆಯ್ಕೆ ನಡೆಯಲಿದೆ.

ಫುಟ್‌ಬಾಲ್: ಭಾರತ -ಯುಎಇ ಹಣಾಹಣಿ

ದುಬೈ (ಪಿಟಿಐ): ಒಮಾನ್ ಎದುರು ಎಡವಟ್ಟು ಮಾಡಿಕೊಂಡು ಸೋಲಿಗೆ ಒಳಗಾಗಿದ್ದ ಭಾರತ ಫುಟ್‌ಬಾಲ್ ತಂಡ ಎರಡನೇ ಅಂತರರಾಷ್ಟ್ರೀಯ ಸ್ನೇಹಪರ ಪಂದ್ಯದಲ್ಲಿ ಸೋಮವಾರ ಯುಎಇ ಎದುರು ಸೆಣಸಲಿದೆ. ಇಲ್ಲಿನ ಜಬೀಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಹಣಾಹಣಿಯಲ್ಲಿ ಭಾರತ ತಂಡ ಮತ್ತೊಮ್ಮೆ ಯುವ ಆಟಗಾರರಿಗೆ ಹೆಚ್ಚು ಅವಕಾಶ ನೀಡುವ ಸಾಧ್ಯತೆ ಇದೆ.

ಕೋವಿಡ್‌ನಿಂದ ಒಂದು ವರ್ಷ ಅಂತರರಾಷ್ಟ್ರೀಯ ಸ್ಪರ್ಧಾಕಣದಿಂದ ದೂರ ಉಳಿದಿದ್ದ ಭಾರತ ಮೂರು ದಿನಗಳ ಹಿಂದೆ ನಡೆದಿದ್ದ ಮೊದಲ ಪಂದ್ಯದಲ್ಲಿ ಒಮಾನ್ ಎದುರು 1-1ರ ಡ್ರಾ ಸಾಧಿಸಿತ್ತು. ಯುಎಇ ತಂಡ ಏಷ್ಯಾದಲ್ಲಿ ಎಂಟನೇ ರ‍್ಯಾಂಕ್ ಹೊಂದಿದ್ದು ಫಿಫಾ ಪಟ್ಟಿಯಲ್ಲಿ 74ನೇ ಸ್ಥಾನದಲ್ಲಿದೆ. ಭಾರತ 104ನೇ ಸ್ಥಾನ ಹೊಂದಿದೆ. ಒಂದು ದಶಕದಲ್ಲಿ ಉಭಯ ತಂಡಗಳು ನಾಲ್ಕು ಬಾರಿ ಮುಖಾಮುಖಿಯಾಗಿದ್ದು ಮೂರರಲ್ಲಿ ಯುಎಇ ಜಯ ಸಾಧಿಸಿದೆ. ಒಂದು ಪಂದ್ಯ ಡ್ರಾಗೊಂಡಿದೆ.

ಎದುರಾಳಿಗಳು ಪ್ರಬಲರಾಗಿದ್ದರೂ ಹೊಸ ಆಟಗಾರರಿಗೆ ಅವಕಾಶ ನೀಡುವುದರಿಂದ ಹಿಂದೆ ಸರಿಯುವುದಿಲ್ಲ ಎಂದು ಕೋಚ್ ಇಗರ್ ಸ್ಟಿಮ್ಯಾಕ್ ತಿಳಿಸಿದ್ದಾರೆ. ಅನುಭವಿ ಡಿಫೆಂಡರ್ ಸಂದೇಶ್ ಜಿಂಗಾನ್ ಅವರಿಗೆ ಆಡುವ 11ರಲ್ಲಿ ಸ್ಥಾನ ನೀಡಲಾಗುವುದಿಲ್ಲ. ಅಮರಿಂದರ್ ಸಿಂಗ್ ಬದಲಿಗೆ ಗುರುಪ್ರೀತ್ ಸಿಂಗ್ ಗೋಲ್ ಕೀಪಿಂಗ್ ಮಾಡಲಿದ್ದು ನಾಯಕತ್ವವನ್ನು ನಿಭಾಯಿಸುವರು ಎಂದು ಅವರು ವಿವರಿಸಿದ್ದಾರೆ.

ಪಂದ್ಯ ಆರಂಭ: ರಾತ್ರಿ 8.30 (ಭಾರತೀಯ ಕಾಲಮಾನ);
ನೇರ ಪ್ರಸಾರ: ಯೂರೊ ಸ್ಪೋರ್ಟ್ಸ್

ಕೋವಿಡ್‌ನಿಂದ ಗುಣಮುಖ: ಚೆಟ್ರಿ

ನವದೆಹಲಿ (ಪಿಟಿಐ): ಕೊರೊನಾ ಸೋಂಕಿಗೆ ಒಳಗಾಗಿದ್ದ ತಾವು ಈಗ ಸಂಪೂರ್ಣ ಗುಣಮುಖರಾಗಿರುವುದಾಗಿ ಭಾರತ ಫುಟ್‌ಬಾಲ್ ತಂಡದ ನಾಯಕ ಮತ್ತು ಫಾರ್ವರ್ಡ್ ವಿಭಾಗದ ಆಟಗಾರ ಸುನಿಲ್ ಚೆಟ್ರಿ ಭಾನುವಾರ ತಿಳಿಸಿದ್ದಾರೆ.

ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವನ್ನು ಮುನ್ನಡೆಸಿದ್ದ ಚೆಟ್ರಿ ಅವರಿಗೆ ಮಾರ್ಚ್ 11ರಂದು ಕೋವಿಡ್–19 ಇರುವುದು ಖಾತರಿಯಾಗಿತ್ತು. ಹೀಗಾಗಿ ಒಮಾನ್ ಮತ್ತು ಯುಎಇ ಎದುರಿನ ಸೌಹಾರ್ದ ಪಂದ್ಯಗಳಲ್ಲಿ ಆಡದೇ ಇರಲು ನಿರ್ಧರಿಸಿದ್ದರು.

'ಕೋವಿಡ್ ಪರೀಕ್ಷೆಯ ವರದಿ ನೆಗೆಟಿವ್ ಬಂದಿದೆ. ಎರಡು ಅಂತರರಾಷ್ಟ್ರೀಯ ಪಂದ್ಯಗಳಿಂದ ದೂರ ಉಳಿಯಬೇಕಾಗಿ ಬಂದಿದ್ದರಲ್ಲಿ ಬೇಸರವಿದೆ. ಆದರೆ ಈಗ ಮತ್ತೆ ಕಣಕ್ಕೆ ಇಳಿಯಲು ಸಜ್ಜಾಗಿದ್ದೇನೆ. ಬೇಗನೇ ಚೇತರಿಸಿಕೊಳ್ಳಿ ಎಂದು ಸಂದೇಶ ಕಳುಹಿಸಿದ ಎಲ್ಲರಿಗೂ ಅಭಾರಿಯಾಗಿದ್ದೇನೆ. ಎಲ್ಲರೂ ಮಾಸ್ಕ್ ಧರಿಸಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ' ಎಂದು ಸುನಿಲ್ ಭಾನುವಾರ ಟ್ವೀಟ್ ಮಾಡಿದ್ದಾರೆ.

ಸ್ವಸ್ತಿಕ್ ಯೂನಿಯನ್ ಸಿಸಿಗೆ ಪ್ರಶಸ್ತಿ

ಬೆಂಗಳೂರು: ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್ (2) ತಂಡವು ಕೆಎಸ್‌ಸಿಎ ಗುಂಪು 1, 2, 3ನೇ ಡಿವಿಷನ್ ಅಂತರಕ್ಲಬ್ 16 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು. ಭಾನುವಾರ ನಡೆದ ಫೈನಲ್‌ನಲ್ಲಿ 7 ವಿಕೆಟ್‌ಗಳಿಂದ ವಲ್ಚರ್ಸ್ ಕ್ರಿಕೆಟ್ ಕ್ಲಬ್ ತಂಡವನ್ನು ಪರಾಭವಗೊಳಿಸಿತು.

ಸಂಕ್ಷಿಪ್ತ ಸ್ಕೋರು: ವಲ್ಚರ್ಸ್ ಕ್ರಿಕೆಟ್ ಕ್ಲಬ್: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 181 (ಕಾರ್ತಿಕೇಯ ಕೆ.ಪಿ. ಔಟಾಗದೆ 97; ಮಾಂಕಾಳೇಶ್ ಆರ್.ಜೆ. 38ಕ್ಕೆ 5, ಸಚಿನ್ ಎಸ್.ಎ. 33ಕ್ಕೆ 2). ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್ (2): 33.3 ಓವರ್‌ಗಳಲ್ಲಿ 3 ವಿಕೆಟ್‌ಗೆ 182 (ಶಿವಂ ಎಂ.ಬಿ. 33, ಸೃಜನ್ ನಂದನ್ ಔಟಾಗದೆ 98, ಅನೀಶ್ ಕೆ.ಎನ್. 37; ಅನ್ಸ್ ಐಮಾ 53ಕ್ಕೆ 2). ಫಲಿತಾಂಶ: ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್‌ಗೆ ಏಳು ವಿಕೆಟ್‌ಗಳ ಜಯ ಮತ್ತು ಪ್ರಶಸ್ತಿ.

ಪಾಯಲ್ ಚವಾಣ್ ಚಿನ್ನದ ಸ್ಪ್ರಿಂಟ್

ಬೆಂಗಳೂರು: ವಿಜಯಪುರ ಕ್ರೀಡಾ ನಿಲಯದ ಪಾಯಲ್ ಚವಾಣ್ ಅವರು ಹೈದರಾಬಾದ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಚಿನ್ನದ ನಗೆ ಬೀರಿದರು. 14 ವರ್ಷದೊಳಗಿನ ಸಬ್ ಜೂನಿಯರ್ ಬಾಲಕಿಯರ ಫ್ಲೈಯಿಂಗ್ ಸ್ಪ್ರಿಂಟ್ ವಿಭಾಗದಲ್ಲಿ ಅವರು ಈ ಸಾಧನೆ ಮಾಡಿದರು.

ಪಾಯಲ್

200 ಮೀಟರ್ಸ್ ದೂರವನ್ನು ಪಾಯಲ್ 15.42 ಸೆಕೆಂಡುಗಳಲ್ಲಿ ತಲುಪಿದರು. ಸಬ್ ಜೂನಿಯರ್ ಬಾಲಕರ ಫ್ಲೈಯಿಂಗ್ ಸ್ಪ್ರಿಂಟ್‌ನಲ್ಲಿ ಇದೇ ಕ್ರೀಡಾನಿಲಯದ ಸುಜಲ್ ಜಾಧವ್ ಕಂಚಿನ ಪದಕ ಗೆದ್ದುಕೊಂಡರು. 13.32 ಸೆಕೆಂಡುಗಳಲ್ಲಿ ಅವರು ಗುರಿ ಮುಟ್ಟಿದರು. ಎರಡು ಕಿಮೀ ವೈಯಕ್ತಿಕ ಪರ್ಸ್ಯೂಟ್‌ನಲ್ಲಿ ಅವರು ಕಂಚಿನ ಪದಕ ಗೆದ್ದುಕೊಂಡರು.

ವಿಜಯಪುರದ ಅಂಕಿತಾ ರಾಥೋಡ್ 16 ವರ್ಷದೊಳಗಿನ ಸಬ್‌ಜೂನಿಯರ್ ಬಾಲಕಿಯರ ಎರಡು ಕಿಲೋಮೀಟರ್ಸ್ ವೈಯಕ್ತಿಕ ಪರ್ಸ್ಯೂಟ್‌ನಲ್ಲಿ (2:49.796 ನಿ) ಬೆಳ್ಳಿ ಗೆದ್ದರು. ಅಂಕಿತಾ 500 ಮೀ ಟೈಮ್ ಟ್ರಯಲ್‌ನಲ್ಲೂ (41.250 ಸೆ) ಕಂಚು ಗಳಿಸಿದರು. 16 ವರ್ಷದೊಳಗಿನ ಸಬ್‌ಜೂನಿಯರ್ ಬಾಲಕರ ಎರಡು ಕಿಲೋಮೀಟರ್ಸ್ ವೈಯಕ್ತಿಕ ಪರ್ಸ್ಯೂಟ್‌ನಲ್ಲಿ ಜಮಖಂಡಿಯ ಮಲ್ಲಿಕಾರ್ಜುನ ಯಾದವಾಡ (2:30.230 ನಿ) ಕಂಚಿನ ಪದಕ ಗಳಿಸಿದರು. 500 ಮೀ ಟೈಮ್ ಟ್ರಯಲ್‌ನಲ್ಲೂ ಅವರು (36.218ಸೆ) ಕಂಚಿನ ಪದಕ ಗೆದ್ದರು.

ಅಂಕಣದಲ್ಲೇ ಕೊನೆಯುಸಿರೆಳೆದ ವಾಲಿಬಾಲ್ ಆಟಗಾರ

ದೇವರಾಜ್

ಕಾಪು (ಉಡುಪಿ ಜಿಲ್ಲೆ): ಇಲ್ಲಿನ ಬನ್ನಂಜೆಯಲ್ಲಿ ಶನಿವಾರ ರಾತ್ರಿ ನಡೆದ ವಾಲಿಬಾಲ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಟವಾಡುತ್ತಿದ್ದ ಕುರ್ಕಾಲು ಸುಭಾಸ್ ನಗರದ ದೇವರಾಜ್ (33) ಅಂಕಣದಲ್ಲೇ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಶನಿವಾರ ಇನ್ನಂಜೆ ಚಾಲೆಂಜರ್ಸ್ ತಂಡದ ಪರ ಸ್ಪರ್ಧಿಸಿದ್ದರು. ಪಂದ್ಯದ ವೇಳೆ ಕುಸಿದು ಬಿದ್ದ ಅವರನ್ನು ತಕ್ಷಣವೇ ಉಡುಪಿಯ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಅಷ್ಟರಲ್ಲಿಯೇ ಅವರು ಕೊನೆಯುಸಿರೆಳೆದಿದ್ದರು.

ನಾಲ್ಕು ತಿಂಗಳ ಹಿಂದೆ ದೇವರಾಜ್ ತಂದೆ ನಿಧನರಾಗಿದ್ದರು. ತಾಯಿ ಮತ್ತು ಐದು ಮಂದಿ ಸಹೋದರಿಯರು ಇದ್ದಾರೆ.

ಮೂರನೇ ಏಕದಿನ ಪಂದ್ಯದಲ್ಲಿ ರೋಚಕ ಗೆಲುವು; ರಿಷಭ್–ಹಾರ್ದಿಕ್ ಜೊತೆಯಾಟ

ಭಾರತಕ್ಕೆ ಸರಣಿ ಜಯದ ರಂಗು

ಪುಣೆ (ಪಿಟಿಐ): ಭಾನುವಾರ ರಾತ್ರಿ ಕೊನೆಯ ಓವರ್‌ನವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ಜಯ ಸಾಧಿಸಿದ ವಿರಾಟ್ ಕೊಹ್ಲಿ ಪಡೆಯು ಇಂಗ್ಲೆಂಡ್ ತಂಡದ ವಿರುದ್ಧದ ಏಕದಿನ ಸರಣಿಯನ್ನು ಗೆದ್ದಿತು. ಹೋಳಿ ಹಬ್ಬದ ಸಂಭ್ರಮ ಮತ್ತಷ್ಟು ರಂಗೇರಿತು.

ಇದರೊಂದಿಗೆ ಪ್ರವಾಸಿ ಬಳಗದ ಸ್ಯಾಮ್ ಕರನ್ ವಿರೋಚಿತ ಹೋರಾಟ ಇತಿಹಾಸದ ಪುಟ ಸೇರಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆದ ಮೂರನೇ ಪಂದ್ಯದಲ್ಲಿ ಭಾರತ ತಂಡವು 7 ರನ್‌ಗಳಿಂದ ಜಯಿಸಿತು. 2–1ರಿಂದ ಸರಣಿ ಗೆದ್ದಿತು. ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಮತ್ತು ಟಿ20 ಸರಣಿಗಳನ್ನೂ ಭಾರತ ಜಯಿಸಿತ್ತು.

ಸತತ ಮೂರನೇ ಪಂದ್ಯದಲ್ಲಿಯೂ ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶಿಖರ್ ಧವನ್, ರಿಷಭ್ ಪಂತ್ ಮತ್ತು ಹಾರ್ದಿಕ್ ಪಾಂಡ್ಯ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಭಾರತ ತಂಡವು 48.2 ಓವರ್‌ಗಳಲ್ಲಿ 329 ರನ್ ಗಳಿಸಿತು. ಅದಕ್ಕುತ್ತರವಾಗಿ ಇಂಗ್ಲೆಂಡ್ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 322 ರನ್ ಗಳಿಸಿತು.

ಈ ಪಂದ್ಯದಲ್ಲಿ ಸುಲಭವಾಗಿ ಜಯಿಸಬಹುದಾಗಿದ್ದ ಅವಕಾಶ ಭಾರತಕ್ಕೆ ಇತ್ತು. ಆದರೆ, ಕಳಪೆ ಫೀಲ್ಡಿಂಗ್ ಮತ್ತು ಕೈಚೆಲ್ಲಿದ ಐದು ಕ್ಯಾಚ್‌ಗಳಿಂದಾಗಿ ಕಠಿಣ ಹಾದಿ ಸವೆಸಿ ಜಯ ಸಾಧಿಸಬೇಕಾಯಿತು. ತಮಗೆ ಲಭಿಸಿದ ಮೂರು ಜೀವದಾನಗಳ ಲಾಭ ಪಡೆದ ಸ್ಯಾಮ್ ಕರನ್ (ಔಟಾಗದೆ 95) ತಮ್ಮ ತಂಡವನ್ನು ಗೆಲುವಿನಂಚಿಗೆ ತಂದಿದ್ದರು. ಅವರಿಗೆ ಒಂಬತ್ತನೇ ವಿಕೆಟ್ ಜೊತೆಯಾಟದಲ್ಲಿ ದಿಟ್ಟ ಬೆಂಬಲ ನೀಡಿದ್ದ ಮಾರ್ಕ್‌ವುಡ್ ಕೊನೆಯ ಓವರ್‌ನಲ್ಲಿ ರನ್‌ಔಟ್ ಆದಾಗಲೇ ಭಾರತದ ಪಾಳಯದಲ್ಲಿ ಮತ್ತೆ ಜಯದ ವಿಶ್ವಾಸ ಮೂಡಿತು. 50ನೇ ಓವರ್ ಬೌಲಿಂಗ್ ಮಾಡಿದ ತಂಗರಸು ನಟರಾಜನ್ ದುಬಾರಿಯಾಗದ ಕಾರಣ ವಿರಾಟ್ ಕೊಹ್ಲಿ ನಿಟ್ಟುಸಿರು ಬಿಟ್ಟರು. ಏಕೆಂದರೆ ತಮ್ಮ ಮೊದಲ ಸ್ಪೆಲ್‌ನಲ್ಲಿ ನಟರಾಜನ್ ಬ್ಯಾಟ್ಸ್‌ಮನ್‌ಗಳಿಂದ ಹೆಚ್ಚು ದಂಡನೆಗೆ ಒಳಗಾಗಿದ್ದರು.

ಶಾರ್ದೂಲ್ ಠಾಕೂರ್ ಮತ್ತು ಭುವನೇಶ್ವರ್ ಕುಮಾರ್ ಉತ್ತಮ ಬೌಲಿಂಗ್ ಕೂಡ ತಂಡದ ಜಯಕ್ಕೆ ಮಹತ್ವದ ಕಾಣಿಕೆಯಾಯಿತು.

ಪಂತ್–ಪಾಂಡ್ಯ ಅಬ್ಬರ: ಶತಕದ ಜೊತೆಯಾಟವಾಡಿದ ರೋಹಿತ್ ಶರ್ಮಾ ಮತ್ತು ಶಿಖರ್ ಧವನ್ ಉತ್ತಮ ಆರಂಭ ನೀಡಿದರು. ಈ ಜೊತೆಯಾಟ ಮುರಿದುಬಿದ್ದ ನಂತರ, ನಾಯಕ ವಿರಾಟ್ ಕೊಹ್ಲಿ, ಹೋದ ಪಂದ್ಯದಲ್ಲಿ ಶತಕ ಹೊಡೆದಿದ್ದ ಕೆ.ಎಲ್. ರಾಹುಲ್ ಬೇಗನೆ ನಿರ್ಗಮಿಸಿದರು. ಇಬ್ಬರೂ ತಲಾ ಏಳು ರನ್ ಗಳಿಸಿದರು. ಈ ಹಂತದಲ್ಲಿ ಜೊತೆಗೂಡಿದ ರಿಷಭ್ ಪಂತ್ (78; 62ಎ) ಮತ್ತು ಹಾರ್ದಿಕ್ ಪಾಂಡ್ಯ (64; 44ಎ) ಆಟಕ್ಕೆ ಇಂಗ್ಲೆಂಡ್ ಬೌಲರ್‌ಗಳು ಹೌಹಾರಿದರು. ಪಂತ್ 44 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಆದರೆ ಅವರಿಗಿಂತ ವೇಗವಾಗಿ ಬ್ಯಾಟಿಂಗ್ ಮಾಡಿದ ಹಾರ್ದಿಕ್ ಕೇವಲ 36 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಐದನೇ ವಿಕೆಟ್ ಜೊತೆಯಾಟದಲ್ಲಿ 99 ರನ್ ಪೇರಿಸಿದರು. ಇಬ್ಬರೂ ತಲಾ ನಾಲ್ಕು ಸಿಕ್ಸರ್ ಸಿಡಿಸಿದರು.

ಶಿಖರ್–ರೋಹಿತ್ ಶುಭಾರಂಭ: ಆರಂಭಿಕ ಜೋಡಿ ಶಿಖರ್ ಧವನ್ ಮತ್ತು ರೋಹಿತ್ ಶರ್ಮಾ ಭಾರತದ ಇನಿಂಗ್ಸ್‌ಗೆ ಉತ್ತಮ ಅಡಿಪಾಯ ಹಾಕಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 103 ರನ್‌ಗಳನ್ನು ಕಲೆಹಾಕಿದರು.

ಮೊದಲ ಪಂದ್ಯದಲ್ಲಿ 98 ರನ್ ಗಳಿಸಿದ್ದ ಶಿಖರ್ ಇಲ್ಲಿಯೂ ಅರ್ಧಶತಕ ಹೊಡೆದರು. 56 ಎಸೆತಗಳಲ್ಲಿ 67 ರನ್ ಗಳಿಸಿದರು. ಅದರಲ್ಲಿ 10 ಬೌಂಡರಿಗಳಿದ್ದವು. ರೋಹಿತ್ 6 ಬೌಂಡರಿ ಹೊಡೆದರು. ಆದರೆ ಅರ್ಧಶತಕ ಗಳಿಸುವ ಅವರ ಗುರಿಗೆ ಸ್ಪಿನ್ನರ್ ರಶೀದ್ ಅಡ್ಡಿಯಾದರು. ಗೂಗ್ಲಿ ಎಸೆತವನ್ನು ಆಡುವಲ್ಲಿ ರೋಹಿತ್ ವಿಫಲರಾದರು.

ಕರನ್ ದಾಖಲೆ: ಇಂಗ್ಲೆಂಡ್ ಸ್ಯಾಮ್ ಕರನ್ ಏಕದಿನ ಮಾದರಿಯಲ್ಲಿ ಎಂಟು ಅಥವಾ ಅದಕ್ಕಿಂತ ಕೆಳಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ಅತಿ ಹೆಚ್ಚು ರನ್ (ಔಟಾಗದೆ 95) ಗಳಿಸಿದ ಆಟಗಾರ ಎನಿಸಿಕೊಂಡರು.

ಹಾರ್ದಿಕ್ ಪಾಂಡ್ಯ ಹಾಗೂ ರಿಷಭ್ ಪಂತ್– ರಾಯಿಟರ್ಸ್ ಚಿತ್ರ

8 ಅಥವಾ ಅದಕ್ಕಿಂತ ಕೆಳಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ಹೆಚ್ಚು ರನ್ ಗಳಿಸಿದವರು

ಆಟಗಾರ	ತಂಡ	ರನ್	ಎದುರಾಳಿ	ಸ್ಥಳ	ವರ್ಷ
ಸ್ಯಾಮ್ ಕರನ್	ಇಂಗ್ಲೆಂಡ್	95*	ಭಾರತ	ಪುಣೆ	2021
ಕ್ರಿಸ್ ವೋಕ್ಸ್	ಇಂಗ್ಲೆಂಡ್	95*	ಶ್ರೀಲಂಕಾ	ನಾಟಿಂಗ್‌ಹ್ಯಾಂ	2016
ಆ್ಯಂಡ್ರೆ ರಸೆಲ್	ವೆಸ್ಟ್ ಇಂಡೀಸ್	92*	ಭಾರತ	ನಾರ್ತ್‌ಸೌಂಡ್	2011
ನೇಥನ್ ಕೌಲ್ಟರ್‌ನೈಲ್	ಆಸ್ಟ್ರೇಲಿಯಾ	92	ವೆಸ್ಟ್ ಇಂಡೀಸ್	ನಾಟಿಂಗ್‌ಹ್ಯಾಂ	2019
ರವಿ ರಾಮ್‌ಪಾಲ್	ವೆಸ್ಟ್ ಇಂಡೀಸ್	86*	ಭಾರತ	ವಿಶಾಖಪಟ್ಟಣ	2011

ಸ್ಯಾಮ್ ಕರನ್–ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ಭಾರತ 329 (48.2 ಓವರ್‌ಗಳಲ್ಲಿ)

ರೋಹಿತ್ ಶರ್ಮಾ ಬಿ ಆದಿಲ್ ರಶೀದ್	37
ಶಿಖರ್ ಧವನ್ ಸಿ ಮತ್ತು ಬಿ ಆದಿಲ್ ರಶೀದ್	67
ವಿರಾಟ್ ಕೊಹ್ಲಿ ಬಿ ಮೋಯಿನ್ ಅಲಿ	7
ರಿಷಭ್ ಪಂತ್ ಸಿ ಜೋಸ್ ಬಟ್ಲರ್ ಬಿ ಸ್ಯಾಮ್ ಕರನ್	78
ಕೆ.ಎಲ್.ರಾಹುಲ್ ಸಿ ಮೋಯಿನ್ ಅಲಿ ಬಿ ಲಿಯಾಮ್ ಲಿವಿಂಗ್‌ಸ್ಟೋನ್	7
ಹಾರ್ದಿಕ್ ಪಾಂಡ್ಯ ಬಿ ಬೆನ್ ಸ್ಟೋಕ್ಸ್	64
ಕೃಣಾಲ್ ಪಾಂಡ್ಯ ಸಿ ಜೇಸನ್ ರಾಯ್ ಬಿ ಮಾರ್ಕ್ ವುಡ್	25
ಶಾರ್ದೂಲ್ ಠಾಕೂರ್ ಸಿ ಜೋಸ್ ಬಟ್ಲರ್ ಬಿ ಮಾರ್ಕ್ ವುಡ್	30
ಭುವನೇಶ್ವರ್ ಕುಮಾರ್ ಸಿ ಸ್ಯಾಮ್ ಕರನ್ ಬಿ ರೀಸ್ ಟಾಪ್ಲಿ	3
ಪ್ರಸಿದ್ಧ ಕೃಷ್ಣ ಬಿ ಮಾರ್ಕ್ ವುಡ್	0
ಟಿ. ನಟರಾಜನ್ ಔಟಾಗದೆ	0
ಇತರೆ (ಲೆಗ್‌ಬೈ 1, ವೈಡ್ 10)	11

ವಿಕೆಟ್ ಪತನ: 1–103 (ರೋಹಿತ್, 14.4), 2–117 (ಧವನ್, 16.4), 3–121 (ವಿರಾಟ್, 17.4), 4–157 (ರಾಹುಲ್, 24.2), 5–256 (ರಿಷಭ್, 35.6), 6–276 (ಹಾರ್ದಿಕ್, 38.6), 7–321 (ಶಾರ್ದೂಲ್, 45.6), 8–328 (ಕೃಣಾಲ್, 47.2), 9–329 (ಪ್ರಸಿದ್ಧ, 47.6), 10–329 (ಭುವನೇಶ್ವರ, 48.2)

ಬೌಲಿಂಗ್: ಸ್ಯಾಮ್ ಕರನ್ 5–0–43–1, ರೀಸ್ ಟಾಪ್ಲಿ 9.2–0–66–1, ಮಾರ್ಕ್ ವುಡ್ 7–1–34–3, ಬೆನ್ ಸ್ಟೋಕ್ಸ್ 7–0–45–1, ಆದಿಲ್ ರಶೀದ್ 10–0–81–2, ಮೋಯಿನ್ ಅಲಿ 7–0–39–1, ಲಿಯಾಮ್ ಲಿವಿಂಗ್‌ಸ್ಟೋನ್ 3–0–20–1

ಇಂಗ್ಲೆಂಡ್ 9ಕ್ಕೆ 322 (50 ಓವರ್‌ಗಳಲ್ಲಿ)

ಜೇಸನ್ ರಾಯ್ ಬಿ ಭುವನೇಶ್ವರ್ ಕುಮಾರ್	14
ಜಾನಿ ಬೆಸ್ಟೊ ಎಲ್‌ಬಿಡಬ್ಲ್ಯು ಭುವನೇಶ್ವರ್ ಕುಮಾರ್	1
ಬೆನ್ ಸ್ಟೋಕ್ಸ್ ಸಿ ಶಿಖರ್ ಧವನ್ ಬಿ ನಟರಾಜನ್	35
ಡೇವಿಡ್ ಮಲಾನ್ ಸಿ ರೋಹಿತ್ ಶರ್ಮಾ ಬಿ ಶಾರ್ದೂಲ್ ಠಾಕೂರ್	50
ಜೋಸ್ ಬಟ್ಲರ್ ಎಲ್‌ಬಿಡಬ್ಲ್ಯು ಬಿ ಶಾರ್ದೂಲ್ ಠಾಕೂರ್	15
ಲಿಯಾಮ್ ಲಿವಿಂಗ್‌ಸ್ಟೋನ್ ಸಿ ಮತ್ತು ಬಿ ಶಾರ್ದೂಲ್ ಠಾಕೂರ್	36
ಮೋಯಿನ್ ಅಲಿ ಸಿ ಹಾರ್ದಿಕ್ ಪಾಂಡ್ಯ ಬಿ ಭುವನೇಶ್ವರ್ ಕುಮಾರ್	29
ಸ್ಯಾಮ್ ಕರನ್ ಔಟಾಗದೆ	95
ಆದಿಲ್ ರಶೀದ್ ಸಿ ವಿರಾಟ್ ಕೊಹ್ಲಿ ಬಿ ಶಾರ್ದೂಲ್ ಠಾಕೂರ್	19
ಮಾರ್ಕ್ ವುಡ್ ರನ್ ಔಟ್ (ಹಾರ್ದಿಕ್ ಪಾಂಡ್ಯ/ರಿಷಭ್ ಪಂತ್)	14
ರೀಸ್ ಟಾಪ್ಲಿ ಔಟಾಗದೆ	1
ಇತರೆ (ಲೆಗ್ ಬೈ 1, ವೈಡ್ 12)	13

ವಿಕೆಟ್ ಪತನ: 1-14 (ಜೇಸನ್ ರಾಯ್, 0.6), 2-28 (ಜಾನಿ ಬೆಸ್ಟೊ, 2.6), 3-68 (ಬೆನ್ ಸ್ಟೋಕ್ಸ್, 10.3), 4-95 (ಜೋಸ್ ಬಟ್ಲರ್, 15.1), 5-155 (ಲಿಯಾಮ್ ಲಿವಿಂಗ್‌ಸ್ಟೋನ್, 23.5), 6-168 (ಡೇವಿಡ್ ಮಲಾನ್, 25.4), 7-200 (ಮೋಯಿನ್ ಅಲಿ, 30.3), 8-257 (ಆದಿಲ್ ರಶೀದ್, 39.2), 9-317 (ಮಾರ್ಕ್ ವುಡ್, 49.1)

ಬೌಲಿಂಗ್: ಭುವನೇಶ್ವರ್ ಕುಮಾರ್ 10–0–42–3, ಟಿ.ನಟರಾಜನ್ 10–0–73–1, ಪ್ರಸಿದ್ಧ ಕೃಷ್ಣ 7–0–62–0, ಶಾರ್ದೂಲ್ ಠಾಕೂರ್ 10–0–67–4, ಹಾರ್ದಿಕ್ ಪಾಂಡ್ಯ 9–0–48–0, ಕೃಣಾಲ್ ಪಾಂಡ್ಯ 4–0–29–0

ಫಲಿತಾಂಶ: ಭಾರತಕ್ಕೆ 7 ರನ್‌ಗಳ ಜಯ; 2–1 ಅಂತರದಲ್ಲಿ ಸರಣಿ ಗೆಲುವು

ಪಂದ್ಯಶ್ರೇಷ್ಠ: ಸ್ಯಾಮ್ ಕರನ್

ಸರಣಿಯ ಉತ್ತಮ ಆಟಗಾರ: ಜಾನಿ ಬೆಸ್ಟೊ

ಸುದ್ದಿ 2 ನಿಮಿಷ

ಐಪಿಎಲ್‌ನಲ್ಲಿ ಆಡಲಿರುವ ಶಮಿ

ನವದೆಹಲಿ (ಪಿಟಿಐ): ಗಾಯದಿಂದ ಸಂಪೂರ್ಣ ಗುಣಮುಖರಾಗಿರುವ ಮಧ್ಯಮವೇಗಿ ಮೊಹಮ್ಮದ್ ಶಮಿ ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಹೋದ ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾ ಎದುರಿನ ಟೆಸ್ಟ್ ಪಂದ್ಯದಲ್ಲಿ ಅವರು ಬ್ಯಾಟಿಂಗ್ ಮಾಡುವ ಸಂದರ್ಭದಲ್ಲಿ ವೇಗಿ ಪ್ಯಾಟ್ ಕಮಿನ್ಸ್ ಎಸೆತವು ಬಡಿದು ಅವರ ಮಣಿಕಟ್ಟಿನ ಮೂಳೆ ಮುರಿದಿತ್ತು. ಆದ್ದರಿಂದ ಅವರು ಸರಣಿಯಿಂದ ಹೊರಬಂದಿದ್ದರು. ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಚಿಕಿತ್ಸೆ ಮತ್ತು ಪುನಶ್ಚೇತನದಲ್ಲಿ ಪಾಲ್ಗೊಂಡ ನಂತರ ಚೇತರಿಸಿಕೊಂಡಿದ್ದಾರೆ. ಮಾರ್ಚ್ 20ರಂದು ಎನ್‌ಸಿಎನಿಂದ ತಮ್ಮ ಅಭ್ಯಾಸದ ಕಣಕ್ಕೆ ಮರಳಿದ್ದಾರೆ.

‘ನಾನೀಗ ಸಂಪೂರ್ಣ ಫಿಟ್ ಆಗಿದ್ದೇನೆ. ಅಡಿಲೇಡ್ ಟೆಸ್ಟ್‌ನಲ್ಲಿ ಗಾಯಗೊಂಡಿದ್ದು ದುರದೃಷ್ಟಕರ. ಇದೆಲ್ಲವೂ ಆಟದಲ್ಲಿ ಸಾಮಾನ್ಯ. ಉಳಿದಂತೆ ಫಿಟ್‌ನೆಸ್ ಸಮಸ್ಯೆಯೇನೂ ಇಲ್ಲ’ ಎಂದರು.

‘ನಾನು ಸದಾ ಸಕಾರಾತ್ಮಕವಾಗಿ ಯೋಚಿಸುತ್ತೇನೆ. ಹೋದ ಋತುವಿನಲ್ಲಿ ನನ್ನ ಸಾಧನೆ ತೃಪ್ತಿಕರವಾಗಿತ್ತು. ಈ ಬಾರಿಯ ಐಪಿಎಲ್‌ನಲ್ಲಿಯೂ ಚೆನ್ನಾಗಿ ಆಡುತ್ತೇನೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ನಾನು ಎನ್‌ಸಿಎನಲ್ಲಿ ಹೆಚ್ಚು ಕಾಲ ಉಳಿದೆ. ಅಲ್ಲಿ ಉತ್ತಮ ಸೌಲಭ್ಯಗಳಿವೆ’ ಎಂದಿದ್ದಾರೆ.

ಬ್ಯಾಡ್ಮಿಂಟನ್: ಕೃಷ್ಣ–ವಿಷ್ಣು ರನ್ನರ್ ಅಪ್

ಪ್ಯಾರಿಸ್ (ಪಿಟಿಐ): ಭಾರತದ ಕೃಷ್ಣ ಪ್ರಸಾದ್ ಗರಗ್ ಮತ್ತು ವಿಷ್ಣುವರ್ಧನ ಗೌಡ್ ಇಲ್ಲಿ ಭಾನುವಾರ ಕೊನೆಗೊಂಡ ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರನ್ನರ್ ಅಪ್ ಆದರು. ಪುರುಷರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಅವರು ಇಂಗ್ಲೆಂಡ್‌ನ ಬೆನ್ ಲೇನ್ ಮತ್ತು ಸೀನ್ ವೆಂಡಿ ಜೋಡಿಗೆ ಮಣಿದರು.

ಉತ್ತಮ ಆರಂಭ ಕಂಡರೂ ಆ ಲಯವನ್ನು ಉಳಿಸಿಕೊಳ್ಳಲಾಗದ ಭಾರತದ ಜೋಡಿ 21-19, 14-21, 19-21ರಲ್ಲಿ ಸೋಲುಂಡರು. ನಾಲ್ಕನೇ ಶ್ರೇಯಾಂಕದ ಆಟಗಾರರ ಎದುರಿನ ಈ ಪಂದ್ಯ 56 ನಿಮಿಷ ನಡೆದಿತ್ತು.ಕೃಷ್ಣ ಮತ್ತು ವಿಷ್ಣು ಇದೇ ಮೊದಲ ಬಾರಿ ಜೊತೆಯಾಗಿ ಆಡಿದ್ದರು.

ಪ್ರಜಾವಾಣಿ ಕ್ಯಾಚ್ ಇಟ್.. ಕ್ರೀಡಾ ಕಥೆಗಳು

ಬೆಂಗಳೂರು, ರಿಕ್ಷಾ ಮತ್ತು ಮೈಕೆಲ್ ಕ್ಲರ್ಕ್

ಆಸ್ಟ್ರೇಲಿಯಾದ ಕ್ರಿಕೆಟಿಗ ಮೈಕೆಲ್ ಕ್ಲಾರ್ಕ್ ರಿಕ್ಷಾ ಚಾಲನೆ ಮಾಡುವುದನ್ನು ಕಲಿತದ್ದು ಎಲ್ಲಿ ಗೊತ್ತಾ? ಬೆಂಗಳೂರಿಗೂ ಮೈಕೆಲ್‌ಗೂ ಇರುವ ನಂಟು ಏನು? ಅವರಿಗೇಕೆ ಉದ್ಯಾನನಗರಿ ಅಚ್ಚುಮೆಚ್ಚು? ಇಲ್ಲಿ ನೋಡಿ..

QR ಕೋಡ್ ಸ್ಕ್ಯಾನ್ ಮಾಡಿ

Honda Motorcycle and Scooter India Pvt. Ltd., Registered Office: Commercial Complex II, Sector - 49-50, Golf Course Extension Road, Gurugram - 122018 (Haryana), India; Website: www.honda2wheelersindia.com; Customer Care: customercare@honda2wheelersindia.com

Honda Exclusive Authorised Dealerships: Ananda Honda - BOMMANAHALLI: 9738074162; HEBBAGODI: 9738074162; SARJAPUR RD: 9738074162; JIGANI: 9738066600; HOSUR ROAD: 9738066600; Anekal Honda - ANEKAL: 080-27830234, 9880417779; City Honda - ST. JOHNS ROAD: 25320623, 9480812350; H.R.B.R: 41614777, 9845941305; FRAZER TOWN: 9480812353; LALBAGH: 8884434200; Haiku Honda - DOMLUR: 49656565, 9342432156; INDIRANAGAR: 9343796289, 08049692323; Dhruvdesh Honda - MEKHRI CIRCLE: 40500700, 9972237311; THANISANDRA (NAGAWARA): 7353030333; YELAHANKA: 40551122, 9343968407; VIDYARANYAPURA: 8150866333, 8152866333; Planet Honda - RAJAJINAGAR: 08068898888, 9980927735; PEENYA: 08068898888, 9980927730; SUNKADAKATTE: 08068898888, 9980927728; BASAWESHWAR NAGAR: 08068898888, 9980927726; Raja Honda - KORAMANGALA: 08067329000,9035310055; Prime Honda - VIJAYNAGAR: 23010300, 8050503111; NAGARBHAVI: 23010700, 8095778000; KAMAKSHIPALYA: 080-23019700, 7829900444; Silicon Honda - RV ROAD: 26574467/68, 9844502222; BANSHANKARI: 9844502444, 8722279009; R.R. NAGAR: 9964388333, 9071174800; MONOTYPE: 7353744400, JAYANAGAR: 8722801626; Saphire Honda - JP NAGAR: 7026000002; BANNERAGHATTA RD: 08068818881; KANAKAPURA RD: 08068818881; PUTTENAHALLI: 08068818881; GOTTIGERE: 08068818881; VFM Honda - KR PURAM: 49499299, 9071858885; HENNUR ROAD: 9108989817, 9108989818; Tansi Honda - HOODI: 080-45510000, 7259030091; MARTHAHALLI: 080-67166600, 7259030093; VARTHUR RD: 08042620600, 9686573013; GUNJUR: 9606450642, 9606450641; Turbo Honda - DODDABALLAPURA: 7022038682; NELAMANAGALA: 080-27722333, 7022008894; Wings Honda - HOSKOTE: 7676907272; MALUR: 7676155600; TC PALYA: 9590815959; Sri Kausthub Honda - KOLAR: 08152-221414, 9900018515; KGF: 08153-266606, 9900092115; MULBAGAL: 9008941044; SRINIVASAPUR: 8495956515; Namma Honda - CHIKKABALLAPUR: 9606060610, 9900071211; CHINTAMANI: 9606060620, 9606060690; BAGEPALLI: 9611596112, 9611596110; Shankar Honda - GOWRIBIDANUR: 9900007422/33; SLN Honda - SHIDLAGATTA: 9986160961; Century Honda - TUMKUR: 7829767340, 8892610223; SIRA: 9620267057, 9538392767; GUBBI: 9620267051; Shantinath Honda - TUMKUR: 0816-2279979, 9449334359; KUNIGAL: 7022276603; KUNIGAL ROAD: 9844351599, 9844351399; Honey Honda - PAVAGADA: 9686724405; Annapoorna Honda - MADHUGIRI: 9886627429; Vignesh Honda - TIPTUR: 9448214014; TURUVEKERE: 9448214014; Sri Srinivasa Honda - CHIKKANAYAKANAHALLI: 8722522221; Prestige Honda - RAMNAGARA: 9606490030; KANAKAPURA: 9606036053; ART Honda - BIDADI: 9945966771, 9164871007; Springs Honda - KENGERI: 9513771114; Nideesh Honda - DEVANAHALLI: 9108871999, 9686608579.

For Bulk/Institutional enquiries, please write us at: institutionalsales@honda2wheelersindia.com